ಅಧ್ಯಕ್ಷರು—ಪಿ.ಡಬ್ಲ್ಯೂ.ಡಿ. ಮಿನಿಸ್ಟರು ಡಾಕ್ಟರ್ ಹತ್ತಿರ ಹೋಗಿದ್ದಾರೆ, ಲೇಟ್ ಆಗಿ ಬರುತ್ತೇನೆಂದು ಹೇಳಿದ್ದಾರೆ. ಅವರು ಬರಲಿ. ತಾವು ಸುಮ್ಮನೆ ಈ ರೀತಿ ಹೇಳಿದರೆ ಜವಾಬು ಹೇಗೆ ಹೇಳುವುದು,

Conditions of the people in Drought Affected Areas.

ಶ್ರೀ ಎಚ್. ಡಿ ದೇವೇಗೌಡ (ಹೊಳೆನರಸೀಪುರ)–ಸಭೆಯಲ್ಲಿ ಕ್ಷಾಮ ಪರಿಹಾರ ಪರಿಸ್ಥಿತಿಗೆ ಸಂಬಂಧಪಟ್ಟ ಚರ್ಚೆ ಆಗತಕ್ಕಂಥ ಕಾಲದಲ್ಲಿ ಏನು ಘಟನೆ ನಡೆಯಿತು ಅದರ ಬಗ್ಗೆ ತಮ್ಮಲ್ಲಿ ನನ್ನ ಮನವಿ ಆದರೂ ಇಷ್ಟೆ ಶ್ರೀಮಾನ್ ಪಾಟೀಲ್ ನಾಗರಾಜ್‌ರವರು ಸಭೆ ಕಾಲಹರಣ ಮಾಡತಕ್ಕ ನೀತಿ ಬಗ್ಗೆ ನನಗೆ ಸಂತೋಷವಿಲ್ಲ ಪಾರ್ಲಿಮೆಂಟರಿ ಮಿನಿಸ್ಟರು ಕೂಡ ಮೋಷನ್ ಮೂವ್ ಮಾಡಿದ್ದು ತಪ್ಪು ಎಂದು ಹೇಳುವುದಿಲ್ಲ. ಸ್ಪೀಕರ್‌ರವರು ಕಾಷನ್ ಮಾಡಿದರು, ಅವರು ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಪರ್ಸಿಸ್ಟ್ ಮಾಡಿದಾಗ ಸಸ್‌ಪೆನ್‌ಷನ್ ಮೋಷನ್ ಮಂತ್ರಿಗಳು ಮೂವ್ ಮಾಡಿದ್ದಾರೆ. ಕ್ಷಾಮಕ್ಕೆ ಈಡಾಗಿರತಕ್ಕ ಪ್ರದೇಶಗಳಲ್ಲಿನ ಪರಿಸ್ಥಿತಿ ಬಿಗಡಾಯಿಸಿಕೊಂಡಿದೆ. ೨೫ ಜನ ಕಾಲರದಲ್ಲಿ ಸತ್ತಿದ್ದಾರೆ ಎಂದು ಪತ್ರಿಕೆಯಲ್ಲಿ ಇವೊತ್ತು ಓದಿದ್ದೇವೆ. ಮುಂಚೆ ೬-೮ ಜನ ಸತ್ತಿದ್ದು ಈಗ ೨೫ ಜನ ಸತ್ತಿದ್ದಾರೆ. ಸಭೆ ಅಧಿವೇಶನ ಮುಗಿಯುವುದರೊಳಗೆ ೫೦ ಜನರು ಸಾಯಬಹುದು. ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗುತ್ತಿದೆ. ಒಬ್ಬೊಬ್ಬ ಸದಸ್ಯರು ಅವರ ಅಭಿಪ್ರಾಯ ವ್ಯಕ್ತಪಡಿಸತಕ್ಕಂತಹ ಕಾಲದಲ್ಲಿ ಬಹುಶಃ ತೀವ್ರತೆಯಿಂದ ಸರ್ಕಾರದ ಮೇಲೆ ಪ್ರಭಾವ ಉಂಟು ಮಾಡಬೇಕೆಂಬುದೇ ಆ ಸದಸ್ಯರ ಆ ಒಂದು ವರ್ತನೆಗೆ ಕಾರಣ ಆಗಿರಬಹುದೆಂದು ಭಾವನೆ ಮಾಡುತ್ತೇನೆ. ತಾವು ಈಗಾಗಲೇ ರೂಲಿಂಗ್ ಕೊಟ್ಟುಬಿಟ್ಟಿದ್ದೀರಿ. ಅದನ್ನು ಪುನಃ ಪರಿಶೀಲನೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಆವೇಶದ ಭರದಲ್ಲಿ, ಸರ್ಕಾರಕ್ಕೆ ಈಗ ಇರತಕ್ಕ ಪರಿಸ್ಥಿತಿಯ ತೀವ್ರತೆಯ ಅರಿವು ಮಾಡಬೇಕು ಎನ್ನುವ ದೃಷ್ಟಿಯಿಂದ ಸಭೆಯಲ್ಲಿ ನಾವು ತಮಗೆ ಏನು ರಾಜೀನಾಮೆ ಕೊಡಿ ಎಂದು ಹೇಳುತ್ತೇವೆ ಆ ರೀತಿ ರಾಜೀನಾಮೆ ಕೊಡುವುದಕ್ಕೆ ಆಗುವುದಿಲ್ಲ. ಒಬ್ಬ ಸದಸ್ಯರು ರಾಜೀನಾಮೆ ಡಿಮಾಂಡ್ ಮಾಡಿದಾಕ್ಷಣಕ್ಕೆ ರಾಜೀನಾಮೆ ಕೊಡುವುದಕ್ಕೆ ಆಗುತ್ತದೆಯೇ ? ಅದಕ್ಕೆ ನಿಯಮಾವಳಿಗಳು ಇವೆ. ಆದ್ದರಿಂದ ಅವರು ಇರತಕ್ಕ ಪರಿಸ್ಥಿತಿಯ ಬಗ್ಗೆ ತೀವ್ರತೆಯನ್ನು ವ್ಯಕ್ತಪಡಿಸಿದ್ದಾರೆ ಹಾಗಿರುವಾಗ ಅದನ್ನೇ ಇನ್ನೂ ಹೆಚ್ಚು ಲಂಬಿಸಿ, ಅದರ ಬಗ್ಗೆ ಪ್ರತಿಪಾದನೆ ಮಾಡತಕ್ಕದ್ದು ಸರಿಯಲ್ಲ. ಆದ್ದರಿಂದ ತಾವು ಹೇಳಿದ್ದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ತಾವು ಸಭೆಯಲ್ಲಿ ನಿರ್ಣಯ ತೆಗೆದುಕೊಂಡಿದ್ದೀರಿ. ಆದರೆ ಅದನ್ನು ಪುನರ್ ಪರಿಶೀಲನೆ ಮಾಡಿ ಎಂದು ಪ್ರಾರ್ಥನೆ ಮಾಡುತ್ತೇನೆ. ಮುಂದೆ ಸಭೆಯಲ್ಲಿ ನಡೆಯಂತಕ್ಕ ಚರ್ಚೆ ಕಾಲದಲ್ಲಿ ಇದರ ಬಗ್ಗೆ ತಾವು ತಮ್ಮ ನಿರ್ಣಯವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು—ಅವರಿಗೆ ಕಾಗದ ಬರೆಯಲಿಕ್ಕೆ ಹೇಳಿ.

Discussion on the Report regarding the Scarcity conditions prevailign in several parts of the State—(*Debate contd.*)

†ಶ್ರೀ ಎಸ್. ವೈ. ಪಾಟೀಲ್ (ಸಿಂಧಗಿ).—

ಮಾನ್ಯ ಸಭಾಧ್ಯಕ್ಷಣಿಯವರೇ, ಮಾನ್ಯ ಅಮೂರ್ಗಂ ರವರು ಒಂದುವಾರ ಬಿಜಾಪುರ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಅವರು ರಿಪೋರ್ಟು ಮಾಡಿರಬಹುದು. ಆದರೆ ನಾವು ಅಲ್ಲಿ ಜನರ ಮಧ್ಯದಲ್ಲಿ ಇರುವವರು. ಅವರು ಕೆಲವು ಭಾಗಗಳನ್ನು ನೋಡಿರಬಹುದು ಕೆಲವು ಭಾಗಗಳನ್ನು ನೋಡಿರಲಿಕ್ಕಿಲ್ಲ. ನಾನು ಸಂಪೂರ್ಣ ಇಂಡಿ ತಾಲ್ಲೂಕು ಗುಲ್ಬರ್ಗ, ಅಫ್ಜಲ್‌ಪುರ ತಾಲ್ಲೂಕು ತಿರುಗಾಡಿ ಬಂದಿದ್ದೇನೆ ಅಲ್ಲಿ ಇವರ ರಿಪೋರ್ಟಿನಲ್ಲಿ ಇರುವುದಕ್ಕಿಂತ ಹೆಚ್ಚು ಭೀಕರ ಪರಿಸ್ಥಿತಿ ಇದೆ. ಅಲ್ಲಿನ ದುಷ್ಕಾಲ ಪರಿಸ್ಥಿತಿಯ ವಾತಾವರಣ ಎಷ್ಟರಮಟ್ಟಿಗೆ ಹೋಗಿದೆ ಎನ್ನುವುದನ್ನು ವಿಚಾರ ಮಾಡಿದರೆ, ಆ ಪ್ರದೇಶದ ಸರ್ಕಾರಿ ಪಕ್ಷದ ಸದಸ್ಯರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡಲಿಕ್ಕೆ ತಯಾರಿದ್ದರು. ಆದರೆ ಅವರ ಹಿರಿಯರ ಆದೇಶದಂತೆ ರಾಜೀನಾಮೆಯನ್ನು ಕೊಡುವುದನ್ನು ಬಿಟ್ಟರು. ಮತ್ತೊಬ್ಬ ಹಿರಿಯ ಸದಸ್ಯರು ಆಮರಣ ಉಪವಾಸ ಮಾಡಿದ್ದರು. ೨೭ನೇ ತಾರೀಖು ನಾನು ಇಲ್ಲಿಗೆ ಬರುವ ಕಾಲಕ್ಕೆ ಇಡೀ ಇಂಡಿ ಸಿಂಧಗಿ ತಾಲ್ಲೂಕನ್ನು ತಿರುಗಾಡಿ ನೋಡಿಕೊಂಡು ಬಂದಿದ್ದೇನೆ, ಅಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿ ಇದೆ, ಅಲ್ಲಿ ಒಂದು ಊರಲ್ಲಿ ಕೆಲಸ ನಡೆಯುತ್ತಿದೆಯೋ ಹೊರತು ಬೇರೆ ಎಲ್ಲಿಯೂ ನಡೆಯುತ್ತಾ ಇಲ್ಲ, ಮಾನ್ಯ ಅಮೂರ್ಗಂ ಅವರ ವರದಿಯಂತೆ ಅವರ ವರದಿಯ ಪುಟ 7 ರಲ್ಲಿ '' Several people had left their

(ಶ್ರೀ ಎಸ್. ವೈ. ಪಾಟೀಲ್)

villages in search of work elsewhere and that many animals had died because of fodder and water and in Dongapur village the women were trseeen withempty pots'' ಎಂದು ಹೇಳಿದ್ದಾರೆ.

In the next para ''One man by name Sri Suryabhan of Hunichinal village, Humnabad taluk, hanged himself being unable to face starvation

Many pe ple narrated to me their woeful tales with tears in their eyes ಎಂದು ಹೇಳಿದ್ದಾರೆ.

on page 9, " The conditions of the cattle is very much precarious, I found with my own eyes at several places that the cattle were not even in a position to get up and they had only skin and bones''.

On page 9 11th para " The Officers also agreed that about 23,000 people of this District had left their villages" ಎಂದು ಹೇಳಿದ್ದಾರೆ.

ಅವರು ಸಾಧಾರಣವಾಗಿ ಗುಲ್ಬರ್ಗ ಡಿಸ್ಟ್ರಿಕ್ಟನ ಪರಿಸ್ಥಿತಿಯನ್ನು ಹೇಳಿದ್ದಾರೆ ಬಿಜಾಪುರ ಜಿಲ್ಲೆಯಲ್ಲಿ ಇರುವ ಪರಿಸ್ಥಿತಿಯನ್ನು ನಾವು ಹೋದ ಅಸೆಂಬ್ಲಿಯಲ್ಲಿ ಹೇಳಿದ್ದೇವೆ. ಅಲ್ಲಿ ಪರಿಸ್ಥಿತಿ ಭೀಕರವಾಗಿದೆ. ನಾನು ಮಾತನಾಡುವ ಕಾಲಕ್ಕೆ ನನ್ನ ಕಣ್ಣಿನಲ್ಲಿ ಕಣ್ಣೀರು ಉದುರುವ ಪರಿಸ್ಥಿತಿ ಬಂದರೂ ಬರಬಹುದು ನಾನು ನಟನೆ ಮಾಡಬೇಕು ಎಂದು ಆ ರೀತಿ ಮಾಡುವವನು ಅಲ್ಲ. ಹೋದ ಅಧಿವೇಶನದಲ್ಲಿ ಅಲ್ಲಿನ ಕೆಟ್ಟ ಪರಿಸ್ಥಿತಿ ಬಗ್ಗೆ ಹೇಳುವಾಗ ಹಾಗೆ ಆಗಿರುತ್ತದೆ.

'ಓಲ್ಡ್ ವೆಲ್ಸ್‌ಗಳನ್ನು ಡೀಸಿಲ್ಟಿಂಗ್ ಮಾಡಿ, ಹೊಸಬಾವಿಗಳನ್ನು ತೆಗೆಯಬೇಕು. ಬ್ಯಾಂಕ್ ಮೂಲಕ ಹಣ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ನಮ್ಮಕಡೆ ಆ ರೀತಿ ಬ್ಯಾಂಕ್ ಮೂಲಕ ಹಣ ಸಿಕ್ಕುವ ಪರಿಸ್ಥಿತಿ ಇಲ್ಲ ಸ್ವತಃ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಅವರಿಂದ ೨೫ನೇ ಅಕ್ಟೋಬರ್ ೧೯೭೨ರ ದಿವಸ ಹೊಸದಾಗಿ ಬಂಡಿಂಗ್ ಓಪನ್ ಮಾಡಬೇಕು ಎಂದು ಪ್ರತ್ಯಕ್ಷವಾಗಿ ಆರ್ಡರ್ ತೆಗೆದುಕೊಂಡು ಹೋದರೆ ಆ ಕೆಲಸ ಮಾಡುವುದಕ್ಕೆ ಮೊಳಕಾಲ್ಮೂರಿನಿಂದ ಸ್ಟಾಫ್ ಬರಲಿಲ್ಲ ಎಂದು ಹೇಳಿದರು. ಅಲ್ಲಿ ಭಯಂಕರ ಪರಿಸ್ಥಿತಿ ಇದೆ ಸಬಾರ್ಡಿನೇಟ್ ಜನರು ನಮ್ಮನ್ನು ಕೇಳುತ್ತಾ ಇಲ್ಲ ನಾವು ಏನು ಮಾಡಬೇಕು ಎಂದು ನಮ್ಮನ್ನೇ ಕೇಳಿದರು. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಅಲ್ಲಿ ಯಾವ ತರಹ ಪ್ರೋಗ್ರಾಂ ಇಲ್ಲ. ಸಣ್ಣ ಹುಡುಗರಿಗೆ ಜತ್ತಾಗ ತಾಯಿ ರೋಗೆ ಪರಿಹಾರಕ್ಕೋಸ್ಕರ ಮೊಲೆ ಉಣಿಸಿ ಸಮಾಧಾನ ಮಾಡುವಂತೆ, ಅಗ್ರಹ ಮಾಡಿದಾಗ ಅಲ್ಲಿ ಒಂದು ಕೆಲಸ, ಇಲ್ಲೊಂದು ಕೆಲಸ ಮಾಡತಕ್ಕ ಪ್ರವೃತ್ತಿ ಸರಿಯಲ್ಲ. ತಾವುಗಳು ಅಲ್ಲಿಯ ಜನರ ಜೊತೆಗೆ ಚೆಲ್ಲಾಟ ಆಡುತ್ತಿದ್ದೀರಿ ಎಂದು ನನಗನ್ನಿಸುತ್ತದೆ. ಅಲ್ಲಿ ನೋಡಿ ನಮ್ಮ ಮನಸ್ಸು ತಳಮಳ ಆಗುತ್ತಿದೆ. ನಿಮಗೆ ಮಾನವೀಯತೆ ಹೃದಯ ಇದೆಯೋ ? ನಿಮ್ಮಲ್ಲಿ ತಳಮಳ ಉತ್ಪತ್ತಿ ಆಗುತ್ತಿದೆಯೋ ಎಂದು ನಾನು ಕೇಳುತ್ತೇನೆ. ಆ ಜನರು ಮಂತ್ರಿಗಳ ಮಾತನ್ನು ನಂಬದೆ ಬೇರೆ ಕಡೆಗೆ ವಲಸೆ ಹೋಗದಿದ್ದರೆ ದನಗಳು ಉಳಿಯುತ್ತಿದ್ದವು. ಜನರು ಉಳಿಯುತ್ತಿದ್ದರು ಮಂತ್ರಿಗಳ ಭಾಷಣಗಳನ್ನು ನಂಬಿ ಜನರು ದನಗಳು ಸಾವಿಗೆ ತುತ್ತಾಗಿದ್ದಾರೆ. ಮಂತ್ರಿಗಳು ಜವಾಬ್ದಾರಿಯಿಂದ ಭಾಷಣ ಮಾಡುತ್ತಾ ಇಲ್ಲ, ಈ ಮಾತನ್ನು ನಾನು ಸರ್ಕಾರವನ್ನು ಟೀಕಿಸಬೇಕು ಎಂದು ಹೇಳುತ್ತಾ ಇಲ್ಲ. ಎಷ್ಟೋ ಸಾರಿ ಟ್ರಜರಿ ಬೆಂಚಿನವರು ಈ ಬಗ್ಗೆ ಟೀಕೆ ಮಾಡಿದರೂ ಸರ್ಕಾರ ಒಂದು ಕಷ್ಟಕರ ಪರಿಸ್ಥಿತಿ ಇತ್ತು ಎಂದು ಒಂದು ಸ್ಟೇಟ್‌ಮೆಂಟ್ ಅನ್ನು ಸಹ ಪೇಪರಲ್ಲಿ ಕೊಡಲಿಲ್ಲ. ಇವತ್ತಿನದಿವಸ ಪರಿಸ್ಥಿತಿ ಎಷ್ಟು ವಿಕೋಪಕ್ಕೆ ಹೋಗಿದೆ ಎಂದರೆ ಇವತ್ತಿನವರೆಗೂ ಯಾವ ತರಹದ ವ್ಯವಸ್ಥೆಯೂ ಅಲ್ಲಿ ಇಲ್ಲ. ಸರ್ಕಾರಕ್ಕೆ ನಾನು ಸವಾಲು ಮಾಡುತ್ತೇನೆ, ಎಲ್ಲೆಲ್ಲಿ ಕೆಲಸಗಳನ್ನು, ಯಾವಯಾವ ರೂಪದಲ್ಲಿ ಹಂಚಿದ್ದಾರೆ ಎನ್ನುವುದಕ್ಕೆ ಅಂಕಿ ಸಂಖ್ಯೆಗಳನ್ನು ಕೊಡಿರಿ. ಅದು ನಮಗೆ ಗೊತ್ತಾದರೆ ಸರ್ಕಾರದವರು ಕೆಲಸ ಕೊಟ್ಟಿದ್ದಾರೆ ಏತಕ್ಕೆ ಬೊಬ್ಬಾಟ ಮಾಡುತ್ತೀರಿ ಎಂದು ನಾವು ಜನಗಳಿಗೆ ಹೇಳುತ್ತೇವೆ. ನಮ್ಮ ಭಾಗದಲ್ಲಿ, ಬಿಜಾಪುರು ಜಿಲ್ಲೆಯಲ್ಲಿ ಎಷ್ಟೋ ಜನರು ತಮ್ಮ ಊರುಗಳನ್ನು ಬಿಟ್ಟು ಏರಡನೆಯ ಕಡೆಗೆ ಹೊರಟು ಹೋಗಿದ್ದಾರೆ. ಲಂಬಾಣಿ ಬಂಧುಗಳು, ಹರಿಜನ ಬಂಧುಗಳು, ಯಾವ ಊರಿನಲ್ಲಿಯೂ ಇಲ್ಲ. ಬೇರೆ ಕಡೆಗೆ ಹೋಗಿ ಬಿಟ್ಟಿದ್ದಾರೆ. ಏನೂ ಗತಿ ಇಲ್ಲದ ಬಡವರು ಅಲ್ಲಲ್ಲಿ ಇದ್ದಾರೆ, ಅವರು ದುಡಿಯಲಿಕ್ಕೆ ಆಗುವುದಿಲ್ಲ. ಶಾಲೆಗೆ ಕಳುಹಿಸತಕ್ಕ ಮಕ್ಕಳನ್ನು ಕೆಲಸಕ್ಕೆ ಕರೆದುಕೊಂಡು ಹೋಗಿದ್ದಾರೆ. ಮಕ್ಕಳನ್ನು ಶಾಲೆಯಿಂದ ಬಿಡಿಸುತ್ತಿದ್ದಾರೆ. ತಾಯಿ ಊಟ ಮಾಡಲಾರದೆ, ಮೊಲೆಯಲ್ಲಿ

ಹಾಳೂ ಬರುವುದಿಲ್ಲ. ಇದನ್ನು ಹೃದಯ ಇದ್ದವರು ತಿಳಿದುಕೊಳ್ಳಬೇಕು. ಬಿಜಾಪುರ ಜಿಲ್ಲೆಯ ಪರಿಸ್ಥಿತಿಯ ಬಗ್ಗೆ ನಮ್ಮನ್ನು ನಂಬದೆ ಇದ್ದರೆ ಬಾಂಬೆ ಗೆಜೆಟಿಯರ್ ಏನು ಇದೆ ಅದರಲ್ಲಿನ ಅಂಕಿ ಸಂಖ್ಯೆಗಳನ್ನು ಈಗ ಕೊಡುತ್ತೇನೆ. ಎಲ್ಲಲ್ಲಿ ಎಷ್ಟು ಸಾರಿ ದುಷ್ಕಾಲ ಬಂದು ಏನು ಆಯಿತು ಎನ್ನತಕ್ಕ ಮಾತನ್ನು ಇಲ್ಲಿ ಓದುತ್ತೇನೆ. ಈ ಹಿಂದೆ ಎಷ್ಟು ವರ್ಷ ಕಾಲ ಬಿಜಾಪುರ ಜಿಲ್ಲೆಯಲ್ಲಿ ದುಷ್ಕಾಲ ಪರಿಸ್ಥಿತಿ ಬಂತು ಎಂಬುದರ ವಿವರ ಈ ರೀತಿ ಇದೆ :—

1396 12 ವರ್ಷಕಾಲ
1422
1423
1442
1460
1472
1473
1679 3 ವರ್ಷಕಾಲ
1631
1666
1685
1784 3 ವರ್ಷಕಾಲ ಒಂದೇ ಸಮನೇ
1791
1803
1808
1820
1832
1833
1863
1864
1867
1876
1891
1892
1896
1897
1899
1900
1905
1906
1911
1912
1918
1919
1920
1921
1923
1924
1926
1927
1936
1941

(ಶ್ರೀ ಎಸ್. ವೈ. ಪಾಟೀಲ್.)

1942
1945
1947
1948
1953
1954
1958
1959
1963
1964
1965

ಇದನ್ನು ಬರೆದುಕೊಳ್ಳುವುದಕ್ಕಿಂತ ಯಾವ ವರ್ಷಕಾಲ ದುಷ್ಕಾಲ ಬಿದ್ದಿಲ್ಲ ಎಂಬುದನ್ನು ತಾವು ಹೇಳಿ?

1 P.M.

ಈಗ ಆರ್ಮುಗಂರವರ ವರದಿ ಪ್ರಕಾರ ಒಂದು ಶತಮಾನದಲ್ಲಿ ಗುಲ್ಬರ್ಗಾದಲ್ಲಿ ೫ ವರ್ಷ ದುಷ್ಕಾಲ ಬಂದಿದೆ ಎಂದು ತಿಳಿದು ಬರುವುದು. ಇದರಿಂದ ಅನುಮಾನ ಬರುವುದು ವಾಸ್ತವ. ಸರಕಾರಕ್ಕೆ ಶಕ್ತಿಯಿದೆ, ಸಂಖ್ಯಾಬಲವಿದೆ. ಮಾನ್ಯ ಪಾಟೀಲ್ ನಾಗರಾಜ ಅವರು ಹೇಳಲಿ, ನಾವು ೨೩ ಮಂದಿ ಹೇಳಲಿ ನೀವು ಮಂತ್ರಿಮಂಡಲ ಬಿಡುವುದಕ್ಕೆ ಸಾಧ್ಯವಿಲ್ಲ, ನೀವೆ ಅಧಿಕಾರದಲ್ಲಿರಿ. ಆದರೆ ಜನರನ್ನುಳಿಸುವ ವ್ಯವಸ್ಥೆ ಮಾಡಿ ಎಂಬುದು ನನ್ನ ಅರಿಕೆ. ದುಃಖದಿಂದ ನಾವು ಹೇಳುತ್ತಿದ್ದೇವೆ. ನೀವು ಇಲ್ಲ ಏನಾದರೂ ಹೇಳಬಹುದು. ಆದರಲ್ಲಿ ವಾಸ್ತವಾಂಶವಿದೆಯೋ ಎಂಬುದು ಮುಖ್ಯವಾದುದು. ನಾವು ಹಳ್ಳಿಗಳನ್ನು ಸುತ್ತುತ್ತೇವೆ. ಬಹಳ ಕೆಲಸವಾಗಿದೆ ಎಂದು ಹೇಳುವಿರಿ, ಇನ್ನೂ ಮಾಡುವುದಿದೆ. ಈ ದಿವಸ ದುಷ್ಕಾಲ ಪರಿಹಾರ ಮಾಡಲು ೧೫ ಕೋಟಿ ಹಣ ಜನರಿಂದ ಸಂಗ್ರಹಿಸಿರುವುದನ್ನು ಖರ್ಚು ಮಾಡಿದ್ದೇನೆ, ಇದರ ಉಪಯೋಗ ನಮ್ಮ ಮಕ್ಕಳಿಗೆ ಆಗಬೇಕು. ಈಗ ಖರ್ಚು ಮಾಡುವುದು ನಮ್ಮ ಮಕ್ಕಳಿಗೆ ಮುಂದೆ ಸಹಾಯವಾಗುವಂತಿರಬೇಕು. ಬಾವಿಗಳಲ್ಲಿ ಹೂಳು ತೆಗೆಯುವುದು, ಹೊಸ ಬಾವಿಗಳನ್ನು ನಿರ್ಮಿಸುವುದು, ಬಂಡಿಂಗ್ ಕೆಲಸ, ರಸ್ತೆ ಕೆಲಸ ಮಾಡಲಾಗಿದೆ. ರಸ್ತೆ ಮಾಡಬಾರದೆಂದು ನಾನು ಹೇಳುವುದಿಲ್ಲ. ಆದರೆ ರಸ್ತೆ ಯಾವಾಗ ಮಾಡಬೇಕು ? ಮನುಷ್ಯನಿಗೆ ಅನ್ನ, ನೀರು ಮತ್ತು ದನಗಳಿಗೆ ಮೇವು ದೊರೆಯುವಾಗ ಮಾಡಿ. ಇಂದು ಮುಖ್ಯವಾದುದು ಯಾವುದು ? ನಮಗೆ ನಿಮಗೆ ಸಹಾಯ ಮಾಡುವವರು ರೈತರು, ಅವರು ಇಂದು ದನಗಳನ್ನು ೨ ರೂಪಾಯಿಗೆ ಮಾರುತ್ತಿದ್ದಾನೆ, ದುಂಗೆ ಅವನ್ನು ಕೊಳ್ಳಲು ಎರಡು ಸಾವಿರ ರೂಪಾಯಿ ಬೇಕು. ಅದನ್ನು ಆಗ ಕೊಡುವವರು ಯಾರು ? ರೈತನ ಹೆಸರಿನಮೇಲೆ ರಾಜ್ಯಪಾಳುವಾಗ ರೈತ ತನ್ನ ದನಗಳನ್ನು ೨ ರೂಪಾಯಿಗೆ ಮಾರುತ್ತಿದ್ದಾನ. ದಿನದ ಮಾಂಸ ತಿನ್ನುವವರೇ ಇಲ್ಲ, ದನ ಕೊಳ್ಳುವವರೇ ಇಲ್ಲ, ಅದನ್ನು ಯಾರೂ ಒಯ್ಯದೆ ಕುಣಿಕೆ ಬಿಚ್ಚಿ ಬಿಡುತ್ತಿದ್ದಾರೆ ಎಂದು ಒಬ್ಬ ಮಿತ್ರರು ಹೇಳಿದರು. ಇಂಡಿ-ಸಿಂದಗಿ ತಾಲ್ಲೂಕಿನಲ್ಲಿ ೧೫ ಸಾವಿರ ಬಾವಿಗಳಿವೆ, ಹಳೆ ಬಾವಿಗಳಲ್ಲಿ ಡೀಸಿಲ್ಟಿಂಗ್ ಮಾಡಿದರೆ ಒಂದು ಬಾವಿಯಿಂದ ೨೦ ಕ್ವಿಂಟಾಲ್ ಪ್ರಕಾರ ಒಂದೂವರೆ ಲಕ್ಷ ಧಾನ್ಯ ಬೆಳೆಯಬಹುದು, ಈಗ ಅದಕ್ಕೆ ಅವಕಾಶವಿಲ್ಲ. ಸಣ್ಣಪುಟ್ಟ ನೌಕರರು ಬಹಳ ಸಹಾಯಮಾಡಿದ್ದಾರೆ, ಶಕ್ತಿಮೀರಿ ಸಹಾಯ ಮಾಡಿದ್ದಾರೆ. ಇಂದು ಸಿಬ್ಬಂದಿಯಿಲ್ಲ, ಹೇಗೆ ರೆಕ್ರೂಟ್ ಮಾಡುವುದು ಎಂದು ಸರಕಾರ ಹೇಳುವುದು. ನಮಗೆ ಜಾಗಬಿಟ್ಟು ಕೊಟ್ಟರೆ ನಾವು ಮಾಡುತ್ತೇವೆ, ರೆಕ್ರೂಟ್ ಮಾಡಿ ಅಭಾವ ಪರಿಸ್ಥಿತಿ ಇರುವ ಕಡೆ ಹೇಗೆ ಕೆಲಸಮಾಡಬೇಕೆಂಬುದನ್ನು ಮಾಡಿ ತೋರಿಸುತ್ತೇವೆ. ಈ ಕಡೆಗೆ ಬನ್ನಿ, ಮಾಡುವ ಸಲುವಾಗಿ ನಮಗೆ ಅಧಿಕಾರ ಕೊಡಿ, ನಾವು ಕಲ್ಯಾಣ ಮಾಡುತ್ತೇವೆ. ಅಭಾವ ಪರಿಸ್ಥಿತಿಯಲ್ಲಿ ಮಾಡುವ ರಸ್ತೆ ರಿಪೇರಿ ಮಾಡುವುದು ಹೇಗೆ? ಹಣ ಎಲ್ಲಿಂದ ತರುವುದು? ಮಹಾರಾಷ್ಟ್ರ ಸರಕಾರ ಭಾರತಸರ್ಕಾರದ ಮೇಲೆ ತನ್ನ ವರ್ಚಸ್ಸನ್ನುಪಯೋಗಿಸಿ ಅನುಕೂಲ ಪಡದಿದೆ. ನಿಮ್ಮ ಅಪ್ರೋಚ ಸರಿಯಾಗಿಲ್ಲ. ನೀವೂ ಏಕೆ ಹಾಗೆ ಮಾಡಬಾರದು ? ಅವರು ತರುವುದೇ ಬೇರೆ, ನೀವು ತರುವುದೇ ಬೇರೆ. ಕನಿಷ್ಟ ೫೦ ಕೋಟಿ ರೂಪಾಯಿಗಳನ್ನಾದರೂ ಎರಡನೆಯ ಸ್ಟಡಿ ಟೀಂ ಬಂದಾಗ ಪಡೆಯಲು ಪ್ರಯತ್ನಮಾಡಿ. ರಾಜ್ಯದಲ್ಲಿ

ಪರಿಸ್ಥಿತಿ ಬಹಳ ಕಠಿಣವಾಗಿದೆ ಎಂದು ನಮ್ರತೆಯಿಂದ ಹೇಳಿ ಪ್ರಾರ್ಥನೆ ಮಾಡಿ ಅಷ್ಟು ಹಣ ಪಡೆಯಿರಿ. ಫ್ಯಾಮಿನ ಪ್ರದೇಶವೆಂದು ಡಿಕ್ಲೇರ್ ಮಾಡಬೇಕಾದ ಅವಶ್ಯಕತೆ ಇದೆ. ಕೆಲಸ ಕೊಟ್ಟರಾಯಿತು ಏಕೆ ಹಾಗೆ ಡಿಕ್ಲೇರ್ ಮಾಡಬೇಕು ಎಂದು ಹೇಳಬಹುದು ನಮಗೂ ಅಧಿಕಾರವಿದೆ, ನಿಮಗಿಂತ ಕಡಿಮೆಯಿಲ್ಲ, ಅನುಭವವಿದೆ. ನಮಗೆ ಅಧಿಕಾರ ಸಿಕ್ಕಿಲ್ಲ, ನಿಮಗೆ ಸಿಕ್ಕಿದೆ. ನೀವೇನೂ ಗೌತಮ ಬುದ್ಧರಾಗಿಲ್ಲ, ನಾವು ಕೆಲಸಕ್ಕೆ ಬಾರದವರಾಗಿಲ್ಲ. ನಾವು ಎರಡು ಮೂರು ಸಾರಿ ಚುನಾಯಿತರಾಗಿ ಬಂದಿದ್ದೇವೆ, ನಾವು ಮಂತ್ರಿಗಳಾಗದಿದ್ದರೂ ನಿಮಗೇನೂ ಕಡಮೆಯಿಲ್ಲ. ನಮ್ಮನ್ನು ಜನರು ಕನಿಕರದಿಂದ ನೋಡುವರು. ನಾವು ಊರಿಗೆ ಹೋಗಲು ಸಾಧ್ಯವಿಲ್ಲ ನಮ್ಮ ಹಾಗೆ ನಿಮ್ಮದೂ ಜವಾಬ್ದಾರಿಯಿದೆ. ೧೬೫ ಜನ ಮತ್ತು ೨೨ ಜನ ಕೂಡಿ ಕೆಲಸಮಾಡಬೇಕು. ಗುಲ್ಬರ್ಗ ಮತ್ತು ಬಿದರೆಯನ್ನು ಫ್ಯಾಮಿನ ಏರಿಯ ಎಂದು ಡಿಕ್ಲೇರ್ ಮಾಡಬೇಕಾದ ಪರಿಸ್ಥಿತಿ ಅಲ್ಲಿದೆ. ಜನರು ಸಾಯುತ್ತಿದ್ದಾರೆ. ಪೋಸ್ಟ್ ಮಾರ್ಟಂ ಮಾಡಲು ಮರ್ಡರ್ ಮಾಡಿರುವರೇ ? ಕೂಲಿ ಮಾಡಲು ಸಿಂದಗಿ ತಾಲ್ಲೂಕಿನಲ್ಲಿ ಇರುವ ಒಂದು ಲಕ್ಷ ೯೦ ಸಾವಿರ ಜನರಲ್ಲಿ ೫೦ ಸಾವಿರ ಜನ ಕೂಲಿ ಮಾಡುವರು ಅವರಿಗೆ ಕೆಲಸವಿಲ್ಲವೆಂದು ಕೇಳಿದರೆ ಮಂತ್ರಿಗಳು ಬಂದಾಗ ಅಧಿಕಾರಿಗಳನ್ನು ಕರಸಿ ಏಕೆ ಕೆಲಸ ಕೊಡುವುದಿಲ್ಲ ಎಂದು ಕೇಳುವರು, ಅಧಿಕಾರಿಗಳು ಕೊಡುವುದಾಗಿ ಹೇಳುವರು. ಮಂತ್ರಿಗಳು ಹೋದರೆ ಊಟಮಾಡಿ ಬಂಗಲೆಗಳಲ್ಲಿ ಮಲಗುವರು. ಬಂಜೆ ಬಲ್ಲಳೆ ಹೆರಿಗೆಯ ಬೇನೆಯನ' ಎಂದು ಕವಿಗಳು ಹಾಡಿದ್ದಾರೆ. ಹಾಗೆ ಕಷ್ಟದಲ್ಲಿರುವ ಜನರ ವಿಷಯ ಸರಕಾರಕ್ಕೆ ಅರಿವಾಗುವುದಿಲ್ಲ. ಅವರ ದುಃಖ, ನೋವು ಬಡತನದಲ್ಲಿರುವವರಿಗೆ ಗೊತ್ತಾಗುವುದು. ಮಕ್ಕಳನ್ನು ಪಡೆಯುವ ಕಷ್ಟ, ತಾಯಿಗೆ ತಿಳಿಯುವುದು, ತಾಯಿಗೆ ತಿಳಿದಂತೆ ಇತರರಿಗೆ ತಿಳಿಯುವುದಿಲ್ಲ. ಇಂದಿರಾ ಗಾಂಧಿಯವರು ಶ್ರೀಮಂತ ಮನೆತನದವರು, ಅವರಿಗೆ ಬಡವರ ಕಷ್ಟ ಅರಿವಾಗುವುದಿಲ್ಲ ಬಡವರೇ ಕೊಡುವವರು. ಆ ಮಹಾ ತಾಯಿಯನ್ನು ಬಂಗಾರದಲ್ಲಿ ತೂಗಿದರು. ಇಂದು ದುಷ್ಕಾಲ ಪ್ರಾಪ್ತವಾಗಿ ಪರಿಸ್ಥಿತಿ ಭೀಕರವಾಗಿರುವಾಗ ಕೇಂದ್ರ ಸರಕಾರದವರು, ರಾಜ್ಯ ಸರಕಾರದವರು ಮತ್ತು ಈ ಸಭಾಧ್ಯಕ್ಷರು ಕೂಡಿ ಏಕಮುಖದಿಂದ ವಿಚಾರಮಾಡಿ ಎಲ್ಲರೂ ಜವಾಬ್ದಾರಿ ವಹಿಸಿ ಸಾರ್ವಜನಿಕ ಹಿತ ಕಾಪಾಡಬೇಕು. ಮುಖ್ಯ ಮಂತ್ರಿಗಳು ನಮ್ಮನ್ನು ಕರೆಸಲಿ, ಇಲ್ಲದಿದ್ದರೆ ನಾವೇ ಹೋಗೋಣ. ಹಿಂದೆ ಭೂಕಂಪವಾದಾಗ ಬಾಬು ರಾಜೇಂದ್ರ ಪ್ರಸಾದರು ಮಾಡಿದಂತೆ ಕೆಲಸಮಾಡಬೇಕು. ಈಗ ಎಂ ಪಿ ಸಿ ಸಿ ಪ್ರೆಸಿಡೆಂಟರ ಚುನಾವಣೆ ಗಲಾಟೆ ಮುಗಿದಿದೆ, ಸಿಂದಗಿ ತಾಲ್ಲೂಕಿಗೆ ಕಾಲಿಟ್ಟರೆ ಯಾವ ಕೆಲಸ ಮಂಜೂರಾಗಿದೆ, ಮಂಜೂರು ಮಾಡಿಸದೆ ಏಕೆ ಬರುವಿರಿ ಎಂದು ಕೇಳುವರು. ನೀವು ಬೇಕಾದರೆ ಪುನರ್ಜನ್ಮದಲ್ಲೂ ಮಂತ್ರಿಗಳಾಗಿ, ಈಗಿನವರೇ ಅಧ್ಯಕ್ಷರು ಮುಂದೂ ಆಗಲಿ. ನಾವು ಪ್ರತಿ ಪಕ್ಷದಲ್ಲೇ ಇರುತ್ತೇವೆ. ಆದರೆ ಸರಿಯಾದ ಪರಿಹಾರ ಒದಗಿಸಿ.

ನಾನು ಅದರ ಸಲುವಾಗಿ ಕೇಳುತ್ತಿದ್ದೇನೆ. ಅದನ್ನು ಫ್ಯಾಮಿನ್ ಏರಿಯಾ ಎಂದು ಡಿಕ್ಲೇರ್ ಮಾಡಬೇಕು ಎಂದು ಅದಕ್ಕೆ ನಿಮ್ಮ ಅಧಿಕಾರಿಗಳು ಹೇಳತಕ್ಕ ರೂಲ್ಸ್ ಅದನ್ನು ಅಲೋ ಮಾಡುತ್ತದೆಯೋ ಇಲ್ಲವೇ ಅನ್ನುವುದನ್ನು ನಾನು ಕೇಳುತ್ತಿಲ್ಲ. ಅಲ್ಲಿ ಜನರು ಸಾಯುತ್ತಿರುವಾಗ, ಊರನ್ನು ಬಿಟ್ಟು ಗೂಳೆ ಹೋಗುತ್ತಿರುವಾಗ, ಅಲ್ಲಿ ಜನರಿಗೆ ಕುಡಿಯುವುದಕ್ಕೆ ನೈತ ನೀರು ಸಿಕ್ಕದಿದ್ದಾಗ, ತಿನ್ನಲಿಕ್ಕೆ ಅನ್ನವಿಲ್ಲದಿದ್ದಾಗ ಆ ಪ್ರದೇಶವನ್ನು ಫ್ಯಾಮಿನ್ ಎಂದು ಡಿಕ್ಲೇರ್ ಮಾಡುವುದಕ್ಕೆ ರೂಲ್ಸ್ ಅವಕಾಶ ಕೊಡದಿದ್ದರೆ ಅವುಗಳನ್ನು ಕಿತ್ತು ಒಗೆಯಿರಿ ಎಂದು ಹೇಳುತ್ತೇನೆ, ರೂಲ್ಸ್‌ಗಳನ್ನು ಮಾಡಿದವರು ನಾವು ನಮಗೆ ಅವು ಬೇಡ ಎಂದು ಹೇಳುವುದಕ್ಕಾಗುತ್ತದೆಯೋ? ಅದರ ಮೊದಲು ನಮಗೆ ಮನಸ್ಸಿಲ್ಲ ಅಂದರೆ ಅದನ್ನು ನಾನು ಒಪ್ಪುತ್ತೇನೆ. ಹಾಗೆ ರೂಲ್ಸ್ ಒಪ್ಪದಿದ್ದರೆ ಆ ಫ್ಯಾಮಿನ್ ಎಂಬ ಶಬ್ದವನ್ನು ಡಿಕ್ಷನರಿಯಿಂದ ತೆಗೆದು ಹಾಕಿ ಎಂದು ಹೇಳುತ್ತೇನೆ. ಏಕೆಂದರೆ ರೂಲ್ಸ್ ಒಪ್ಪದಿದ್ದರೆ ಆ ಪದವಾದರೂ ಇನ್ನೇತಕ್ಕೆ ಇರಬೇಕು? ರೂಲ್ಸ್ ಇರಲಿ, ಇಲ್ಲದಿರಲಿ ಸರ್ಕಾರದ ಕೆಲಸಗಳು ನಡೆಯಬೇಕು. ಅದನ್ನು ಬಿಟ್ಟು ಅಲ್ಲಿ ಜನ ಸಾಯುತ್ತಿದ್ದರೂ, ಕುಡಿಯುವುದಕ್ಕೆ ನೀರಿಲ್ಲದೆ ಊರುಗಳನ್ನು ಬಿಟ್ಟು ಗೂಳೆ ಹೋಗುತ್ತಿದ್ದರೂ ಅದು ಹಾಗೆ ಆಗುವುದಿಲ್ಲ ಸಾರ್ ಅದು ಹೀಗೆ ಆಗುತ್ತದೆ ಸಾರ್, ಅದು ಲಗಳಿ ಆಗುತ್ತದೆ ಸಾರ್, ಎಂದು ಹೇಳಿ ಬೇರೀಜನ್ನು ಬದಲಾಯಿಸುವುದಕ್ಕೆ ಈ ಅಧಿಕಾರಿಗಳು ಯಾರು ? ಇವರಿಗೇನು ಅದನ್ನು ನಿರ್ಧರಿಸತಕ್ಕ ಹಕ್ಕಿದೆ? ಎಂದು ನಾನು ಕೇಳುತ್ತೇನೆ ? ಇವರೆಲ್ಲರಿಗೂ ಅಂಥ ಒಂದು ಹಕ್ಕನ್ನು ಯಾರು ಕೊಟ್ಟಿದ್ದಾರೆ ?

ಶ್ರೀ ಎಸ್. ಹುಚ್ಚಮಾಸ್ತಿಗೌಡ. ಮಾನ್ಯ ಸದಸ್ಯರು ತಮ್ಮಲ್ಲಿರತಕ್ಕ ಉದ್ವೇಗವನ್ನು ಸ್ವಲ್ಪ ತಡೆದು ಕೊಂಡು ಮಾತನಾಡಿದರೆ ಒಳ್ಳೆಯದೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ವೈ. ಪಾಟೀಲ್: ನಾನು ನಮ್ಮ ತಾಯಿಯವರಲ್ಲಿ ದುಃಖವನ್ನು ಹೇಳಿಕೊಳ್ಳುತ್ತಿದ್ದೇನೆ. ಈ ಉದ್ವೇಗ ಸುಮ್ಮನೆ ಬಾ ಎಂದರೆ ಬರುವುದಿಲ್ಲ. ಇದಕ್ಕೆ ಒಂದು ಶೃತಿ ಪೆಟ್ಟಿಗೆ ಇಟ್ಟುಕೊಂಡು ನುಡಿಸಿದರೆ ಒಳಗಿನಿಂದ ದುಃಖ ಹೊರಗೆ ಬರುವುದಿಲ್ಲ ನೀವಿಲ್ಲಿ ಕುಳಿತು ಇಷ್ಟು ಶಾಂತಿಯಿಂದ ನಿಧಾನವಾಗಿ ಮಾತನಾಡತಕ್ಕ ಜನರಲ್ಲಾ ಆ ಬಿಜಾಪುರ ಜಿಲ್ಲೆಯ ಕಡೆಯಿಂದ ಬಂದವರಲ್ಲ. ಆದರೇನು ಎಲ್ಲರೂ ಒಂದೇ ರಾಜ್ಯದಲ್ಲಿರತಕ್ಕವರು. ಅಂದರೆ ಎಲ್ಲರೂ ಎಷ್ಯಾ ಖಂಡದಲ್ಲಿರತಕ್ಕವರೇ. ಆದರೆ ಒಬ್ಬರ ಅನುಭವ ಕಷ್ಟ ಇನ್ನೊಬ್ಬರಿಗೆ ಅರಿವಾಗಿಲ್ಲ ಅಷ್ಟೇ. ಆದರೆ ನಾನು ಈ ದಿವಸ ನಮ್ಮ ಅಧ್ಯಕ್ಷಣಿ ತಾಯಿಯವರ ಮುಖಾಂತರ ತಮ್ಮೆಲ್ಲರಲ್ಲೂ ಕೇಳಿಕೊಳ್ಳುತ್ತಿರುವುದೇನೆಂದರೆ ನಮ್ಮ ಪ್ರದೇಶವನ್ನು ಫ್ಯಾಮಿನ್ ಏರಿಯಾ ಎಂದು ಕೂಡಲೇ ಡಿಕ್ಲೇರ್ ಮಾಡಿ ಎಂದು. ಇನ್ನು ಎರಡನೆಯದಾಗಿ ಆ ಅಪ್ಪರ್ ಕೃಷ್ಣಾ ಏರಿಯಾದಲ್ಲಿ ಜನರು ಅಷ್ಟು ಸುಲಭವಾಗಿ ಜಮೀನನ್ನು ಬಿಟ್ಟುಕೊಡುವುದಿಲ್ಲ. ಅಲ್ಲಿ ಜಮೀನನ್ನು ಆಕ್ವಯಿರ್ ಮಾಡುವುದಕ್ಕೆ ಬಹಳ ತಡವಾಗುತ್ತದೆ. ಆದಕ್ಕಾಗಿ ಸ್ಪೆಷಲ್ ಆಕ್ವಿಜಿಷನ ನಿಬಂಧನೆಗಳನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡುತ್ತೇನೆ. ಇದನ್ನು ಸರ್ಕಾರದವರು ಈ ಕೂಡಲೆ ಮಾಡಬೇಕು.

ಇನ್ನು ಮೂರನೆಯದಾಗಿ ಇಂಡಿಗಿ ಮತ್ತು ಸಿಂಧಿಗಿ ತಾಲ್ಲೂಕಗಳಲ್ಲಿ ಅಂದರೆ ಸಿಂಧಿಗಿ ತಾಲ್ಲೂಕಾದಲ್ಲಿ ೬೨೨೦ ಬಾವಿಗಳಿವೆ, ಇಂಡಿಗಿ ತಾಲ್ಲೂಕಾದಲ್ಲಿ ೯ಸಾವಿರ ಬಾವಿಗಳಿವೆ. ಅವುಗಳಲ್ಲಿ ಯಾವು ಹಳೇ ಬಾವಿಗಳೂಲ ಅವುಗಳಲ್ಲಿರತಕ್ಕ ಸಿಲ್ಟನ್ನು ತಗೆಯಬೇಕು. ಆದರೆ ಅಲ್ಲಿ ಈ ಡೀಸಿಲ್ಟಿಂಗ್ ಬಗ್ಗೆ ಜಿಯಲಾಜಿಕಲ್ ಡಿಪಾರ್ಟ್‌ಮೆಂಟಿನ ಒಬ್ಬ ತಜ್ಞರು ಏನು ಹೇಳಿದ್ದಾರೆ ಎಂಬುವುದನ್ನು ಹೇಳುತ್ತೇನೆ.

B P RADHAKRISHAN, Director of Mines & Geolgy.
ಎನ್ನುವವರು ಈ ರೀತಿಹೇಳಿದ್ದಾರೆ

Desilting of wells: Inspite of continuous failure of rains for the last three years, in several parts of Bijapur District there is still a lot of the appreciable quantity of water in the wells of certain regions and desilting is a very essential work than digging of new wells.

ಒಂದೆ ಈ ಪ್ರದೇಶದಲ್ಲಿ ಅಂದರೆ ಇಂಡಿ ಮತ್ತು ಸಿಂಧಗೀ ತಾಲ್ಲೂಕಗಳಲ್ಲಿ ಈ ಡಿಸಿಲ್ಟ್ ಮಾಡತಕ್ಕ ಬಾವಿಗಳೆಷ್ಟಿವೆ ಎಂಬದನ್ನು ಸರ್ವೆ ಮಾಡಿದ್ದಾರೆ, ಹುಡುಗರು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಪಾಸ್ ಮಾಡಿದ ನಂತರ ಅವರನ್ನು ಕಾಲೇಜಿಗೆ ಸೇರಿಸಬೇಕಾದ್ದು ಎಷ್ಟು ಅಗತ್ಯವೋ ಹಾಗೇ ಒಂದಾವರ್ತಿ ಈ ಎರಡು ತಾಲ್ಲೂಕುಗಳಲ್ಲಿ ತಗೆದಿರತಕ್ಕ ಬಾವಿಗಳ ಅಂದರೆ ೧೫ ಸಾವಿರ ಚಿಲ್ಲರೆ ಬಾವಿಗಳ ಡಿಶಿಲ್ಟಿಂಗ್ ಕಲಸ ಮಾಡಿದರೆ ಅಲ್ಲಿ ಜನಕ್ಕೆ ಸಾಕಷ್ಟು ಅನ್ನ ಗಳಿಸಲಿಕ್ಕ ಕೆಲಸ ದೊರೆಯುತ್ತದೆ. ಈ ದಿವಸ ಅಲ್ಲಿಗೆ ೫೦ ಕೋಟಿ ಹಣ ಬೇಕೆಂದು ಹೇಳುತ್ತಿದ್ದಾರೆ. ಆದರೆ ಇದರಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಕೊಡಲೆ ನಮ್ಮ ಇಂಡಿಗೀ ಮತ್ತು ಸಿಂಧಿಗೀ ತಾಲ್ಲೂಕುಗಳಿಗೆ ಮೊದಲು ೨೫ ಲಕ್ಷ ರೂಪಾಯಿಗಳನ್ನು ಕೊಟ್ಟು ಡೀಸಿಲ್ಟಿಂಗೆ ಕೆಲಸ ಮಾಡಿಸಬೇಕು. ಮತ್ತು ಎಲ್ಲೆಲ್ಲಿ ಹೊಸ ಬಾವಿಗಳನು ತೋಡಿಸಲಿಕ್ಕೆ ಅವಕಾಶ ಇದೆಯೋ ಅಲ್ಲಿ ಅವುಗಳನ್ನು ಕೂಡಲೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ: ಆದರೆ ನನಗ ಇಲ್ಲಿಯವರೆಗೂ ಈ ನಮ್ಮ ಜನರ ರಾಜಕೀಯ ನೀತಿಯೇ ತಿಳಿಯದಾಗಿದೆ. ಹೆಡ್ ಕಾನ್‌ಸ್ಟೇಬಲ್ಲಿಗಿಂತ ಹೆಚ್ಚು ಅಧಿಕಾರ ಆತನ ಮೇಲಿರತಕ್ಕ ಜಮಾದಾರನಿಗಿರುತ್ತದೆ ಜಮಾದಾರಿನಿಗಿಂದ ಮೇಲಿರತಕ್ಕಸಭೆ-ಇನ್‌ಸ್ಪೆಕ್ಟರಿಗೆ ಇನ್ನೂ ಹೆಚಿನ ಅಧಿಕಾರವಿರುತ್ತದೆ. ಆದರೆ ಇಲ್ಲಿ ಚೀಫ್ ಸೆಕ್ರೆಟರಿಯವರಿಗೆ ಇರತಕ್ಕಷ್ಟು ಅಧಿಕಾರ ನಮ್ಮ ಮಂತ್ರಿಗಳಾಗಿರತಕ್ಕ ನಾನ್ ಆಫಿಷಿಯಲ್ ಸದಸ್ಯರಿಗೆ ಇರುವುದಿಲ್ಲ ಎಂದರೆ ಇದೇನು ಅರ್ಥ ? ನಮ್ಮ ಅಪ್ರಮಾಣಿಕ ವರ್ತನೆಗೆ ಯಾರೂ ಬಾಯಿಬಿಟ್ಟು ಹೇಳಬೇಕಾದ್ದು ಅನವಶ್ಯಕ. ನಾವೇ ನಮ್ಮ ಮನಸ್ಸನ್ನು ಬಿಚಿ ನೋಡಿಕೊಂಡರೆ ಅದು ಅವರಿಗೆ ಗೊತಾಗುತ್ತದೆ. ಅದನ್ನು ಬಿಟ್ಟು ಸುಮ್ಮನೆ ಬಾಯಲ್ಲಿ ಹೇಳಿಕೊಂಡು ಬರುತ್ತಿದ್ದರೆ ಅಥವಾ ಕಾಗದದ ಮೇಲ್ಲೆ ಬರೆದು ಕೆಂಪು ಮಸಿಯಲ್ಲಿ, ನಾವು ಸುಳ್ಳನ್ನು ಹೇಳಬಾರದು, ಸತ್ಯದಿಂದ ನಡೆಯಬೇಕು, ಲಂಚವನ್ನು ತೆಗೆದುಕೊಳ್ಳಬಾರದು. ಪ್ರಮಾಣಿಕತನದಿಂದ ನಡೆಯಬೇಕು. ಎಂದು ಬರೆದು ಬಿಟ್ಟರೆ ಸಾಕೇನು? ಅದನ್ನು ಯಾರೂ ಅನುಸರಿಸುವುದಿಲ್ಲ. ಒಟ್ಟಿನಲ್ಲಿ ಇದು ಕೆಟ್ಟದ್ದು ಇದನು ನಾನು ಮಾಡಬಾರದು ಎಂಬಮನಸ್ಸು ಅಲ್ಲಿ ಹುಟ್ಟದಿದ್ದರೆ ಬರೀ ಬರವಣಿಗೆಯಿಂದ ಏನೂ ಪ್ರಯೋಜನವಾಗುವುದಿಲ್ಲ. ಅದಕ್ಕಿಂತ ಆ ಶಬ್ದಗಳನ್ನು ಡಿಕ್ಷನರಿಯಿಂದ ತಗೆದು ಹಾಕಬೇಕೆಂದು ಹೇಳುತ್ತೇನೆ, ಕಳ್ಳತನ ಮಾಡಬಾರದು, ಸೆರೆ, ಸೇಂದಿ ಕುಡಿಯಬಾರದು ಹೇಳಿದರೆ ಬಿಡುತ್ತಾರೆಯೇ ? ಆದರೆ ನಾನು ಇಲ್ಲಿ ಕೇಳಿಕೊಳ್ಳುವುದಿಷ್ಟೇ, ಆ ಸ್ಕೇರ್ಸಿಟಿ ಏರಿಯಾದಲ್ಲಿ ಈ ಸರೆ ಮತ್ತು ಸೇಂದಿ ಅಂಗಡಿಗಳನ್ನು ಮಾತ್ರ ತೆರೆಯಬೇಡಿ ಎಂದು ಈ ದಿವಸ ಗಾಂಧಿ ಜಯಂತಿ ನಡೆಸತಕ್ಕ ಕಡೆಗಳಲೆಲ್ಲಾ ಸೇಂದಿ ಅಂಗಡಿಗಳನ್ನು ತೆರೆದಿದಾರೆ. ತಪ್ಪು ಕೆಲಸವನ್ನು ಮಾಡಿದವರ ಅವರು ಯಾವ ಸರ್ಕಾರದವರೇ ಇರಲಿ ಅದು ತಪ್ಪೇ. ನಾನು ಮಾಡಿದ್ದರೂ ತಪ್ಪೇ ನಮ್ಮಪ್ಪ ಮಾಡಿದ್ದರೂ ತಪ್ಪೇ. ಆದರೆ ನಾನು ಈ ದಿವಸ ಮಾನ್ಯ ಅಧ್ಯಕ್ಷರ ಮುಖಾಂತರ ನಮ್ಮ

ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ಕೇಳಿಕೊಳ್ಳುವುದಿಷ್ಟೇ — ಒಂದು ಮನೆಯಲ್ಲಿ ೨—೩ ಮಕ್ಕಳಿದ್ದರೆಷ್ಟು ಆ ತಂದೆ ತಾಯಿಗಳು ಆ ಮಕ್ಕಳನ್ನು ಜೋಪಾನ ಮಾಡುತ್ತಾರೋ ಅದೇಮಾದರಿಯಲ್ಲಿ ಇವರು ಈ ದಿವಸ ರಾಜ್ಯದಲ್ಲಿರತಕ್ಕ ೨ — ೩ ಕೋಟಿ ಜನರಿಗೆ ತಂದೆ ತಾಯಿಗಳಂತಿದ್ದಾರೆ. ಇವರು ಅಲ್ಲಿ ನೀರಿನ ಸಲುವಾಗಿ ಕೆಲಸಗಳನ್ನು ಕೂಡಲೆ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಅಲ್ಲಿ ಜನರು ಏತಕ್ಕೆ ಈ ದಿವಸ ಈ ರಾಜ್ಯವನ್ನು ಬಿಟ್ಟು ಮಹರಾಷ್ಟ್ರಕ್ಕೆ ಹೋಗುತ್ತಿದ್ದಾರಂತೆ" ಉಂಬುದಕ್ಕಿಲ್ಲದ ರಾಜ್ಯದಲ್ಲಿರುವುದಕ್ಕಿಂತ ತಿರುದುಂಬುವ ರಾಜ್ಯದಲ್ಲಿರುದೇ ಲೇಸೆಂಬಂತೆ' ಜನರು ಹೋಗುತ್ತಿದ್ದಾರೆ. ಆದರೆ ಇಲ್ಲಿ ನಮ್ಮ ಫಾಮಿನ್ ಏರಿಯಾದಿಂದ ಬಂದಿರತಕ್ಕ ಮಾನ್ಯ ಮಂತ್ರಿಗಳಾದ ರಾಥೋಡರಿಗೂ ಮತ್ತು ಮಾನ್ಯ ಕಿತ್ತೂರ್ ಹಾಗೂ ನಗರಾಳ್ ಅವರಿಗೆ ಆ ಪ್ರದೇಶದ ಬಗ್ಗೆ ಸಾಕಷ್ಟು ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನೀವು ಈಗ ನಮ್ಮ ದುಷ್ಕಾಲ ಪ್ರದೇಶದ ಮಂತ್ರಿಗಳಾಗಿದ್ದೀರೀ ಮುಂದೆಯೂ ಮಂತ್ರಿಗಳಾಗುತ್ತೀರಿ ಮತ್ತು ಇಲ್ಲಿ ಆ ಪ್ರದೇಶಕ್ಕೆ ಮುಂದೆ ಯಾರು ಯಾರು ಮಂತ್ರಿಗಳಾಗುವುದಕ್ಕೆ ಅವಕಾಶವಿದೆಯೋ ಅವರಲ್ಲರಿಗೂ ನನ್ನ ಪ್ರಾರ್ಥನೆ ಇದೆ ಏನೆಂದರೆ ಅಲ್ಲಿನ ಜನರ ಬಗ್ಗೆ ಪ್ರೇಮವನ್ನಿಡಿ ಎಂದು ಹಾಗೇ ಈ ವಿಧಾನ ಸಭೆಯ ಎಲ್ಲಾ ಸದಸ್ಯರಲ್ಲೂ ಪ್ರಾರ್ಥಿಸಿ ಕೊಳ್ಳುತ್ತೇನೆ. ನಮ್ಮಲ್ಲಿ ಆ ದುಷ್ಕಾಲವನ್ನು ಓಡಿಸುವುದಕ್ಕೆ ನಮಗೆ ಯಾರಾದರೇನು, ಅದೇನೋ ಹೇಳುತ್ತಾರಲ್ಲಾ ಯಾತರ ಹೂವಾದರೇನು ನಾಥರ ಸಾಲದೇ ಎಂದು ಹಾಗೇ ನಮಗೆ ಸಹಾಯ ಒದಗಿದರೆ ಸಾಕು. ಹಿಂದೆ ನಮ್ಮ ರಾಜ್ಯಾಂಗವನ್ನು ಡಾ: ಅಂಬೇಡ್ಕರ್ ಅವರಿಂದ ಬರೆಸಲಿಲ್ಲವೇ ? ಈ ದಿವಸ ರಿಪಬ್ಲಿಕನ್ ಪಾರ್ಟಿಯ ಸದಸ್ಯರಿಗೆ ಈ ಒಂದು ಕೆಲಸವನ್ನು ಕೊಟ್ಟರು. ಅದರೆ ಅವರು ಬಹಳ ಚಲೋ ರಿಪೋರ್ಟನ್ನು ಕೊಟ್ಟಿದಾರೆ ಅದನ್ನು ಸರ್ಕಾರದವರು ಕೂಡಲೆ ಆಚರಣೆಗೆ ತರಬೇಕೆಂದು ಒತ್ತಾಯ ಮಾಡುತ್ತೇನೆ. ನಮ್ಮಲ್ಲಿ ವಯಸ್ಸಿರತಕ್ಕವರ ವಿಚಾರದಲ್ಲಿ ಅಷ್ಟೇನು ಹೇಳುವುದಿಲ್ಲ ಅವರು ಎಲ್ಲಿಯಾದರೂ ಹೋಗಿ ದುಡಿದು ಜೀವನ ಮಾಡುತ್ತಾರೆ ಅದರೆ ಅಲ್ಲಿರತಕ್ಕ ಮುದುಕರ ಮತ್ತು ಮಕ್ಕಳ ಬಗ್ಗೆ ನಾವು ತಮಗೆ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಿದ್ದೇನೆ ಅಲ್ಲಿ ಅವರಿಗೆ ಉಚಿತಆಹಾರವನ್ನು ಒದಗಿಸಿ ಎಂದು ಇನ್ನು ಬಿಜಾಪುರ ಜಿಲ್ಲೆಯ ಗುಳೇದಗುಡ್ಡ ರಬಕಾವಿ ಇತ್ಯಾದಿ ಪ್ರದೇಶಗಳಲ್ಲಿ ಇರತಕ್ಕ ನೇಕಾರರ ಬಗ್ಗೆ ಮಾನ್ಯ ಭಂಗಿಯವರು ಹೇಳಿದ್ದಾರೆ. ಅವರಿಗೂ ಜೀವನಕ್ಕೆ ಬಹಳಕಷ್ಟವಿದೆ ಅಲ್ಲಿ ಎಲ್ಲರಿಗೂ ಕೂಡಲೆ ಅನ್ನವಸತಿಗಳನ್ನು ಒದಗಿಸಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ,

ಶ್ರೀ ಧರ್ಮಸಿಗ್ ನಾರಾಯಣಸಿಂಗ್ (ಜೇವರ್ಗಿ) ಸನ್ಮಾನ್ಯ ಸಾಭಾಧ್ಯಕ್ಷಣಿಯವರೇ, ಇವತ್ತಿನ ದಿವಸ ಹೈದರಬಾದ್ ಕರ್ನಾಟಕದಲ್ಲಿ ಮೇಲಾಗಿ ಉತ್ತರ ಕರ್ಣಾಟಕದಲ್ಲಿ ಏನು ಬರಗಾಲ ಪರಿಸ್ಥಿತಿ ಉಂಟಾಗಿದೆಯೋ ಅದರ ಬಗ್ಗೆ ನಿನ್ನೆಯಿಂದ ಈ ಸಭೆಯಲ್ಲಿ ಚರ್ಚೆ ನಡೆಯುತ್ತಿದೆ.

ಅಧ್ಯಕ್ಷರು. ನನ್ನಲ್ಲಿ ಈಗ ೨೫ ಹೆಸರುಗಳ ಒಂದು ಪಟ್ಟಿ ಇದೆ. ಎಲ್ಲರೂ ದಯವಿಟ್ಟು ಸ್ವಲ್ಪ ಸ್ವಲ್ಪವಾಗಿ ಮಾತನಾಡಿ. ಹಳೆಯ ಮೈಸೂರಿನವರ ಹೆಸರುಗಳೇ ಇಲ್ಲ. ಯಾರ್ಯಾರು ಅಭಾವ ಪರಿಸ್ಥಿತಿ ಇರತಕ್ಕ ಪ್ರದೇಶಗಳಿಂದ ಬಂದಿದ್ದಾರೋ ಅವರ ಹೆಸರುಗಳಿವೆ. ಆದ್ದರಿಂದ ಪ್ರತಿಯೊಬ್ಬರು ಹೆಚ್ಚು ಕಾಲಾವಕಾಶ ತೆಗೆದುಕೊಳ್ಳದೆ, ನಿಮ್ಮ ಸ್ನೇಹಿತರಿಗೂ ದಯಮಾಡಿ ಸ್ವಲ್ಪಮಟ್ಟಿಗೆ ಅವಕಾಶಮಾಡಿಕೊಡಿ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ ಮಾನ್ಯ ಶ್ರೀ ಅರಸುರವರು ನಮ್ಮ ಜಿಲ್ಲೆಗೆ ಹೋಗಿ ಅಲ್ಲಿ ಅಭಾವ ಪರಿಸ್ಥಿತಿಯನ್ನು ನೋಡಿ ಜನರು ಅಲ್ಲಿ ಯಾವ ರೀತಿಯಲ್ಲಿ ಬರಗಾಲಕ್ಕೆ ತುತ್ತಾಗಿದ್ದಾರೆ, ಯಾವರೀತಿಯಾಗಿ ಅಲ್ಲಿನ ಗಂಭೀರ ಪರಿಸ್ಥಿತಿ ಇದೆಯೆಂಬ ಬಗ್ಗೆ ಆವರು ತಮ್ಮ ಪತ್ರಿಕೆಯಲ್ಲಿ ಹೇಳಿದ್ದಾರೆ ಯಾವ ರೀತಿಯಾಗಿ ಪರಿಹಾರ ಮಾಡಿದರೆ ಅದು ಸರಿಹೋಗುತ್ತದೆಂಬ ವಿಷಯವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಇವತ್ತಿನ ದಿವಸ ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ, ಬಿದರ್ ಜಿಲ್ಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ, ಬೆಳಗಾಂ ಜಿಲ್ಲೆಯಲ್ಲಿ, ರಾಯಚೂರು ಜಿಲ್ಲೆಯಲ್ಲಿ. ಮತ್ತು ಇನ್ನೂ ಇತರ ಕೆಲವು ಭಾಗಗಳಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಉಂಟಾಗಿದೆಯೆಂಬ ಬಗ್ಗೆ ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ. ಆದರೆ ನಮ್ಮ ಸರ್ಕಾರದವರು ಇಂತಹ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಯಾವ ಕಾರ್ಯಕ್ರಮವನ್ನು ತಗೆದುಕೊಂಡಿಲ್ಲ ಎನ್ನುವ ಮಾತು ಇಲ್ಲ ಅವರೂ ಕೂಡ ಈ ಒಂದು ಭೀಕರ ಪರಿಸ್ಥಿತಿಯನ್ನು ಎದುರಿಸಲು ಸಾಕಷ್ಟು ದುಡ್ಡನ್ನು ಖರ್ಚುಮಾಡುತ್ತಾ ಇಲ್ಲ. ಕೇವಲ ಒಂದು ಕೋಟಿ ೨೫ ಲಕ್ಷ ರೂಪಾಯಿಗಳು ಖರ್ಚು ಆಗಿದೆಯೆಂದು ಹೇಳುತ್ತಾರೆ. ಅಲ್ಲಿಒಂದು ಲಕ್ಷ ೨೫ ಸಾವಿರ ಜನರು ಕೆಲಸಮಾಡುತ್ತಿದ್ದಾರೆಂದು ಹೇಳುತ್ತಾರೆ. ಇವತ್ತಿನ ದಿವಸ ನಮ್ಮ ಗುಲ್ಬರ್ಗಾ ಜಿಲ್ಲೆಯ ವಿಷಯವನ್ನು ಹೇಳುವುದಾದರೆ, ಅಲ್ಲಿನ ಅಭಾವ ಪರಿಸ್ಥಿತಿಯ ಬಗ್ಗೆ ಹೇಳುವುದಾದರೆ ಇನೂ ೪ ಲಕ್ಷ ಜನರಿಗೆ ಕೆಲಸ ಒದಗಿಸಬೇಕು ಪ್ರತಿ ಜಿಲ್ಲೆಯಲ್ಲಿಯು ಕನಿಷ್ಠಪಕ್ಷ ವ್ಯವಹಾರ ದೃಷ್ಟಿಯಿಂದ ೨೩ ಲಕ್ಷ ಜನರಿಗೆ ಕೆಲಸಕಾರ್ಯಗಳನ್ನು ಕೂಡುವಕಾರ್ಯ ಕ್ರಮವನ್ನು ಹಾಕಿಕೊಳ್ಳಬೇಕು. ಇದರ ವಿಷಯವಾಗಿ ಸಂಬಂಧಪಟ್ಟ ರೆವಿನ್ಯೂ ಮಂತ್ರಿಗಳು ಜನಾನುರಾಗಿಯಾಗಿದ್ದಾರೆ. ಯಾವರೀತಿಯಾದ ಕಾರ್ಯಕ್ರಮ ಹಾಕಿ ಕೊಡರೆ ಜನರಿಗೆ

(ಶ್ರೀ ಧರ್ಮಸಿಂಗ್ ನಾರಾಯಣಸಿಂಗ್)

ಉಳಿಸುವ ಅವಕಾಶವಿದೆ. ಎಂಬುವುದನ್ನು ಹೇಳಿದ್ದರೆ ಈಗ ಸಾಕಷ್ಟು ರಸ್ತೆಯ ಕೆಲಸ ಕಾರ್ಯಗಳು ವುುಗಿದುಹೋಗಿದೆ ಅದರೆ ನನ್ನ ತಾಲ್ಲೂಕಿನಲ್ಲಿ ೬ ಸಾವಿವ ಕಿಲೊವಿ ಾಟರ್ ರಸ್ತೆಗೆ ೧೧ ಲಕ್ಷ ರೂಪಾಯಿಗಳು ಖರ್ಚಾಗಿವೆ. ಮಿಕ್ಕ ಕಲಸವನ್ನು ಕೊಡುವುದಕ್ಕೆ ಈಗ ಸಾಧ್ಯವಿಲ್ಲವೆಂದು ಹೇಳುತ್ತಾರೆ ಇನ್ನು ಸಾಯಿಲ್ ಕನ್‌ಸರ್‌ವೇಷನ್ ಕಲಸಕಾರ್ಯಗಳು ಸ್ಪೀಡಾದಿ ನಡೆಯಬೇಕಾಗಿವೆ. ಇದರ ವಿಷಯವಾಗಿ ಮಾನ್ಯ ಶ್ರೀ ಕ. ಎಚ್. ಪಾಟೀಲ್ ಅವರನ್ನು ಬೇಟಿ ಮಾಡಿದರೂ ಕೂಡ ಕಲಸವೇನೂ ನಡೆದಿಲ್ಲ ಸುಮಾರು ೪೧-೫೦ ಸಾಯಿಲ್ ಕನ್‌ಸರ್‌ವೇಷನ್ ಸೆಂಟರುಗಳನ್ನು ತೆಗೆದು ಒಂದೊಂದು ಕಡೆ ಓಬ್ಬೊಬ್ಬರನ್ನು ನೇಮಿಸಬೇಕು. ೫ ಜನ ಎ. ಇ. ಓ ಗಳನ್ನು ಮತ್ತು ೫ ಜನ ಪೇಮೆಂಟ್ ಆಫೀಸರು ಗಳನ್ನು ನೇಮಿಸಿದರೆ ಸಾಯಿಲ್ ಕನ್‌ಸರವೇಷನ್ ಮುಖಾಂತರ ೩೬ ಲಕ್ಷ ಎಕರೆಯಲ್ಲಿ ಕೂಲಿ ಕಲಸ ಕೊಡುವುದಕ್ಕೆ ಅನುಕೂಲವಾಗುತ್ತದೆ. ಇಲ್ಲಿರುವ ಜನರನ್ನು ಅಲ್ಲಿಗೆ ವರ್ಗಮಾಡಿದರೂ ಇವತ್ತಿನವರೆಗೂ ಹೋಗಿಲ್ಲ. ನಿನ್ನೆ ದಿವಸ ಒಂದೇ ಸಾಯಿಲ್ ಕನ್‌ಸರ್‌ವೇಟರ್ ಸೆಂಟರ್ ಆಗಿದೆ. ಈ ರೀತಿಯಾಗಿ ಕೆಲಸವಾವರೆ ಜನರಿಗೆ ಈಗ ಅಲ್ಲಿ ಏನು ಗಂಭೀರ ಪರಿಸ್ಥಿತಿ ಉಂಟಾಗಿದೆಯೋ ಅದಕ್ಕನುಗುಣವಾಗಿ ಅಲ್ಲಿ ಜನರಿಗೆ ಕೆಲಸಗಳನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ತೀವ್ರವಾಗಿ ಸರ್ಕಾರದವರು ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಹೆಚ್ಚಿನ ಗಮನಕೊಡಬೇಕು ಕೇವಲ ಒಂದೆರಡು ದಿವಸಗಳಲ್ಲಿಯೇ ವಾರ್‌ಫುಟಿಂಗ್ ನಲ್ಲಿ ಕೆಲಸಗಳು ಆಗಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆಮಾಡುತ್ತೇನೆ. ಮತ್ತೊಂದು ವಿಷಯ. ಇನ್ನು ನನ್ನ ತಾಲೂಕಾದ ಜೇವರ್ಗಿ ಬಗ್ಗೆ ಹೇಳುವುದಾದರೆ, ಅ ಭೀಮಾ ನದಿ ೮೦ ಕಿಲೊ ಮೀಟರ್‌ವರಗೂ ಹರಿಯುತ್ತದೆ ಅಪ್ಪರ್ ಕೃಷ್ಣ ನದಿಯ ನೀರೂ ಸಹ ಹರಿಯುತ್ತದೆ ಅದು ನಾರಾಯಣಪುರದವರೆಗೂ ಆಳವಾಗಿ ನೀರು ಇದೆ. ಅಲ್ಲಿ ಲಿಫ್ಟ್ ಇರಿಗೇಷನ್ ಕೆಲಸಕಾರ್ಯಗಳನ್ನು ಜಾಗ್ರತೆಯಾಗಿ ಮಾಡಿದರೆ, ಪಂಪ್ ಹಾಕಿಕೊಂಡು ಡೀಸಿಲ್ ಮಾಡಿ ವಾಲಫುಟಿಂಗ್‌ನಲ್ಲಿ ಕೆಲಸಮಾಡಿದ್ದರೆ ಸುಮಾರು ೮ ಸಾವಿರ ಏಕರೆಗೆ ನೀರು ಕೊಡುವ ಸಂಭವ ಇತ್ತು. ಆದರೆ ಆ ಕಾರ್ಯ ಇನ್ನೂ ಆಗಿಲ್ಲ. ಅಲ್ಲಿ ಎಲೆಕ್ಟ್ರಿಕ್ ಲೈನ್ ಎಳೆಯುವ ಕಾರ್ಯಕ್ರಮ ಇನ್ನೂ ಆಗಿಲ್ಲ. ಸ್ವಪ್ಪಮಟ್ಟಿಗೆ ಈಗ ಪ್ರಾರಂಭವಾಗಿದೆ. ೪೦ ಕಿಲೊಮೀಟರ್ ವರೆಗೂ ಕೆಲಸಕಾರ್ಯಗಳು ಮುಗಿಯುತ್ತಾ ಬರುತ್ತಿವೆ. ಮುಂದಿನ ತಿಂಗಳವರೆಗೆ ೮೦ ಕಿಲೊ ಮೀಟರ್‌ವರೆಗೆ ನೀರು ಬರುವಂತೆ ಮಾಡಬಹುದು. ಇದುವರೆಗೆ ಆ ರೀತಿ ಮಾಡಿದರೆ ನಿಜವಾಗಿ ೮ ಸಾವಿರ ಎಕರೆಗೆ ನೀರು ಕೊಡಬಹುದಾಗಿತ್ತು. ಅದರ ಮುಖಾಂತರ ಪೂರ್ಣವಾಗಿ ಜಿಲ್ಲೆಗೆ ಹುಲ್ಲು ಕೊಡುವ ಅವಕಾಶವಾಗುತ್ತಿತ್ತು ಇದು ವಾರ್‌ಫುಟಿಂಗ್‌ನಲ್ಲಿ ಆಗಬೇಕು. ಭೀಮಾ ರಿವರ್ ಬೆಲ್ಟ್ ಅಫ್‌ಜಲ್‌ಪುರ ತಾಲ್ಲೂಕ್ ಮತ್ತು ಗುಲ್ಬರ್ಗಾ ತಾಲ್ಲೂಕುಗಳಲ್ಲಿ ೮೦ ಕಿಲೊಮೀಟರ್‌ವರೆಗೆ ಹರಿಯುತ್ತದೆ. ಆದರೂ ಅಲ್ಲಿ ವಾರ್‌ಫುಟಿಂಗ್‌ನಲ್ಲಿ ಕೆಲಸಮಾಡುತ್ತಾ ಇಲ್ಲ. ಆ ರೀತಿ ಮಾಡಿದ್ದರಿಂದಲೇ ಲಾರಿಗಳ ಮುಖಾಂತರ ಈಗ ಅನೇಕರನ್ನು ಒಯ್ಯುತ್ತಿದ್ದಾರೆ. ಅದೂ ಸಾಲದು, ಅನೇಕ ಎಡರುತೊಡರುಗಳಾಗುತ್ತಿವೆ. ಅಲ್ಲಿ ಯಾವಾಗಲೂ ಪರಿಹಾರವನ್ನು ಕೊಡುವುದೇ ಇಲ್ಲ. ಒಂದುವೇಳೆ ಮಳೆ ಬಂದ ಪಕ್ಷದ ಒಕ್ಕಲಿಗರಿಗೆ ಸಕಾಲಿದಲ್ಲಿ ಬಿತ್ತನೆಗೆ ಬೀಜ, ಎತ್ತುಗಳು ಸಿಗುವುದೇ ಇಲ್ಲ. ಪ್ರತಿಯೊಬ್ಬ ರೈತನಿಗೂ ಎರಡು ಎತ್ತುಗಳನ್ನು ಕೂಡಬೇಕಾಗಿದೆ, ಒಟ್ಟು ೮ ಲಕ್ಷ ದನಗಳಲ್ಲಿ ೪ ಲಕ್ಷ ಎತ್ತುಗಳನ್ನು ಉಳಿಸಬೇಕಾದರೂ ಈಗ ಒಂದು ವಾರ್‌ಫುಟಿಂಗ್‌ನಲ್ಲಿ ಸರ್ಕಾರ ಅದರಬಗ್ಗೆ ಲಕ್ಷ್ಯ ಕೊಟ್ಟು ಭೀಮಾ ನದಿಯ ನೀರನ್ನು ಉಪಯೋಗ ಮಾಡಿಕೊಂಡು ಅಲ್ಲಿ ಯಥೇಚ್ಛವಾಗಿ ಹುಲ್ಲು ಬೆಳಸಬೇಕು ಬೆಳೆ ಬೆಳೆಯುವವರಿಗೆ ಕಂಪೆನ್ಸೇಷನ್ ಕೊಟ್ಟು ಹುಲ್ಲು ಬೆಳೆಸಲು ಸರ್ಕಾರದವರು ಪೂರ್ಣ ಸಹಾಯವನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಎರಡು ತಿಂಗಳೊಳಗೆ ಬರತಕ್ಕ ಪರಿಸ್ಥಿಯ ಇನ್ನೂ ಭೀಕರವಾಗಿರುತ್ತದೆ ಎಂಬುದಾಗಿ ನಾನು ಹೇಳುತ್ತೇನೆ. ಆದಕಾರಣ ಎಲ್ಲಾ ಕೆಲಸಗಳನ್ನು ವಾರ್‌ಫುಟಿಂಗ್‌ನಲ್ಲಿ ಮಾಡಬೇಕು. ಮೊದಲು ದನಗಳನ್ನೂ ಉಳಿಸಬೇಕು. ಎತ್ತುಗಳನ್ನು ನಾಳೆ ಪ್ರತಿಯೊಬ್ಬ ಒಕ್ಕಲಿಗನಿಗೂ ಎರಡು ಎತ್ತುಗಳು ಸಿಗಬೇಕು. ಸಾಯಿಲ್ ಕನ್‌ಸರ್‌ವೇಷನ್ ಕೆಲಸಕಾರ್ಯಗಳು ಇಮಿಡಿಯೇಟಾಗಿ ಪ್ರಾರಂಭ ಮಾಡಬೇಕು. ಎಲೆಕ್ಟ್ರಿಕ್ ಲೈನುಗಳನ್ನು ೧೫ ಲಕ್ಷ ರೂಪಾಯಿಗಳ ಒಂದು ಯೋಜನೆಯಲ್ಲಿ ಕೂಡಿಸಿ ಐ. ಪಿ ಸೆಟ್ಟುಗಳನ್ನು ರೋಣ ಮುಖಾಂತರ ಒದಗಿಸಬೇಕು. ಇವತ್ತಿನದಿವಸ ಕೂಲಿಗಾರರಿಗೆ ಸರಿಯಾಗಿ ಕೆಲಸ ದೊರೆಯಬೇಕಾದರೆ ಅಪರ್ ಕೃಷ್ಣ, ಬೆಣೆತೊರೆ ಪ್ರಾಜೆಕ್ಟ್ ಮುಂತಾದ ದೊಡ್ಡದೊಡ್ಡ ಪ್ರಾಜೆಕ್ಟ್ ಗಳನ್ನು ತೆಗೆದುಕೊಂಡು ಅವರಿಗೆ ಲಸಗಳನ್ನು ಕೊಡುವ ಅವಕಾಶವನ್ನು ಮಾಡಿಕೊಟ್ಟರೆ ಅಲ್ಲಿನ ಜನರನ್ನು ವಿಶೇಷವಾಗಿ ಉಳಿಸಬಹುದು. ಈಗ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಕೆಲಸವೇನೋ ಬಹಳ ಸಾವಧಾನವಾಗಿ ನಡೆಯುತ್ತಿದೆ. ಜೇವರ್ಗಿ ತಾಲ್ಲೂಕಿನ ಮೂಲಕ ಜನರಿಗೆ ವಿಶೇಷವಾಗಿ ಅನುಕೂಲವಾಗುವ ಕೆಲಸಗಳಿವೆ. ಮತ್ತೊಂದು ಕಡೆಯಿಂದ ಪೋರಾಪುರ್, ಬಹಳ ದೂರವಾಗುತ್ತವೆ. ಅಲ್ಲಿನ ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಜೀಫ್ ಇಂಜನಿಯರು ಅವರು ಆ ಭಾಗಗಳನ್ನೂ ಮತ್ತು ಇತರ ಕೆಲವು ಪ್ರದೇಶಗಳನ್ನು ನೋಡಿ ಬಂದಿದ್ದಾರೆ. ಈಗ ಲ್ಯಾಂಡ್ ಅಕ್ವಿಸಿಷನ್ ಕೆಲ್ಲಸಗಳನ್ನು ವಾರ

ಫುಟಿಂಗ್‌ನಲ್ಲಿ ಸರ್ಕಾರದವರು ಮಾಡಿಸಬೇಕು ಇಂತಹ ಭೀಕರವಾದ ಪರಿಸ್ಥಿತಿಯನ್ನು ಎದುರಿಸುವ ಸಲುವಾಗಿ ಎಲ್ಲಾ ಕಾರ್ಯಗಳನ್ನು ರೂಲ್ಸ್ ಅಂಡ್ ರೆಗ್ಯುಲೇಷನ್ ಪ್ರಕಾರ ಮಾಡುವ ಪರಿಸ್ಥಿತಿಯಲ್ಲಿ ಹೋದರೆ. ಅದರಿಂದೇನೂ ಆಗುವುದಿಲ್ಲ. ಜಾಗ್ರತೆಯಾಗಿ ಕೆಲಸಮಾಡಬೇಕೆಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಷಯ. ಪ್ರೈಮ್ ಮಿನಿಸ್ಟರ್ ಅವರು ಮುಂದಿನ ತಿಂಗಳು ಮಹಾರಾಷ್ಟ್ರಕ್ಕೆ ಬರುತ್ತಾರೆ. ಅಲ್ಲಿ ಭೀಕರ ಪರಿಸ್ಥಿತಿ ಇದೆ. ಅದನ್ನು ನೋಡಿಕೊಂಡು ಹೋಗುತ್ತಾರೆ ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮುಂದಿನ ತಿಂಗಳು ಏನು ನಮ್ಮ ಬಾರ್ಡರ್ ಕಡೆ ಅವರು ಬರುತ್ತಾರೆಯೋ ಆಗ ಅವರನ್ನು ನಮ್ಮ ಉತ್ತರ ಕರ್ನಾಟಕದ ಕಡೆಗೂ ಕರೆದು ಕೊಂಡು ಬಂದು ಅವರಿಗೆ ಅಲ್ಲಿನ ಅಭಾವ ಪರಿಸ್ಥಿತಿಯನ್ನು ತೋರಿಸಿ ಸಾಕಷ್ಟು ಹಣವನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಂಡು ಎಲ್ಲ ಕೆಲಸಗಳನ್ನು ಅತಿ ಜಾಗ್ರತೆಯಾಗಿ ತೆಗೆದುಕೊಳ್ಳಬೇಕೆಂದುನಾನು ಪ್ರಾರ್ಥಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ —ಪ್ರಧಾನ ಮಂತ್ರಿಯವರನ್ನು ಕರಕೊಂಡು ಬರುವುದು ಸ್ಪೀಕರ್ ಅಲ್ಲ; ನಿಮ್ಮ ಪಕ್ಷದವರು.

1-30 P.M

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್. —ಇನ್ನು ಆರ್ಮುಗಂ ರಿಪೋರ್ಟಿನ ಪುಟ ೧೮ರಲ್ಲಿ ಜೇವರ್ಗಿಯಲ್ಲಿ ಡಿಸಿಸಿ ಬ್ಯಾಂಕ್ ಪ್ರತಿನಿಧಿಯು ಒಂದು ಮಾತನ್ನು ಹೇಳಿದ್ದಾಗೆಂದು ನಮೂದು ಮಾಡಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಸರ್ಕಾರದವರು ತಾಲ್ಲೂಕು ಬೋರ್ಡ್ ಮತ್ತು ಪಂಚಾಯತ್ ಬೋರ್ಡ್ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಂತಹ ಪರಿಸ್ಥಿತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಾ ಇಲ್ಲವೆಂದು ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ಇದು ಸರಿಯಾದ ಮಾತಲ್ಲ. ಅಲ್ಲಿರತಕ್ಕಂತಹ ಫುಡ್ ಅಡ್‌ವೈಸರಿ ಕಮಿಟಿಯಲ್ಲಾಗಲಿ ಅಥವಾ ಇತರ ಕಮಿಟಿಯಲ್ಲಾಗಲಿ, ಎಲ್ಲದರಲ್ಲಿಯೂ ಈ ಸದಸ್ಯರನ್ನು ಹಾಕಿಕೊಂಡೇ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಎಲ್ಲಾ ಪಕ್ಷಗಳ ಸದಸ್ಯರನ್ನು ಕರೆಸಿ ಸಮಾಲೋಚನೆ ಮಾಡಿಯೇ ಇಂತಹ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ಆದ್ದರಿಂದ ಡಿ ಸಿ ಸಿ ಪ್ರೆಸಿಡೆಂಟ್ ಅಲ್ಲಿ ಏನು ಆರ್ಮುಗಂರವರಲ್ಲಿ ಹೇಳಿದ್ದಾರೆ, ಅದು ಸರಿಯಾದ ಮಾತಲ್ಲವೆಂದು ಹೇಳುತ್ತೇನೆ. ಆದ್ದರಿಂದ ನಾನು ಈವರೆಗೆ ಏನೊಂದು ಸಲಹೆಗಳನ್ನು ಕೊಟ್ಟಿದ್ದೇನೆ, ಅದರ ಬಗ್ಗೆ ಸರ್ಕಾರದವರು ತೀವ್ರವಾದ ಕ್ರಮಗಳನ್ನು ಆ ಪ್ರದೇಶಗಳಲ್ಲಿ ತೆಗೆದುಕೊಳ್ಳಲು ಒಬ್ಬ ಕ್ಯಾಬಿನೆಟ್ ದರ್ಜೆಯ ಮಂತ್ರಿಯನ್ನು ನೇಮಕ ಮಾಡಿ ಸಂಬಂಧಪಟ್ಟ ಛೀಫ್ ಇಂಜಿನಿಯರ್, ಸೆಕ್ರಟರಿಗಳ ಮುಖಾಂತರ ಅಲ್ಲಿ ಮುಖ್ಯವಾಗಿ ಮಾಡಬೇಕಾದ ಕೆಲಸಕಾರ್ಯಗಳನ್ನು ಮಾಡಿ ಮುಗಿಸಬೇಕೆಂದು ಕೇಳಿಕೊಂಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಮಾನ್ಯ ವಿ. ಎನ್. ಪಾಟೀಲ (ಹುಮ್ನಾಬಾದ್) :—ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಇಲ್ಲಿ ಕ್ಷಾಮ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಿದ್ದೇವೆ. ನನಗನಿಸುತ್ತದೆ, ಇದು ನಾವು ಗಾಳಿಗೆ ಗುದ್ದಿ ಕೈ ನೋಯಿಸಿ ಕೊಂಡ ಹಾಗೆ ಆಗಿದೆ. ಸರ್ಕಾರದ ಕಡೆಯಿಂದ ಆ ಪ್ರದೇಶಕ್ಕೆ ಒಂದು ಡಜನ್ ಮಂತ್ರಿಗಳು ಹೋಗಿದ್ದಾರೆ. ಜನ ಜಾತ್ರೆಯ ಸಮಯದಲ್ಲಿ ಒಂದು ಪಲ್ಲಕ್ಕಿಯನ್ನು ನೋಡುವುದಕ್ಕೆ ಹೇಗೆ ಹೋಗುತ್ತಾರೋ ಹಾಗೆ ಈ ಮಂತ್ರಿಗಳನ್ನು ನೋಡುವುದಕ್ಕೆ ಅರ್ಜಿಗಳನ್ನು ತೆಗೆದುಕೊಂಡು ಜನರು ಹೋಗುತ್ತಿದ್ದರು ಅಂಥ ಅರ್ಜಿಗಳು ಬಂದರೆ ಅವುಗಳನ್ನು ತೆಗೆದುಕೊಳ್ಳುವುದಕ್ಕೂ ಇವರಿಗೆ ಸಮಯವಿರಲಿಲ್ಲ. ಆದರೆ ಆ ಅರ್ಜಿಗಳು ಎಲ್ಲಿ ಹೋಯಿತು ಎಂಬುದು ಯಾರಿಗೂ ಗೊತ್ತಿಲ್ಲ. ಈ ರೀತಿಯ ಒಂದು ಅನ್‌ಪ್ರಿನ್ಸಿಪಲ್ಡ್, ಮತ್ತು ಅನ್ ಕಮಿಟೆಡ್ ಅಪ್ರೋಚ್ ಇವರು ಇಟ್ಟುಕೊಂಡಿದುದರಿಂದ ನಾನು ಇವತ್ತು ಇಂತಹ ಕಟುವಾದ ಮಾತನ್ನು ಹೇಳಬೇಕಾಗಿದೆ. ಈ ವರೆಗೆ ಸರ್ಕಾರದವರು ಏನು ಮಾಡಿದ್ದಾರೆಂದರೆ, ಅದು ಒಂದು ಕೊಲ್ಲೋಸಲ್ ಅಂಡ್ ಕ್ಯಾರಲೆಸ್ ವೇಸ್ಟ್, ಅಷ್ಟೆ. ಇವತ್ತು ಮಂತ್ರಿಗಳು ಅಧಿಕಾರಿಗಳಿಗೆ ಹೇಳಿದಾಗ ಅವರ ಅಪ್ರೋಚ್ ಏನೆಂದು ನೋಡಿದರೆ ಗೊತ್ತಾಗುತ್ತದೆ. ಒಂದು ಸಾರಿ, ಎರಡು ಸಾರಿ ಮಂತ್ರಿಗಳು ಬರುತ್ತಾರೆ. ಬಂದು ಹೇಳುತ್ತಾರೆ, ಮತ್ತು ಹೋಗುತ್ತಾರೆ ಮೂರು ದಿವಸಕ್ಕೆ ಒಬ್ಬ ಮಂತ್ರಿಯವರು ಅಲ್ಲಿಗೆ ಬರುತ್ತಾರೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಈ ರೀತಿಯಿಂದಾಗಿ ಅಧಿಕಾರಿ ವರ್ಗದವರಲ್ಲಿ ಒಂದು ನಿರಾಶಾಭಾವನೆ ಬಂದಿದೆ. ಮಂತ್ರಿಗಳು ಬಂದು ಹೇಳುವುದು ಒಂದು ಸೂಚನೆ ; ಅಧಿಕಾರಿಗಳು ಅಲ್ಲಿ ಮಾಡುವುದು ಇನ್ನೊಂದು. ಈ ರೀತಿಯಿಂದ ಅಲ್ಲಿ ಕೆಲಸವೇ ಆಗುವುದಿಲ್ಲ.

(ಶ್ರೀ ಧರ್ಮಸಿಂಗ್ ನಾರಾಯಣಸಿಂಗ್)

ಆ ಮೇಲೆ ಅಲ್ಲಿಗೆ ಒಬ್ಬರು ಮಂತ್ರಿಗಳು ಬಂದು ರೈಟಿಂಗ್‌ನಲ್ಲಿ ಒಂದು ಆರ್ಡರ್ ಕೊಟ್ಟರು. ಅವರು ಬಂದಾಗ, ಅಲ್ಲಿಯ ಪರಿಸ್ಥಿತಿ ನೋಡಿ, ವಿದ್ಯಾರ್ಥಿಗಳ ಗೋಳನ್ನು ನೋಡಿ ಒಂದು ಆರ್ಡರ್ ಮಾಡಿದರು ಹಾಗೆ ಮಾಡಿದ ಆರ್ಡರಿನ ಗತಿ ಏನಾಯಿತು ? ಅಲ್ಲಿ ೫-೫ ವಿದ್ಯಾರ್ಥಿಗಳಿಗೆ ೧೦೦ ಪೋಲೀಸರಂತೆ ಇದ್ದಾರೆ. ಹೀಗಿರುವ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಮೇಲೆ ಆಗುವಂತಹ ಲಾಟೀ ಚಾರ್ಜನ್ನು ತಪ್ಪಿಸುವುದಕ್ಕೋಸ್ಕರ ಅಲ್ಲಿರತಕ್ಕಂತಹ ಪರಿಸ್ಥಿತಿಯನ್ನು ಅರಿತುಕೊಂಡು ಮಾಡಿದಂತಹ, ಜವಾಬ್ದಾರಿಯನ್ನು ತಿಳಿದುಕೊಂಡು ಮಾಡಿದಂತಹ ಆರ್ಡರ್‌ನ ಗತಿ ಏನಾಯಿತು ?

First term and Second term fee was exempted in that order. Because he is the son of the soil coming from that area, he thought it was his duty to do so. When this question was put they said; 'It is not an order of the Government.' 'Do you own your responsibility for the Minister's statement or not'? If that is so what business has the Minister got to sit on that side ? He should have resigned.
ಇಷ್ಟು ಆದ ಮೇಲೆ, ಅದಕ್ಕೆ ಪುರಸ್ಕಾರ ದೊರೆಯದ ಮೇಲೆ ಏಕೆ ಈ ಮಂತ್ರಿಯವರು ಮಂತ್ರಿಮಂಡಲಕ್ಕೆ ರಾಜಿನಾಮೆ ಕೊಟ್ಟು ಏಕೆ ಬರಲಿಲ್ಲವೆಂದು ನಾನು ಕೇಳುತ್ತೇನೆ. ಇನ್ನೊಬ್ಬ ಮಂತ್ರಿ—ದೇವೇಂದ್ರಪ್ಪ ಘಾಳಪ್ಪ ಎಂಬುವರು ಇದ್ದಾರೆ. ಇವರ ಕ್ಷೇತ್ರವಾದ ಚಿಂಚೋಳಿಯಲ್ಲಿ ಜನರು ಅನ್ನ ನೀರಿಲ್ಲದೆ ಸಾಯುತ್ತಿದ್ದಾರೆ. ಹಾಗಿದ್ದರೂ ಇವರು ಅದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ವಿಫಲರಾದುದರಿಂದ ಏಕೆ ರಿಸೈನ್ ಮಾಡದೆ ಕೂತಿದ್ದಾರೆ ? ನೀವು ಇವತ್ತು ರಿಸೈನ್ ಮಾಡಿ ಬಂದರೆ ಜನರು ನಿಮಗೆ ಮರ್ಯಾದೆ ಮಾಡುತ್ತಾರೆ. ಆದರೆ ನೀವು ಹೀಗೆ ಕೂತಿರುವುದನ್ನು ನೋಡಿ ನಿಮ್ಮ ಕಡೆ ಜಿಗುಪ್ಸೆಯಿಂದ ನೋಡುತ್ತಿದ್ದಾರೆ. ಅಲ್ಲಿರುವ ಪರಿಸ್ಥಿತಿಯ ಬಗ್ಗೆ ನನಗೆ ಎಕ್ಸ್-ಎಂ ಎಲ್ ಎ ಆಗಿದ್ದಂತಹ ಚಂದ್ರಕಾಂತ್ ಎಂಬುವರು ಒಂದು ಪತ್ರವನ್ನು ಬರೆದಿದ್ದಾರೆ. ಅವರು ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗಿದ್ದರೂ ನಿಮಗೆ ಅಲ್ಲಿ ಕೂತುಕೊಳ್ಳುವುದಕ್ಕೆ ನಾಚಿಕೆಯಾಗುವುದಿಲ್ಲವೇ ; ನೀವು ಏಕೆ ರಿಸೈನ್ ಮಾಡಿ ಹೊರಗೆ ಬರಬಾರದು ? ಎಂದು ಕೇಳಿದ್ದಾರೆ. ಇದನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಕಳಿಸುತ್ತೇನೆ.

ಹಿಂದೆ ನಮ್ಮನ್ನು ಪರದೇಶೀಯರು ಆಳುತ್ತಿದ್ದರು. ಆಗ ನಮ್ಮ ಜನರನ್ನು ಅವರು ಬಹಳ ಹೀನ ದೃಷ್ಟಿಯಿಂದ ನೋಡುತ್ತಿದ್ದರು ಆದರೆ ಈಗಿನ ಪರಿಸ್ಥಿತಿ ಇನ್ನೂ ಹೆಚ್ಚಾಗಿದೆ. ಇವತ್ತು ಈ ಸರ್ಕಾರ ರಾಜ್ಯಾಂಗದಲ್ಲಿ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಎಂದು ಏನು ಹೇಳಿದೆ ಅದರ ಪ್ರಕಾರ ಸಹ ನಡೆದುಕೊಳ್ಳುತ್ತಾ ಇಲ್ಲ. ಇವತ್ತು ನಿಮಗೆ ಸ್ವಾರ್ಮೇಶನನ್ನು ಉಳಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ. ಡೈರೆಕ್ಟೀವ್ ಪ್ರಿನ್ಸಿಪಲ್‌ನಲ್ಲಿ ಏನು ಹೇಳುತ್ತದೆ ಎಂಬುದನ್ನು ಮಾನ್ಯ ಮಂತ್ರಿಯವರ ಗಮನಕ್ಕೆ ತರುತ್ತೇನೆ.

SRI H. S. SIDDAPPA.—While discussing on the report of Mr. Arumugam about the drought conditions, do we have a right to discuss about the Ministers' decisions and their actions, or, are we to say only what the people are feeling in those areas where drought conditions are prevailing ? I would like to have your ruling on this.

SRI V. N. PATIL.—Has the Government implemented a single Directive Principle ? Sri Vatal Nagaraj just now protested against the Government for not providing the bare necessities of life for the cattle in Bangalore City, namely fodder, and food, water, and sufficient employment in drought hit areas; and, therefore, asked the Ministry to pay the price for their serious omissions. He demanded the resignation of the Ministers immediately for not handling the affairs relating to drought areas. If an hon. member of this House has to resort to this extreme step of demanding resignations, it is high time the Government realise their shortcomings in discharging their onerous responsibility and mend themselves.

MADAM SPEAKER.—That matter has been decided.

SRI V. N. PATIL.—Now I will revert to Sri Arumughams Rep rt. For example, Art. 42 states that the State shall make provision for securing just and humane contditons of work and for maternity relief. Has the Government collected any data as to how many pregnant women are working on daily wages and as a result of not giving timely relief and lessure to th m, how many mothers have died. Every citizen of India has the right to adequate means of livelihood and equal pay for equal work. Starvation deaths have occured because the Directive Principles were not implemented. The Hon. Revenue Minister says that there was no death by starvation. Government is making starvation death a prestige issue. Then according to Article 47 of the Constitution it is the duty of the State to raise the level of nutrition and the standard of living and to improve public health. The framers of the Constitution bel eved that the sucessive Governments in power and their followers will at least have the conscience to see that the people will not starve and die miserably. In giving effect to this directive principle, the Government has failed miserably. The Government has not botoered itself to raise the level of nutrition and the standard of living of the people. The scarcity we are facing is not God-made scarcity. It has come because of Government's failure to fulfil its primary duty and obligations. Somebody may ask why two of my party colleagues walked out when the Arumugham Commission was suggested to tour certain parts of the State to study scarcity conditions We walked out protesting against the Government for redusing the number of members of the Team and not consulting the Opposition pefor-ehand. When it is a human problem, Government should not make it a prestige issue. They should have an open mind in such matters and consult the entire Opposi ion The previous Syndicate Ministry, in spite of its reactionary attitude and in spite of the fact that it was representing the class of contractors and landlords and having bourgeois ideas, had the courtesy to consult the Opposition in matters which related to the State in general. They consulted us on Krishna, Godavari river disputes and the Mahajan Commission Report. The Hon'ble Ministers of the present Government never bother to follow the healtly traditions of their predecessors. Since the Government is acting with an ulterion motive and deliberately obstructed the appointment of the Study Team raising all sorts of objections about its composition and the commencement of its work; with the result the One Man Commission had to commence its work 10 days' after the commencement of this Session. On account of the hindrance of a particular party, a single Member of this House had to be sent to the scarcity areas to study the condition and report. They wanted to make that one Member a scapegoat. Contrary to their expectation, that one-man Committee Member has exerted his utmost and given a good report.

MADAM SPEAKER.—The appointment of that Member to study the drought conditions and report was decided by the House

SRI V. N. PATIL.—Yes. But the confusion, misunder-standing, and the delay that related to it could have been avoided. Inspite of the short time at his disposal, that member of the Opposition has given a good report and we admire him for it, A single member has produced such a massive and informative report. But the approach and attitude of the Government to the Commission was not proper, The tour of the Commission was not given publicity with the result people could not meet the Commission in large numbers and represent their grievances and demands.

From the Report before us, one thing is clear, that is, that there is no co ordination between the promises and performance of the Ministers. Allthough various Ministers have held out number of promises none of them was implemented. We have no other go but to infer that they were hypocritical assurances. People's misery is being exploited. We did not have such explotation after the British left this country. How long can this explotation be telerated by the people. When will the Government put on end to people's misery? When it was brought to the notice of the Minister for public works that contracter was paying Rs. 1.25 per day to the labourers, he promised that he would order payment of Rs. 3.25. He took immediate action and saw that that contracter was block-listed. But, the very next day, that Contracter secured another three contracts. We brought to the notice of the Hon'ble Minister that an official of the Forest Department in Bidar District was manipulating records and claming more amounts for payment even though lesser number of labourers were employed. We also passed a resolution that this Officer who was exploiting the misery of the people should be immediately sacked. When the Hon'ble Minister visited our district, we brought to his notice the misconduct of this Forest Department official; the Minister promised that he would suitably deal with the official. Though the Minister sent word to the concerned officer, he never bothered to see the Minister. I have got the greatest respect and regard for the Minister for public works.

SRI H, M CHANNABASAPPA (Minister for public works and Electricity).—Madam, the hon. member goes on making statements irrespective of whether what he is saying are facts or no facts. I shall welcome the hon. members criticism if he makes constructive criticisms.

SRI V. N. PATIL.—I am making a factual statement here. I followed the Minister up to Chincholi as a matter of courtesy. This Forest Department official did not meet him.

SRI H. M. CHANNABASAPPA.—Merely because the official did not meet me when the hon. member was with me, it does not mean that he has not seen me at all.

SRI V. N. PATIL.—The official I am referring to is an arrogant person who is manipulating records. This should not be the attitude of Government officials.

SRI H. M. CHANNABASAPPA.—The hon. member can draw his own conclusions. But he must make statements on facts. He should nos make unnecessary inferences to his own whims and fancies.

SRI V. N. PATIL.—When we become touchy, we attribute motives' I am the last person to make any statements with motives.

SRI H. M. CHANNABASAPPA —Madam, he is making wrong statement.

SRI V. N. PATIL.—Our people are suffering. I am posing a question. The officers should implicitly follow whatever instructions are given to them by their superiors. They should not become monarches. It is my duty to bring to the notice of the Government that this official is indulging in some sort of manipalution of records. Where 300 to 400 labourers are ingaged by him, he shows on record that 1,200 were employed. If he shows false figures and makes false claims, public money will be wasted. I am entitled to say what I consider to be correct. If it hurts the feelings of the Minister, I cannot help.

The Armugam Commission has given its report. Here are certain facts. We the people of Bidar District demand the right to work. Karanjia project and canal works may be taken up. Only 8000 to 9000 people are at present working. We want this figure to increase to 25.000 in the coming months. I have with me week-wise list of persons working :

on 11-8-72	75 persons
on 29-8-72	5481 people started work

The peak figure reached was 9148 on 15th September 1972. We expected that this figure will further increase and men will get at least a marcel of food. What they demand is not charity but it is a question of human rights to survive. On 25th September 72 there were 8568 people working when the Hon'ble Chief Minister visited our area —Bidar and Gulburga districts. We requested the Hon'ble Chief Minister kindly to see that more people are engaged in work. I said this when we welcomed the Chief Minister at Humnabad and I also said that not only Bidar district, but there is Gulburga Dist. where there is famine and there are other districts. The Hon'ble Chief Minister assured us and said that he will solve all the problems. However it is unpalatable and painful to other colleagues. Since the Chief Minister and the P.W. Minister left the place many of the works have stopped. When I asked them, there are no further funds. I went to Yadgir and asked them kindly. do the needful to Actually, what answer I got? It does not mean that every answer should be

(Sri. V. N. Patil)

criticised. About 10-30 in the night I asked them : will you please call the Divisional Commissioner? I will talk to him. The Deputy Commissioner said, we will see him tomorrow morning. A Member of this House had to sleep on the lawns with a bed-sheet. Next morning, he went to the Divisional Commissioner and when I asked him, he said : The Chief Minister has told me certain things. I will do it. This is the approach, with slight modification in the past methods will bring better solution to the problem. The officers will think that what they say are not the final word. There is somebody else. And they say, when Ministers give orders, I am bound to oblige them. I am bound to follow those instructions, When the Hon'ble Chief Minister left Bidar distric t large numbers of people were employed and kept on work till the Hon'ble Chief Minister left the place. After the departure of the Chief Minister, it went down. Scarcity conditions became worse. Why not take legislators into confidence? From the Thasildar, we will have to go to Assistant Engineer and from the Asst. Engineer to the Deputy Commissioner and whenever I insisted upon them to give the order in writing, they said, please do not make our children to starve. We cannot give anything in writing. If that is the approath, we are entitled to criticise the Government in spite of the fact that we want this Government to survive.

Coming to certain points about Bidar and Gulburga District, I should say that for the last three years, the Armugam Report say that drought conditions were existing in some 25 per cent of the areas I represented to the Hon'ble Minister for Revenue several times on the floor of this House. We also told him that if fodder cannot be sent to those places, there is no hope for the cattle. I have to bring to the notice of the Government with great regret that more than 50 to 60 per cent of the cattle is finished. Today, even if there is some welcome shower, the agriculturist in our area does not have the bullocks to cultivate his land, nor has he seeds with him, nor he has any utensils left with him. If the same thing had happened in the old Mysore area, such a thing would not have been done. Because it is at a distance and the area comes from Hyderabad Karnatak and Bombay Karnatak, the Government is deliberately neglecting these parts. That is my impression. Before it is too late, I request you to mend your fences, so that we can have a homogenous atmosphere and we can work with a united heart.

Regarding assurances given by the Hon'ble Ministers in their tours, none of the Minister has ever seriously thought of the difficulties and plight of the people in those areas Let them do it for the betterment of the people. The idea uppermost in everybody's mind here is that officers will carry them out and the Cabinet wile O.K. it. Several assurances were given. In some places, assuranc.

was given that 5 kg. of grain will be given per month. The Hon'ble Minister Smt. VAZ said in another place that 1 KG will be distributed. The fact is sir, even the destitutes are not attended to.

We had also suggested that weavers. those who become helpess, coblers ..

SRI H.M. CHANNABASAPPA : During my tour I requested the Hon'ble Member to stay in Bidar and look after the destitutes of the several villages and help us in seeing that destitutes also have some food. But unfortunately, he is always in Bangalore and he is supposed to say what is happening in Bidar ;

SRI V. N. PATIL : You ask your Congress President there to maintain a register and let that register be sent by a police officer to my constituency every day and let them collect my signature. This is most ridiculous. The other day, the Hon'ble Minister Sri Hutchmasthi Gowda said the same thing. It is not the concern of your party people whether I am going to stay there or not. I have spent more than four months in that part of the country. Hardly three days I am here. If this is the talk let loose by your party people, I would say it is only propaganda stunt and I will not answer that.

2-00 P.M.

SRI H.M. CHANNABASAPPA : I made an appeal to the hon. Member to try to help us in locating the destitute persons so that adequate relief can be given to them.

SRI V. N. PATIL : Here are some of the wonderful promises made by the Government. The Hon. Deputy Minister Sri Devendre ppa Galappa assured on 30th August 1272 that the Government would take all steps to provide employment to all those who have becoma unemployed due to failure of rains. The Government has failed to provide employement. Not even five percent of the working populas tion has been provided with employment so far. If this is famine reliev work, then this Government definitely does not deserve to continue to have people's faith further. I am not going into all those promises. The Hon. Minister for Public Works assured on 5th September 1972 that the Government would take up lift irrigation projects to see that short period crops are possible. It is more than two months since he has visited Bijapur. Still nothing much has been done under lift irrigation.

SRI H.M. CHANNABASAPPA : We have spent Rs.50 lakhs on roads and 1,500 kilo meters have been done in Gulbarga. In all 2,500 kilo meters have been done and yet the hon. Member says that no work has been given to the people. To Make a blind statement like that is not correct.

SRI V. N. PATIL : I am not disputing the money spent. If the life irrigation schemes had been taken up, they should have taken up 10 Wells per village. Even two wells have not been taken up during the last two months. Government have not implemented all the assurances they have given. Have they provided at least one well to each villa e during the last two months? I can categorically say that they have not done so. The Government have thrown the prople to the wolves. The people are unable to secure any loan. After drought has set in not even 100 wells have been sanctioned in those parts. I do not mean to say that money has not been spent but what I mean to say is that money has been spent unwisely and that it is not adequate.

There is no planned approach to the problem. In the District Famine Relief Committee we have said that the Geologists should make a survey and tell us how many wells could be taken up in Bidar and Gulbarga Districts. They do not know what are the requirements and potentialities, how much money they have got and how much money they expect by way of Central assistance. When there is no such planned approach on a scientific basis, how are we going to be successful? The method so far adopted is the same old method of Rajas and Maharajs who used to say, "Don't worry; we are aware of your problems and money is no consideration". They say that they have given blank cheques but they have not been honoured in any bank so far. There should be a human approach to the problem. I cannot tolerate seeing my people dying of starvation. In every village you will find two or three starvation deaths. Fodder is sold at 13 paise per kg. whereas in the open market it is available at 15 paise per kg. So, our suggestion is that Government should give work to the people. If they are unable to give work, let them give doles to them. Let them give at least 8 or 12 annas per day to the people so that they can survive if they cannot give them work. In the canal and project areas they are being paid 12 annas or 14 annas per day whereas according to Government rate it is Rs. 3 per day. The money given for digging of wells can never be misutilised because every pie that Government gives to the agriculturists will be utilised for digging wells and not for any other purpose. Let all the existing wells be deepened at Government cost and let not anything in cash be given for that purpose. Ten wells per village should be the target of Government. At this rate the people of entire villages will have to migrate to other places.

I would like to suggest one more point. We have heard that Birlas and others are giving transportation facilities. We wouod like to request you to give free transportation and we will distribute fodder according to our strength and what relief we can give, we will give.

Regarding canal works, it is very necessary. In addition at least two or three minor irrigation works in every taluk must be taken up so that it can engage some people.

The question of destitutes has become very difficult and students are moving from one place to another. This should be tackled in all earnestness. I request the Government to exempt payment of all fees irrespective of whether they study in schools or colleges. Thank you.

ಶ್ರೀಮತಿ ವಿಜಯಾ ದೇಸಾಯಿ (ಚಿತಾಪುರ.) –ಮಾನ್ಯ ಅಧ್ಯಕ್ಷರೇ, ಈ ಹೊತ್ತಿನ ದಿವಸ ನಮ್ಮ ಮುಂದೆ ಇರುವ ಆಮರ್ುಗಂ ವರದಿ ಬಗ್ಗೆ ಒಂದೆರೆಡು ವಿಷಯಗಳನ್ನು ನಾನು ಮಾತನಾಡಲು ಬಯಸು ತ್ತಿದ್ದೇನೆ. ಅವರ ವರದಿಯ ಪ್ರಕಾರ ನಾಲ್ಕು ಜಿಲ್ಲೆಗಳಲ್ಲಿ ಬರಗಾಲ ಒಂದು ಭೀಕರ ರೂಪ ತಾಳಿದುದು ಎಂದ ಕಾಣಸಿದ್ದಾರೆ. ಅದು ಒಪ್ಪಿಕೊಳ್ಳತಕ್ಕ ವಿಷಯವಾಗಿದೆ. ಅದೇ ಪ್ರಕಾರವಾಗಿ ಗುಲ್ಬರ್ಗದಲ್ಲಿ ಈಗ ನೂರು ವರ್ಷಗಳ ಹಿಂದೆ ನಾವು ನೋಡಿದ್ದರಲ್ಲಿ ಐದು ಸಲ ಇದೇ ರೀತಿಯ ಕ್ಷಾಮ ಪರಸ್ಥಿತಿ ಇತ್ತು ಎಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಈಗ ಐದು ವರ್ಷಗಳಿಂದ ನಾವು ನೋಡುತ್ತಿರಲಾಗಿ ನಾವು ಬಿದರೆ, ಗಲ್ಬರ್ಗದಲ್ಲಿ ಪ್ರತಿಯೊಂದು ತಾಲ್ಲೂಕು ಹೆಡಕ್ವಾರ್ಟರಿನಲ್ಲಿ ಡಾಕ್ ಬಂಗಲೆ ರೆಸ್ಟ್ ಹೌಸಸ್ ಕಟ್ಟುವುದಕ್ಕೆ ವ್ಯಯ ಮಾಡಿದ್ದೇವೆಯೋ ಅದನ್ನು ನೀರಾವರಿ ಕಾರ್ಯಗಳಿಗೆ ಖರ್ಚು ಮಾಡಿದ್ದರ ಇಂಥ ಒಂದು ಕ್ಷಾಮ ಪರಿಸ್ಥಿತಿ ಈ ಹೊತ್ತಿನ ದಿವಸ ನಾವು ಎದರಿಸುವ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಬಹಳ ವಿಷಾದದಿಂದ ಹೇಳ ಬೇಕಾಗಿದೆ. ಅಷ್ಟೇ ಅಲ್ಲದೆ, ಈಗಾಗಲೇ ವರದಿಯ 11ನೇ ಪುಟದಲ್ಲಿ ಹೇಳಿದ ಪ್ರಕಾರ 5 ಕಿಲೋ ಮಿಟರ್ ರೇಡಿಯಸ್‌ನಲ್ಲಿ ಒಂದು ಕೆಲಸವನು ತೆಗೆದುಕೊಳ್ಳಬೇಕೆಂದು ಏನು ಹೇಳಿದ್ದಾರೆ, ಅದನ್ನು ಈಗಾಗಲೇ ತೆಗೆದು ಕೊಂಡದ್ದಾಗಿದೆ ಆದರೆ ಹಳ್ಳಿಯ ಒಂದು ರಸ್ತೆ ಕೆಲಸವನ್ನು ತೆಗೆದುಕೊಂಡರೆ 20 –300 ಜನ ಬಂದು ಆ ಕೆಲಸ ಎರಡು ಮೂರು ದಿವಸದಲ್ಲಿ ಪೂರ್ತಿಯಾಗುತ್ತದೆ. ಆ ಜನಗಳಿಗೆ ಮತ್ತೆ ಕೆಲಸವಿಲ್ಲದೆ ಇದ್ದ ಹಾಗೆ ಆಗಿದೆ ಅಂಥ ಕಡೆಗಳಲ್ಲಿ ಯಾವುದಾದರೂ ಪರ್ಮನೆಂಟ್ ರಿಲೀಫ್ ಮೆಷರ್ ತೆಗೆದುಕೊಂಡು ಅಲ್ಲಿಯ ಜನರಿಗೆ ಜಾಸ್ತಿ ದಿವಸಗಳವರೆಗೂ ಕೆಲಸ ಒದಗಿಸಿಕೊಡಬೇಕು ಎಂದು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಸಾಯಿಲ್ ಕನಸರ್ವೇಷನನಲ್ಲಿ ಪ್ರತಿ ತಾಲ್ಲೂಕಿನಲ್ಲಿ 20 ಸೆಂಟರ್ ತೆಗೆಯಬೇಕು ಎಂದು ಒಂದು ಮನವಿಯನ್ನು ಕೊಟ್ಟಿದ್ದೆವು. ಅದೇ ಪ್ರಕಾರವಾಗಿ ಸರ್ಕಾರದವರೂ ಒಪ್ಪಿಕೊಂಡಿದ್ದರು. ಆದರೆ ಇನ್ನೂವರೆಗೆ ಒಂದು ತಾಲ್ಲೂಕಿನಲ್ಲಿ 16, ಇನ್ನೊಂದು ತಾಲ್ಲೂಕಿನಲ್ಲಿ 12, ನಮ್ಮ ತಾಲ್ಲೂಕಿನಲ್ಲಿ 10 ಕೆಲವು ಕಡೆ ಕಡೆಗಳಲ್ಲಿ 8-9 ಸೆಂಟರ್‌ಗಳನ್ನು ಮಾತ್ರ ಮಾಡಿದ್ದಾರೆ. ಎಲ್ಲ ಕಡೆಯೂ 20 ಸೆಂಟರ್ಸ ಮಾಡಿ ಸಾಕಷ್ಟು ಕೆಲಸವನ್ನು ಜನರಿಗೆ ಒದಗಿಸಿಕೊಡಬೇಕು. ವರದಿಯಲ್ಲಿ ಹೇಳಿದ ಹಾಗೆ ಅವರಿಗೆ ಕೊಡುವ ಕೂಲಿ ಕಡಿಮೆ ಇದೆ ಎಂದು ನನ್ನ ಅಭಿಪ್ರಾಯ. ಅಲ್ಲಿಯ ಭೂಮಿಯಲ್ಲಿ ತೇವಾಂಶವಿಲ್ಲದೆ ಇರುವುದರಿಂದ ಕೆಲಸ ನಡೆಯುವುದು ಕಷ್ಟ. ಪ್ರತಿಯೊಬ್ಬರಿಗೂ ಒಂದು ದಿನಕ್ಕೆ ಮೂರು ರೂಪಾಯಿ ಕೊಟ್ಟರೆ ಸರಿಯಾಗುತ ವೆ ಎಂದು ನಾನು ಹೇಳಬಯಸುತ್ತೇನೆ.

ಮೇವನ್ನು ಒಂದು ಕೆ.ಜಿ.ಗೆ. 25 ಪೈಸೆ ಪ್ರಕಾರ ಕೊಡುತ್ತಿದ್ದಾರೆ. ಹಳ್ಳಿಯ ಜನರಿಗೆ ಅದನ್ನು ತೆಗೆದುಕೊಳ್ಳುವುದಕ್ಕೆ ಯಾವರೀತಿಯಿಂದಲೂ ಶಕ್ತಿ ಇಲ್ಲ ಅದಕ್ಕಾಗಿ ಫ್ರೀ ಆಗಿ ಸರ್ಕಾರದಿಂದ ಕೊಡ ಬೇಕೆಂದು ಹೇಳುತ್ತೇನೆ.

ಅದೇ ರೀತಿಯಾಗಿ ಮಧ್ಯಮ ವರ್ಗದ ರೈತರಿದ್ದಾರೆ. ಅವರಿಗೆ ಯಾವರೀತಿಯಿಂದಲಾದರೂ ಹೊಲಗಳ ಮೇಲೆ ಸರ್ಕಾರದಿಂದಲಾಗಲೀ, ಬ್ಯಾಂಕುಗಳ ಮೂಲಕವಾಗಿ ಆಗಲೀ ಸಾಲ ಕೊಡುವ ಹಾಗೆ ವ್ಯವಸ್ಥೆ ಮಾಡಿ ಸಾಲಗಳನ್ನು ಕೊಡಬೇಕೆಂದು ಹೇಳುತ್ತೇನೆ.

ಡೆಸ್ಟಿಟ್ಯೂಟ್ಸ್, ಡಿಸೇಬಲ್ಡ್, ಹ್ಯಾಂಡಿಕ್ಯಾಪ್ಡ್. ಇಂಥವರಿಗೆಲ್ಲ ಒಬ್ಬೊಬ್ಬರಿಗೆ 8 ಕೆ.ಜಿ. ಆಹಾರ ಧನ್ಯವನ್ನು ಕೊಡುತ್ತಿದ್ದಾರೆ. ವಿಧವೆಯರು, ಡೆಸರ್ಟೆಡ್ ವುಮೆನ್, ಕೆಲವರು ಮುದುಕರು ಇಂಥವರಿಗೆ ಕೂಡ ಆಹಾರವನ್ನು ಹಂಚಿದರೆ ಹೆಚ್ಚು ರೀತಿಯಿಂದ ಸೌಭ್ಯ ಒದಗಿಸಿದ ಹಾಗೆ ಆಗುತ್ತದೆ.

ಮಿಡ್ ಡೇ ಮೀಲ್ಸ್ 10 ಸಾವಿರ ಜನಗಳಿಗೆ ಒದಗಿಸಲಾಗುತ್ತಿತ್ತು. ಈವಾಗ ಅದು ಆರು ಸಾವಿರಕ್ಕೆ ಇಳಿದಿದೆ. ಪ್ರಪಂಚದ ಆಹಾರ ಸಂಸ್ಥೆಯವರು ಒಂದು ಯೊಜನೆಯನ್ನು ತೆಗೆದಿದ್ದಾರೆ. ಅದರ ಪ್ರಕಾರ ವಾಗಿ 200 ಕೆ.ಜಿ. ಗೋದಿ ಮತ್ತು 20 ಕೆ.ಜಿ. ಎಣ್ಣೆ ಕೊಡುತ್ತಾರೆ. ಅವನ್ನು ಮಿಡ್ ಡೇ ಮೀಲ್ಸ್ ಜೊತೆಗೆ ತೆಗೆದುಕೊಂಡರೆ ಸುಮಾರು 20 ಸಾವಿರ ಹುಡುಗರಿಗೆ ಮಿಡ್ ಡೇ ಮೀಲ್ಸ್ ಒದಗಿಸಿಕೊಡಬಹುದು.

ವರದಿಯ 19ನೇ ಪುಟದಲ್ಲಿ ಎ.ಸಿ.ಸಿ. ಸಿಮೆಂಟ್ ಕಾರ್ಖಾನೆಯವರು 20 ಕ್ವಾರಿಗಳನ್ನು ಮುಚ್ಚಿ ದ್ದರಿಂದ 30 ಸಾವಿರ ಕುಶಲ ಕೆಲಸಗಾರರು ಕೆಲಸವಿಲ್ಲದೆ ಇದ್ದಾರೆಂದು ಹೇಳಿದ್ದಾರೆ. ಚಿತಾಪುರ ತಾಲ್ಲೂಕಿ ನಲ್ಲಿ ಈ ಕ್ವಾರಿಗಳನ್ನು ಸ್ಟೋನ ಮಾರ್ಕೆಟಿಂಗ್ ಸಿಂಡಿಕೇಟನವರು ನಡೆಸುತ್ತಿದ್ದಾರೆ. ಅದು ಎ.ಸಿ.ಸಿ. ಅವರಿಗೆ ಸೇರಿದ್ದಲ್ಲ. 20 ಕ್ವಾರಿಗಳಲ್ಲಿ ಕೆಲಸ ಮಾಡದೆ ಇರುವುದು ಐದು ಕ್ವಾರಿಗಳು ಮಾತ್ರ ಅವರು ಡೆಡ್ ರೆಂಟ್ ಮತ್ತು ರಾಯಲ್ಟಿ ಕೊಡದೆ ಇದ್ದು ಲೀಸ್ ರಿನ್ಯೂ ಮಾಡಿಸಿಕೊಂಡಿಲ್ಲ ಉಳಿದ ಕ್ವಾರಿಗಳು ಕೆಲಸ ಮಾಡುತ್ತಿವೆ. ಈ ಐದು ಕ್ವಾರಿಗಳ ಸಂಬಂಧದಲ್ಲಿ ನಾವು ಕೈಗಾರಿಕಾ ಮಂತ್ರಿಗಳನ್ನು

(SRI V.N. PATIL)

ಈಗಾಗಲೇ ಕಂಡು ಹೇಳಿದ್ದೇವೆ. ಅವರು ಅವುಗಳನ್ನು ಪ್ರಾರಂಭ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಅವುಗಳನ್ನು ಪ್ರಾರಂಭ ಮಾಡಬೇಕೆಂದು ಇನ್ನೊಮ್ಮೆ ಹೇಳ ಬಯಸುತ್ತೇನೆ. 30 ಸಾವಿರ ಕುಶಲ ಕೆಲಸಗಾರರು ಎಂದು ಹೇಳಿದ್ದಾರೆ. ಅಲ್ಲಿ ಕೆಲಸ ಮಾಡುವವರು 20 ಸಾವಿರ ಕುಶಲ ಕೆಲಸಗಾರರಿದ್ದಾರೆ. ಅದರಲ್ಲಿ ಐದು ಸಾವಿರ ಜನಗಳಿಗೆ ಮಾತ್ರ ಕೆಲಸವಿಲ್ಲ. ಈಗ ನಿಂತಿರುವ ಕ್ವಾರೀಸ್ ಕೆಲಸ ಪ್ರಾರಂಭ ಮಾಡಿದರೆ ಆ ಜನರಿಗೂ ಸೌಲಭ್ಯ ಸಿಕ್ಕುತ್ತದೆ ಎಂದು ನಾನು ಹೇಳುತ್ತೇನೆ.

ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೊಂದುಬೋರವೆಲ್ ಈಗಲೇ ತೆಗೆಯುವುದು ಆವಶ್ಯಕ. ಇನ್ನು ಮುಂದೆ ಬರುವಂಥ ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಅಲ್ಲಿ ಕುಡಿಯಲು ನೀರು ಸಿಕ್ಕುವುದಿಲ್ಲ. ಅಭಾವ ಪರಿಸ್ಥಿತಿ ಇರುವಂಥ ಭಾಗಗಳಲ್ಲಿ ಮುಂದೆ ಏನು ಪರಿಸ್ಥಿತಿ ಆಗಬಹುದು ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಅದಕ್ಕಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೊಂದು ಬೋರವೆಲ್ ತೆಗೆಯಬೇಕೆಂದು ಹೇಳುತ್ತೇನೆ.

ಪ್ರತಿ ಹಳ್ಳಿಯಲ್ಲಿಯೂ 10 ನೀರಾವರಿ ಬಾವಿಗಳನ್ನು ತೆಗೆಯುತ್ತೇವೆಂದು ಈಗಾಗಲೇ ಹೇಳಿದ ಪ್ರಕಾರವಾಗಿ ಬಾವಿಗಳನ್ನು ತೆಗೆಯಲೇಬೇಕೆಂದು ಹೇಳುತ್ತೇನೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಈ ಕೆಲಸ ಸಾಧ್ಯವಾಗಲಾರದು ಆದ್ದರಿಂದ ಡಿಪಾರ್ಟ್‌ಮೆಂಟಿನಿಂದ ತೆಗೆದು, ಆ ಬಾವಿಗಳು ಯಾವ ಮನುಷ್ಯರ ಹೊಲ್ಲದಲ್ಲಿ ಇರುತ್ತವೆಯೋ ಅವರಿಂದ ಆ ಮೇಲೆ ಅದಕ್ಕೆ ಖರ್ಚಾಗಿರುವ ಹಣವನ್ನು ಪ್ರತಿ ವರ್ಷ ಕಂತಿನ ಪ್ರಕಾರ ಪಡೆಯಬೇಕು.

ಡೆಪ್ಯುಟಿ ಕಮಿಷನರು ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿಯೂ ಒಂದೊಂದು ಬ್ಲೂಪ್ರಿಂಟ್ ಮಾಡಿ ಇಟ್ಟಿದ್ದಾರೆ ಎಷ್ಟು ರಸ್ತೆಗಳನ್ನು ತಗೆದುಕೊಳ್ಳಬೇಕು, ಯಾವ ರಸ್ತೆಗಳಿಗೆ ಮುರ್ರಂ ಕೇಸಿಂಗ್ ಹಾಕಬೇಕು, ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಕೆಲಸಗಳನ್ನು ತೆಗೆದುಕೊಳ್ಳಬೇಕು, ಎಲ್ಲ ಕೆರೆಗಳ ಮತ್ತು ಮೈನರ್ ಇರಿಗೇಷನ್ ಕೆಲಸ ತೆಗೆದುಕೊಳ್ಳಬೇಕು ಎನ್ನುವುವರ ಬಗ್ಗೆ ಒಂದು ಬ್ಲೂಪ್ರಿಂಟ್ ತಯಾರು ಮಾಡಿ ಇಟ್ಟಿದ್ದಾರೆ. ಅದರ ಪ್ರಕಾರ ನಾವು ಪ್ರತಿಯೊಂದು ತಾಲ್ಲೂಕಿನಲ್ಲಿ ಕೆಲಸಗಳನ್ನು ತೆಗೆದುಕೊಂಡರೆ ಈ ದಿಸೆಯಲ್ಲಿ ಪರಸ್ಥಿತಿಯನ್ನು ಎದುರಿಸಲಿಕ್ಕೆ ಆಗಬಹುದು ಎಂದು ನಾನು ಹೇಳ ಬಯಸುತ್ತೇನೆ.

ವರದಿಯ ಪ್ರಕಾರವಾಗಿ ಗುಲ್ಬರ್ಗ ಜಿಲ್ಲೆಯ ಜನಸಂಖ್ಯೆ 17,39,220 ಅದರಲ್ಲಿ ಕೇವಲ 1,25,581 ಜನರಿಗೆ ಕೆಲಸವನ್ನು ಒದಗಿಸಿದ್ದಾರೆಂದು ಹೇಳಿದ್ದಾರೆ. ಆ ಜನಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಸರ್ಕಾರಿ ನೌಕರರು ರೈಲ್ವೆ ನೌಕರರು ಎಂ ಎಸ್. ಕೆ. ಮಿಲ್ಸ್ ಕೆಲಸಗಾರರು, ಆಯಿಲ್ ಮಿಲ್ ಕೆಲಸಗಾರರು, ಮಧ್ಯಾಹ್ನದ ಉಪಹಾರವನ್ನು ಒದಗಿಸುವವರ ಸಂಖ್ಯೆ ಇವೆಲ್ಲ ಸೇರಿಲ್ಲ ಎಂದು ನನ್ನ ಭಾವನೆ. ಸರಿಯಾಗಿ ಬರಗಾಲದಿಂದ ತೊಂದರೆಗೆ ಒಳಗಾಗಿರುವವರ ಸಂಖ್ಯೆ ಎಂದರೆ 40 ಪರ್ಸೆಂಟ್ ಎಂದರೆ ಸುಮಾರು ಆರು ಲಕ್ಷ ಜನ. ಇವರಲ್ಲಿ 1,25,581 ಜನರಿಗೆ ಕೆಲಸ ಕೊಟ್ಟಿದ್ದಾರೆ. ಆದನ್ನು ಐದಾರು ಲಕ್ಷ ಜನಗಳಿಗೆ ಒದಗಿಸುವಂತೆ ಮಾಡಿದರೆ ಈಗ ಇರುವ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸಾಧ್ಯವೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಾಪೂಗೌಡ ರಾಯಪ್ಪ (ಷಹಾಪೂರ್).—ಸನ್ಮಾನ್ಯ ಸಭಾಪತಿಗಳೇ, ಈ ಕ್ಷಾಮದ ಪರಿಸ್ಥಿತಿಯನ್ನು ಈ ಮನೆಯ ಒಳಗೆ ಮತ್ತು ಹೊರಗೆ ಸುಮಾರು ಸೆಪ್ಟೆಂಬರ್ ತಿಂಗಳಿನಿಂದ ಇಲ್ಲಿಯವರೆಗೂ ಚರ್ಚೆ ಮಾಡುತ್ತಾ ಇದ್ದೇವೆ. ಕ್ಷಾಮದ ಪರಿಸ್ಥಿತಿ, ದನಗಳ ಪರಿಸ್ಥಿತಿ ಇವರ ಅರಿವು ಸರ್ಕಾರಕ್ಕೆ ಇಲ್ಲ ಅಂತ ತಿಳಿದುಕೊಂಡಿಲ್ಲ. ಸರ್ಕಾರವು ಅಧಿಕಾರಿಗಳ ಮುಖಾಂತರ ಮತ್ತು ಮಂತ್ರಿಗಳ ಪ್ರವಾಸದಲ್ಲಿ ಆ ಭಾಗದ ಪರಿಸ್ಥಿತಿಯನ್ನು ತಿಳಿದುಕೊಳ್ಳತಕ್ಕಂಥ ಹೆಚಿನ ಪ್ರಯತ್ನ ಮಾಡಿದ್ದಾರೆ ಅವರು ಮಾಡಿದ ಪ್ರಯತ್ನದಲ್ಲಿ ನಾನು ಹೇಳಬೇಕಾದರೆ ಇಡೀ ಸರ್ಕಾರ ಅರ್ಧ ಮಂತ್ರಿಮಂಡಲಿ ಗುಲಬರ್ಗ, ಬೀದರ್ ಮತ್ತು ಬಿಜಾಪುರ ಜಿಲ್ಲೆಗೆ ಭೇಟಿ ಕೊಟ್ಟಿದೆ. ಈ ಬರಗಾಲದ ಪರಿಸ್ಥಿತಿಯನ್ನು ಯಾವರೀತಿಯಾಗಿ ಎದುರಿಸಬೇಕು ಎನ್ನುವ ಬಗ್ಗೆ ಸೂಚನೆಗಳನ್ನು ಕೊಟ್ಟಿದ್ದಾರೆ. ಆದರೆ ಇಂದಿನ ದಿವಸ ಅವರು ಮಾಡತಕ್ಕಂಥ ಕೆಲಸ ನೋಡಿದರೆ ನನಗೆ ಅತ್ಯಂತ ಶೋಚನೀಯ ಮತ್ತು ದುಃಖವಾಗುತ್ತದೆ. ಏತಕ್ಕೆಂದರೆ ಸರ್ಕಾರಕ್ಕೆ ಈ ಪರಿಸ್ಥಿತಿಯನ್ನು ಎದುರಿಸತಕ್ಕಂಥ ಶಕ್ತಿ ಇಲ್ಲ ಮತ್ತು ಸಂಪೂರ್ಣವಾಗಿ ತಿಳುವಳಿಕೆ ಇಲ್ಲ ಮತ್ತು ಸಲಹೆ ಪಡೆಯುವುದರಲ್ಲಿಯೂ ಏತಕ್ಕೆ ವಿಫಲವಾಗಿದೆ ಎನ್ನುವುದು ಹೇಳಬೇಕು. ಒಂದು ವೇಳೆ ಅವರಿಗೆ ತಿಳುವಳಿಕೆ ಇದ್ದರೂ ಕೂಡ ಈ ಪರಿಸ್ಥಿತಿ ಆಗಸ್ಟ್ ತಿಂಗಳಲ್ಲೇ

ಪ್ರಾರಂಭವಾಗಿ ಅಕ್ಟೋಬರ್, ನವಂಬರ್, ಡಿಸೆಂಬರ್‌ರವರೆಗೆ ಅತ್ಯಂತ ಉಗ್ರವಾದ ಪರಿಸ್ಥಿತಿ ಮುಟ್ಟಕ್ಕೆ ಮುಟ್ಟಿದರೂ ಕೂಡ ಇದನ್ನು ಎದುರಿಸಲಿಕ್ಕೆ ಒಂದು ಸಮರ್ಥನೆ, ಶಕ್ತಿ ಸರ್ಕಾರಕ್ಕೆ ವಶಕ್ಕೆ ಬರಲಿಲ್ಲ ಎನ್ನುವ ಸಂದೇಹ ಇರುವುದರಿಂದ ಇದನ್ನು ಅಂತರ್ಮುಖವಾಗಿ ಯೋಚಿಸುವ ಪರಿಸ್ಥಿತಿಗೆ ಬಂದಿದೆ. ಇಂಥ ಪರಿಸ್ಥಿತಿಯನ್ನು ಇಂದಿನ ದಿವಸ ಸನ್ಮಾನ್ಯ ಶ್ರೀ ಆರ್ಮುಗಂರವರು ಈ ಮನೆಯ ಆದೇಶದ ಮೇರೆಗೆ ಅಲ್ಲಿ ಹೋಗಿ ಬಂದು ಅವರು ಕಣ್ಣಾರೆ ಕಂಡಂಥ ವರದಿ ಬಗ್ಗೆ ಏನು ಒಂದು ಹೆಚ್ಚು ಬೆಳಕನ್ನು ಅವರ ವರದಿಯಲ್ಲಿ ಚೆಲ್ಲಿದ್ದಾರೋ ಅದೇ ಮಾತನ್ನು ಇಂದಿನ ದಿವಸ ವಿರೋಧ ಪಕ್ಷದ ಸದಸ್ಯರೂ ಮತ್ತು ಇತರ ಸದಸ್ಯರೂ ಕೂಡ ಸರ್ಕಾರಕ್ಕೆ ಮನವರಿಕೆ ಆಗುವಂತೆ ಹೇಳಿದ್ದಾರೆ. ಆದರೂ ಕೂಡ ಸರ್ಕಾರ ಸಮರ್ಪಕ ವಾದ ಹೆಜ್ಜೆಯನ್ನು ಅಲ್ಲಿಯ ಜನರಿಗೆ ತೃಪ್ತಿಕರವಾದಂಥ ಕೆಲಸ ಕಾರ್ಯಗಳನ್ನು ಇಂದಿನ ದಿವಸ ತೆಗೆದು ಕೊಂಡಿಲ್ಲ ; ಎನ್ನುವ ಮಾತನ್ನು ತಮ್ಮ ಮುಖಾಂತರ ಸ್ಪಷ್ಟಪಡಿಸುತ್ತೇನೆ. ಮತ್ತೆ ಮುಂದಿನ ಅಕ್ಟೋಬರ್, ನವಂಬರ್ ತಿಂಗಳವರೆಗೆ ಅಲ್ಲಿನ ಪರಿಸ್ಥಿತಿ ಏನಾಗುತ್ತದೆ ಅದನ್ನೂ ಕೂಡ ಸರಿಯಾಗಿ ವರದಿಯಲ್ಲಿ ಹೇಳಲಿಲ್ಲ ಎಂದು ನನಗೆ ಅನಿಸುತ್ತದೆ. ಆದುದರಿಂದ ಮುಂದಿನ ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ ಈ ಸದನ ಮತ್ತೆ ಕರೆದಾಗ ಆ ಕಾಲಕ್ಕೂ ಕೂಡ ಮತ್ತೆ ಈ ಪ್ರಶ್ನೆ ಬರುತ್ತದೆ ಎಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತೇನೆ. ಶ್ರೀಮಾನ್ ಆರ್ಮುಗಂರವರು ಸುಮಾರು ೨೫೧೬ ಕಿಲೋಮೀಟರ್ ಮಾತ್ರ ಪ್ರವಾಸ ಮಾಡಿದ್ದಾರೆ. ಅವರು ಅಲ್ಪ ವೇಳೆಯಲ್ಲಿ ಹೆಚ್ಚು ರೈತವರ್ಗದವರನ್ನೂ ಸಂದರ್ಶನ ಮಾಡಿದ್ದಾರೆ ಮತ್ತು ಬೇರೆ ಬೇರೆ ಉದ್ಯೋಗದಲ್ಲಿರತಕ್ಕಂಥ ಜನರನ್ನು ಸಂದರ್ಶಿಸುವುದಕ್ಕೆ ೩೦೮ ಮೈಲಿ ಪ್ರವಾಸ ಮಾಡಿದ್ದಾರೆ. ಈ ಪ್ರವಾಸವನ್ನು ಸ್ವಲ್ಪ ವೇಳೆಯಲ್ಲೇ ಕೈಕೊಂಡು ಅವರು ಕೊಟ್ಟಂಥ ವರದಿ ಅಮೂಲ್ಯವಾಗಿದೆ. ಆದುದರಿಂದ ಅವರು ಹೇಳತಕ್ಕಂಥ ಮಾತುಗಳನ್ನು ಸರ್ಕಾರ ಮನಸ್ಸಿಗೆ ತಂದುಕೊಂಡು ಅದರಂತೆ ಮಾಡಿದರೆ ಮುಂದೆ ಬರತಕ್ಕಂಥ ಗಂಭೀರ ಪರಿಸ್ಥಿತಿಯನ್ನು ಎದುರಿಸಬಹುದು. ಅದು ಬಿಟ್ಟು ಇದು ಕೇವಲ ರಿಪೋರ್ಟ್ ಎಂದು ತಿಳಿದುಕೊಂಡು ಹಿಂದುಳಿದರೆ ತುಂಬಾ ಕಠಿಣ ಪರಿಸ್ಥಿತಿ ಬಂದೀತು. ಶ್ರೀಮಾನ್ ಆರ್ಮುಗಂರವರು ಅಲ್ಲಿಗೆ ಭೇಟಿ ಕೊಟ್ಟ ಕಾಲದಲ್ಲಿ ಆ ಹಳ್ಳಿಗಳಲ್ಲಿರುವ ಜನಗಳ ಪರಿಸ್ಥಿತಿಯನ್ನೂ ಕೂಡ ಅರಿತುಕೊಂಡಿದ್ದಾರೆ ಅಲ್ಲದೆ ಅಲ್ಲಿ ದನಗಳು ಹೇರಳವಾಗಿ ಸತ್ತಿವೆ ಎಂದು ಅವರು ಹೇಳಬೇಕಾದರೆ ಕೇವಲ ಸುಮಾರು ೨೫ ಪರ್ಸೆಂಟ್ ದನಗಳ ಸಂಪತ್ತು ಬಿಜಾಪುರ, ಗುಲ್ಬರ್ಗ ಮತ್ತು ಬೀದರ್ ಭಾಗದಲ್ಲಿ ಆ ರೈತನ ಕೈಯಲ್ಲಿ ಇಲ್ಲ ಎಂದು ಹೇಳಬಹುದು. ಒಂದುವೇಳೆ ಮುಂದಿನ ಜೂನ್ ತಿಂಗಳಿನಲ್ಲಿ ಮಳೆ ಬಂದ ಕಾಲಕ್ಕೆ ಭೂಮಿಗೆ ವ್ಯವಸಾಯ ಮಾಡಬೇಕಾದರೆ ಆ ಸಂದರ್ಭದಲ್ಲಿ ಎತ್ತುಗಳು ಸಿಕ್ಕುವುದಿಲ್ಲ. ಇಂಥ ಪರಿಸ್ಥಿತಿ ಬಂದಿದೆ. ಈವೊತ್ತಿನ ದಿವಸ ಇಂಥ ಭೀಕರ ಪರಿಸ್ಥಿತಿ ಬಂದಿರುವುದರಿಂದ ಸರ್ಕಾರದ ಮೆಷಿನರಿಯನ್ನು ಈವೊತ್ತು ಪ್ರತಿಯೊಂದು ಹಳ್ಳಿಗೂ ಪ್ರತಿಯೊಂದು ತಾಲ್ಲೂಕಿಗೂ ಕಳುಹಿಸಿ ಅಲ್ಲಿ ಎಷ್ಟು ದನಗಳು ಸತ್ತಿವೆ ಎನ್ನುವ ಒಂದು ಸೆನ್ಸಸ್ ಮಾಡಬೇಕು. ಆ ರೀತಿ ಅವುಗಳ ಸಂಖ್ಯೆಯನ್ನು ಈವೊತ್ತು ಸಂಗ್ರಹ ಮಾಡುತ್ತಾ ಇಲ್ಲ. ಸರ್ಕಾರ ದವರು ಇದರಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಿಲ್ಲ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ರೈತರ ಸಂಪತ್ತು ದನಗಳು. ರೈತರಿಗೆ ಅದೇ ಆಸ್ತಿ. ಈವೊತ್ತಿನ ದಿವಸ ಅಲ್ಲಿ ಹೇರಳವಾಗಿ ಎತ್ತುಗಳು ಸಾಯುವ ಚಿತ್ರ ನೋಡುವುದಾದರೆ, ಬಡವರಿಗೆ ಇರತಕ್ಕಂಥ ಪರಿಸ್ಥಿತಿಯನ್ನು ನೋಡುವುದಾದರೆ ಯಾವ ಅಧಿಕಾರಿಗಳೂ ಹೋಗಿಲ್ಲ ; ಎಂದು ಹೇಳಬೇಕಾಗುತ್ತದೆ. ಏತಕ್ಕೆಂದರೆ ಬೇಕಾದಷ್ಟು ಜನ ಮಂತ್ರಿಗಳು ಆ ಕಡೆ ಪ್ರವಾಸ ಮಾಡಿದ್ದಾರೆ. ನಮ್ಮ ಕಡೆಯೂ ಮಂತ್ರಿಗಳು ಹೋಗಿ ಭೇಟಿಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ಅಲ್ಲಿರತಕ್ಕಂಥ ಜನರನ್ನು ಎಷ್ಟು ದನಗಳು ಸತ್ತಿವೆ ಎಂದು ಕೇಳತಕ್ಕಂಥ ಪ್ರಯತ್ನವನ್ನೂ ಮಾಡಲಿಲ್ಲ ; ಎಂದು ಹೇಳುತ್ತೇನೆ. ಆ ಜನರ ಕಲ್ಯಾಣದ ಬಗ್ಗೆ, ಅವರ ಕಷ್ಟ ಪರಿಸ್ಥಿತಿ ಬಗೆ ಏನೊಂದೂ ಕೇಳದೆ ಅಲ್ಲಿ ಹೋಗಿ ರಾಜಕೀಯ ವಿಷಯದ ಬಗ್ಗೆ ಮಾತನಾಡಿದ್ದಾರೆ. ಸರ್ಕಾರ ಅಲ್ಲಿ ಜನರ ಕಷ್ಟ ತಿಳಿದೂ ತಿಳಿದೂ ಆ ಭಾಗದ ಜನರಿಗೆ ಕಣ್ಣುಮುಚ್ಚಾಲೆ ಆಟವಾಡಿಕೊಂಡು ಕುಳಿತಿದ್ದಾರಲ್ಲಾ ಎನ್ನುವ ಒಂದು ವಾತಾವರಣ ಇವರಲ್ಲಿ ಉಂಟಾಗಿದೆ ಎಂದು ಅಲ್ಲಿಯ ಜನರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. Government has no mind to give attention towards these areas. ಈ ಭಾವನೆ ಜನರಲ್ಲಿ ಬಂದಿದೆ. ಆ ಭಾಗದಲ್ಲಿ ಕೆಲಸ ಕಾರ್ಯಗಳನ್ನು ಎಷ್ಟರಮಟ್ಟಿಗೆ ತೆಗೆದುಕೊಳ್ಳಬೇಕಾಗಿತ್ತೋ ಅಷ್ಟರಮಟ್ಟಿಗೆ ತೆಗೆದುಕೊಂಡಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅಧ್ಯಕ್ಷರೇ ಸರ್ಕಾರದವರು ಈವೊತ್ತಿನ ದಿವಸ ಆ ಭಾಗದಲ್ಲಿ ಆಹಾರ ಅಭಾವದಿಂದ ಜನರು ಸತ್ತಿಲ್ಲ ಎಂದು ಹೇಳಿದ್ದಾರೆ. ಶ್ರೀಮಾನ್ ಆರ್ಮುಗಂರವರ ರಿಪೋರ್ಟ್‌ನಲ್ಲಿ ಇದನ್ನು ಸಂಪೂರ್ಣವಾಗಿ ಅಲ್ಲಗಳೆದಿಲ್ಲ. ಸಾಯತಕ್ಕಂಥ ಪರಿಸ್ಥಿತಿ ಯಲ್ಲಿರುವ ದೇಹಗಳನ್ನು ನಾನು ನೋಡಿದ್ದೇನೆ ಎಂದು ಅವರು ಹೇಳಿದ್ದಾರೆ. ಅವರು ಜೀವಂತ ವಾಗಿದ್ದರೂ ಕೂಡ ಜೀವಂತ ಇಲ್ಲದ ಹೆಣಗಳಾಗಿ ಇದ್ದುದನ್ನು ನಾನು ಕಂಡಿದ್ದೇನೆ ಎಂದು ಹೇಳಿದ್ದಾರೆ. ನಿನ್ನೆ ಅಥವಾ ಮೊನ್ನೆ ಪೇಪರ್‌ನಲ್ಲಿ ಒಂದು ವಿಷಯ ನೋಡಿದೆ. ಶೈಯದ್‌ಪುರ್ ಮತ್ತು ಯಾದಗಿರಿಯಲ್ಲಿ ಕಾಲರಾದಿಂದ ಅನೇಕ ಜನ ಸತ್ತಿದ್ದಾರೆ ಎನ್ನುವುದರ ಬಗ್ಗೆ ಪೇಪರ್‌ನಲ್ಲಿ ಬಂದಿದೆ. ಅದು ಸರಿಯೋ ತಪ್ಪೋ ಗೊತ್ತಿಲ್ಲ. ಅವರಿಗೆ ಸರಿಯಾದ ಆಹಾರ ನೀರು ಸಿಕ್ಕದೆ ಅವರ ಪರಿಸ್ಥಿತಿ ದಿನೇ ದಿನೇ ಹದಗೆಟ್ಟು

(ಶ್ರೀ ಬಾಪೂಗೌಡ ರಾಯಪ್ಪ)

ಸಾಯಂತಕ್ಕಂಥ ರೋಗ ಬಂದಿದೆ. ಇನ್ನೂ ಇತರ ವಿಧವಾಗಿ ನಿಯಮಿತವಾಗಿ ಸಾಯತಕ್ಕಂಥ ಪರಿಸ್ಥಿತಿ ಆ ಭಾಗದಲ್ಲಿ ನಿರ್ಮಾಣವಾಗಿದೆ ಎಂದು ಸ್ಪಷ್ಟವಾಗಿ ಕಾಣುತ್ತದೆ. ಈಗಲಾದರೂ ಕೂಡ ಸರ್ಕಾರದವರು ನಿಗಾವಹಿಸಬೇಕು. ಈಗ ಆರ್ಮುಗಂರವರ ವರದಿ ಪ್ರಕಾರ ೫೦ ಕೋಟಿ ರೂಪಾಯಿ ಏನು ಕೇಳಿದ್ದಾರೋ ಅದು ಮುಂದಿನ ೬—೭ ತಿಂಗಳ ಪರಿಸ್ಥಿತಿಯನ್ನು ಎದುರಿಸಬೇಕಾದರೆ ಅಷ್ಟು ಸಾಕಾಗುವುದಿಲ್ಲ ಎಂದು ನನಗೆ ಅನಿಸುತ್ತದೆ. ಆದುದರಿಂದ ಅಲ್ಲಿಯವರೆಗೆ ಎಷ್ಟು ಬೇಕೋ ಅಷ್ಟನ್ನು ಒಂದು ಲೆಕ್ಕಾಚಾರ ಹಾಕಿಕೊಂಡು ಅಷ್ಟು ದುಡ್ಡನ್ನು ಒದಗಿಸಿದರೆ ಒಳ್ಳೆಯದು ಎಂದು ನಾನು ಹೇಳುತ್ತೇನೆ.

2-30 P.M.

ಸೆಪ್ಟೆಂಬರ್ ತಿಂಗಳಲ್ಲಿ ಬಂದತಂಹ ತಂಡ ಏನು ಇದೆ ಅದಕ್ಕೆ ಆದರೂ ಹೆಚ್ಚಿನ ಶಾಸ್ತ್ರೀಯವಾದ ಆಧಾರದಮೇಲೆ ಅಂಕಿ ಅಂಶಗಳನ್ನು ಕೊಟ್ಟು, ಹೆಚ್ಚಿನ ಪ್ರಮಾಣದಲ್ಲಿ ಕೇಂದ್ರ ಸರ್ಕಾರದಿಂದ ಹಣ ಪಡೆದಿದ್ದರೆ ಸರ್ಕಾರಕ್ಕೆ ಶಕ್ತಿ ಬರುತ್ತಿತ್ತು. ಬರಗಾಲ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಸಾಧ್ಯವಾಗುತ್ತಿತ್ತು. ರಾಬಿ ಬೆಳೆ ಬಂದು ಖಾರಿಫ್ ಬೆಳೆಯಲ್ಲಿ ಆದ ಖೋತಾವನ್ನು ತುಂಬುವ ಆಶೆಯನ್ನು ಇಟ್ಟುಕೊಂಡರು ಅದರಿಂದ ತಪ್ಪು ಮಾಡಿದರು. ಇವೊತ್ತಿನ ದಿವಸ ಆ ಭಾಗದ ಜನರಿಗೆ ಅತ್ಯಂತ ಭೀಕರವಾದ ಪರಿಸ್ಥಿತಿ ನಿರ್ಮಾಣ ಮಾಡಿದೆ. ಇದೇ ಪರಿಸ್ಥಿತಿ ಇನ್ನು ೬—೭ ತಿಂಗಳು ಇರುತ್ತದೆ. ಘೋಷಣೆ ಮತ್ತು ಹೇಳಿಕೆಗಳನ್ನು ಸಾಕಷ್ಟುಕೊಟ್ಟರು. ಶ್ರೀಮಾನ್ ಚೆನ್ನಬಸಪ್ಪನವರು ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರವಾಸ ಕೈಕೊಂಡಾಗ ೨ ತಿಂಗಳ ಹಿಂದೆ ಅಲ್ಲಿಯ ಪರಿಸ್ಥಿತಿಯನ್ನು ಅಲ್ಲಿಯ ಶಾಸಕರನ್ನು ಮತ್ತು ಅಧಿಕಾರಿಗಳನ್ನು ಕರೆದು ಚರ್ಚೆಮಾಡಿ ನಿರ್ಣಯ ಕೊಟ್ಟರು. ಕೃಷ್ಣ ಮತ್ತು ಭೀಮಾ ೨ ನದಿಗಳ ದಂಡೆಮೇಲೆ ಒಂದು ವರ್ಷದೊಳಗ ಎಲೆಕ್ಟ್ರಿಕ್ ಲೈನನ್ನು ತೆಕಿಬಿಡುತ್ತೇವೆ ಎಂದು ಅಧಿಕಾರಿಗಳಿಗೆ ಬರೆದುಕೊಳ್ಳಿ ಎಂದು ಹೇಳಿದರು. ಶಹಾಪುರ್‌ಗೆ ೧೦ ಲಿಫ್ಟ್ ಇರಿಗೇಷನ್ ಕೊಡುತ್ತೇವೆ, ೭ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಮಂಜೂರು ಮಾಡಿದ್ದೇವೆ ಎಂದು ಹೇಳಿದರು. ಅವರು ಆ ಕಾಲಕ್ಕೆ ಮಾತನಾಡತಕ್ಕ ಧಾಟಿ, ಮಾತನಾಡತಕ್ಕ ಆಸಕ್ತಿ ಏನು ತೋರಿಸುತ್ತಿತ್ತು ಎಂದರೆ ೧೫—೨೦ ದಿವಸಗಳಲ್ಲಿ ಕೆಲಸ ಪ್ರಾರಂಭವಾಗಬಹುದು ಎನ್ನುವ ವಿಶ್ವಾಸ ಅಲ್ಲಿ ಇದ್ದ ಶಾಸಕರಿಗೂ ಮತ್ತು ಅಧಿಕಾರಿಗಳಿಗೂ ಇತ್ತು. ಮೂರು ತಿಂಗಳವರಗೆ ಭೀಮಾ ನದಿ ದಂಡೆ ಮೇಲೆ ಎಲೆಕ್ಟ್ರಿಕ್ ಕರೆಂಟ್ ಬರಲಿಲ್ಲ. ಜನರಿಗೆ ವಿಶ್ವಾಸ ಕೊಟ್ಟು ೨-೩ ತಿಂಗಳವರೆಗೆ ಯಾವರೀತಿ ಕೆಲಸ ನಡೆಯಲಾರದಂತಹ ಪರಿಸ್ಥಿತಿ ಉಂಟಾಗಿದೆ. ಸರ್ಕಾರ ಈ ದಿಶೆಯ ನಿರ್ದಿಷ್ಟವಾದ ಹೆಜ್ಜೆ ತೆಗೆದುಕೊಳ್ಳುವುದರಲ್ಲಿ ಏತಕ್ಕೆ ವಿಫಲವಾಗಿದೆ ? ೩ ತಿಂಗಳಾದರೂ ಲಿಫ್ಟ್ ಇರಿಗೇಷನ್ ಸ್ಕೀಮ್ ಕೃಷ್ಣಾ ಮತ್ತು ಭೀಮಾ ಮತ್ತು ಕಾರಂಜಿ ದಂಡೆಮೇಲೆ ಲೈನ್ ಎಳೆಯತಕ್ಕ ಕೆಲಸ ಪ್ರಾರಂಭ ಮಾಡಿದ್ದರೆ ಕೆಲವು ಮಟ್ಟಿಗೆ ಸಣ್ಣಪುಟ್ಟ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳು ಕಾರ್ಯಗತವಾಗಿ ಜನರು ನೀರನ್ನು ತೆಗೆದುಕೊಂಡು ಉಪಯೋಗ ಮಾಡುವ ಪರಿಸ್ಥಿತಿ ಬರುತ್ತಿತ್ತು. ಈ ಕೆಲಸ ಆಗಲಿಲ್ಲ. ಅದೇ ರೀತಿಯಾಗಿ ಮುಖ್ಯಮಂತ್ರಿಗಳು ಪ್ರವಾಸ ಕೈಕೊಂಡ ಕಾಲಕ್ಕೆ, ಶ್ರೀಮಾನ್ ಸಿದ್ಧವೀರಪ್ಪನವರು ಪ್ರವಾಸ ಕೈಕೊಂಡ ಕಾಲಕ್ಕೆ ಹೇಳುತ್ತಿದರು ಬರಗಾಲ ಎಷ್ಟೇ ಬರಲಿ, ಭೀಕರವಾಗಿರಲಿ ಎಷ್ಟೇ ಭಯಂಕರವಾಗಿರಲಿ ವಿಧಾನಸೌಧ ಮಾರಿದರೂ ಕೂಡ ಚಿಂತೆಯಿಲ್ಲ ನಿಮ್ಮನ್ನು ರಕ್ಷಣೆ ಮಾಡುತ್ತೇವೆ ಎಂದು ಭಾಷಣ ಕೂಡ ಮಾಡಿಬಂದರು ಇದರಿಂದ ಜನರಲ್ಲಿ ಏನೋ ವಿಶ್ವಾಸವಾಯಿತು.

ಅವರು ಭಾಷಣಗಳು, ಹೇಳಿಕೆಗಳನ್ನು ನೋಡಿ ಸರ್ಕಾರದ ಮೇಲೆ ನಿಜವಾಗಿಯೂ ಜನರಲ್ಲಿ ವಿಶ್ವಾಸವಾಯಿತು. ಹೊಸದಾಗಿ ಬಂದಂತಹ ಸರ್ಕಾರ ಏನು ಇದೆ ಇದು ಬಡವರ ಸರ್ಕಾರ, ಬಡತನ ನಿರ್ಮೂಲ ಮಾಡತಕ್ಕಂತಹ ಸರ್ಕಾರ ಬಂದಿದೆಯೆಂದು ಜನರು ತಿಳಿದುಕೊಂಡಿದ್ದರು. ಆದರೆ ಇದುವರೆಗೆ ಸರ್ಕಾರ ಕೆಲಸ ಮಾಡತಕ್ಕಂತಹ ಧಾಟಿ ಮತ್ತು ಶೈಲಿ ನೋಡಿದರೆ ಹೇಳಿಕೆ ಕೊಟ್ಟು ಕ್ಯಾಬಿನೆಟ್‌ನಲ್ಲಿ ನಿರ್ಣಯ ತೆಗೆದುಕೊಂಡು ಅದನ್ನು ಇಂಪ್ಲಿಮೆಂಟ್ ಮಾಡತಕ್ಕಂತಹ ಶಕ್ತಿ ಇವರ ಸರ್ಕಾರಕ್ಕೆ ಬರಲಿಲ್ಲ. ಅದು ಆಶ್ಚರ್ಯದ ಮಾತು. ಅಕ್ಟೋಬರ ತಿಂಗಳು ೨೫ ರಂದು ಒಂದು ಕ್ಯಾಬಿನೆಟ್ ನಿರ್ಣಯವಾಯಿತು. ಪ್ರತಿಯೊಂದು ಹಳ್ಳಿಗೆ ಮತ್ತು ಗ್ರಾಮಕ್ಕೆ ೧೦ ನೀರಾವರಿ ಬಾವಿಗಳನ್ನು ಕೊಡಬೇಕು ಎನ್ನುವ ನಿರ್ಣಯ ತೆಗೆದುಕೊಂಡಿತು. ಅಕ್ಟೋಬರ್ ಆದಮೇಲೆ ನವೆಂಬರ್ ಮೊದಲನೆ ವಾರದಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಅಧ್ಯಕ್ಷರು, ಆ ಭಾಗದ ಶಾಸಕರು ಮತ್ತು ಅಧಿಕಾರಿಗಳನ್ನು ಕರೆಸಿ ಒಂದು ಮೀಟಿಂಗ್ ಮಾಡಿ ಅದರಲ್ಲಿ ಚರ್ಚೆ ಮಾಡುವ ಕಾಲಕ್ಕೆ ಅವರು ಹೇಳಿದರು. ನನಗೆ ಇರತಕ್ಕ ಅಧಿಕ

ಕೇವಲ ೨೦೦ ಬಾವಿಗಳು ಒಂದು ತಾಲ್ಲೋಕಿಗೆ ಕೊಡುವುದಕ್ಕೆ ಅಷ್ಟೇ ಕಮಿಟ್ ಮಾಡಬಹುದು ಹೆಚ್ಚಿಗೆ ಇಲ್ಲ ಎಂದು ಹೇಳಿದರು. ಮುಖ್ಯಮಂತ್ರಿಗಳು ಹೇಳಿದ್ದಾರೆ ಇದು ಕ್ಯಾಬಿನೆಟ್ ನಿರ್ಣಯ ಒಂದು ಗ್ರಾಮಕ್ಕೆ ೧೦ ಬಾವಿ ಕೊಡಬೇಕು ಅದಕ್ಕೆ ನೀವು ಏನು ಅನ್ನುತ್ತೀರಿ ಎಂದು ಕೇಳಿದರೆ ನನಗೆ ಗೊತ್ತಿಲ್ಲ ಎಂದು ಹೇಳಿದರು. ಇದು ಏನು ತೋರಿಸುತ್ತದೆ ಎಂದರೆ ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಯಾವ ರೀತಿ ಸಂಪರ್ಕ ಇದೆ ಎನ್ನತಕ್ಕ ಮಾತು ಸ್ಪಷ್ಟವಾಗುತ್ತದೆ. ಅಲ್ಲಿಯ ಪರಿಸ್ಥಿತಿ ನೋಡಿ ಏನಾದರೂ ಕೂಡ ಕೈಯಲ್ಲಿ ಆದ ಸಹಾಯ ಮಾಡಬೇಕು, ಈ ಪರಿಸ್ಥಿತಿಯಲ್ಲಿ ಕೆಲಸಮಾಡಿ ಪುಣ್ಯ ಕಟ್ಟಿಕೊಳ್ಳಬೇಕು ಎನ್ನುವ ಭಾವನೆ ಇದೆ. ಇಲ್ಲ ಎಂದು ತಿಳಿದುಕೊಳ್ಳುವುದಿಲ್ಲ ಆದರೆ ಒಂದು ಮಾತು ಏನು ಇದೆ ಎಂದರೆ ಬರಗಾಲದ ಕೆಲಸ ಮಾಡಬೇಕಾದರೆ ಒಬ್ಬರ ಮೇಲೆ ಒಬ್ಬ ಅಧಿಕಾರಿಗಳು ಡಿಪೆಂಡ್ ಆಗಬೇಕಾಗುತ್ತದೆ. ಅಲ್ಲಿ ಯಾರಾದರೂ ಆಂಟಿ ಸೋಷಿಯಲ್ ಎಲಿಮೆಂಟ್ಸ್ ತಪ್ಪು ಮಾಡಿದರೆ ನಮ್ಮ ಕುತ್ತಿಗೆ ಹೋಗತಕ್ಕ ಪ್ರಸಂಗ ಬರಬಹುದೆಂದು ಹೆದರಿಕೊಂಡು ಅಧಿಕಾರಿಗಳು ಮನಸ್ಸು ಬಿಚ್ಚಿ ಕೆಲಸ ಮಾಡುವುದಿಲ್ಲ. ಮಂತ್ರಿಮಂಡಲ ಯಾವ ವೇಳೆಯಲ್ಲಿ ಸಸ್‌ಪೆಂಡ್ ಮಾಡುತ್ತಾರೋ ಎಂಬ ಭಯ ಸಂಪೂರ್ಣವಾಗಿ ಅಧಿಕಾರಿಗಳಿಗೆ ಇದೆ. ಇದನ್ನು ಅವರು ಎಲ್ಲಿಯುವರೆಗೆ ಈಗ ಇದ್ದಂತಹ ಸರ್ಕಾರ ವಿಶ್ವಾಸಕ್ಕೆ ತೆಗೆದು ಕೊಳ್ಳುವುದಿಲ್ಲ, ಅವರಲ್ಲಿ ವಿಶ್ವಾಸ ಹುಟ್ಟಿತಕ್ಕಂತಹ ಮನಸ್ಸಿನ ವಾತಾವರಣ ನಿರ್ಮಾಣ ಮಾಡುವುದಿಲ್ಲ ಅಲ್ಲಿಯವರೆಗೆ ಎಷ್ಟೋ ಹೇಳಿಕೆ ಕೊಡಲಿ, ಎಷ್ಟೇ ಹಣ ಕೊಡಲಿ ಕೆಲಸ ಮಾತ್ರ ಆಗುವುದಿಲ್ಲ. ಅವರ ಇದು ಸ್ಪಷ್ಟವಾದ ಮಾತು. ಅವರ ಕೂಡ ಚರ್ಚೆ ಮಾಡಿ ಆ ಮಾತನ್ನು ಈ ಮನೆಯಲ್ಲಿ ಹೇಳುತ್ತಿದ್ದೇನೆ. ಅಧ್ಯಕ್ಷರೇ, ಇವೊತ್ತು ಕಲ್ಬುರ್ಗಿಯಲ್ಲಾಗಲಿ, ಬೀದರ್‌ನಲ್ಲಾಗಲಿ ಸುಮಾರು ಗುಲ್ಬರ್ಗಾದಲ್ಲಿ ೧೭ ಲಕ್ಷ ೩೫ ಸಾವಿರ ಜನಸಂಖ್ಯೆಯಲ್ಲಿ ಎರಡೂವರೆ ಲಕ್ಷ ಜನ ಪೂಣೆ, ಬಾಂಬೆಗೆ ಹೋಗಿದ್ದಾರೆ. ಅಹಮದಾಬಾದ್‌ಗೆ ಹೋಗಿದ್ದಾರೆ. ಇನ್ನು ಜನ ಹೋಗುತ್ತಾ ಇದ್ದಾರೆ ಎನ್ನುವ ಕಾಲಕ್ಕೆ ಶ್ರೀಮಾನ್ ಚೆನ್ನಬಸಪ್ಪನವರು ಯಾರೂ ವಲಸೆ ಹೋಗುವುದಿಲ್ಲ. ಇದು ರಾಜಕೀಯ ಹೇಳಿಕೆ ಎಂದು ಹೇಳಿದರು. ಇವೊತ್ತು ನಾನು ಆ ಭಾಗದ ಸಾಮಾನ್ಯ ಸದಸ್ಯನಾಗಿ ಇಲ್ಲಿ ಮುಖಂಡತ್ವ ಪಡೆಯಬೇಕು ಎನ್ನುವ ದೃಷ್ಟಿಯಿಂದ ಮಾತನಾಡುವುದಿಲ್ಲ. ಶ್ರೀಮಾನ್ ಚೆನ್ನಬಸಪ್ಪನವರ ಹೇಳಿಕೆ ಶ್ರೀ ವೀರೇಂದ್ರ ಪಾಟೀಲರ ಹೇಳಿಕೆ ಮತ್ತೊಂದು ಹೇಳಿಕೆ, ಶ್ರೀಮಾನ್ ದೇವೇಗೌಡರು, ರಾಮಕೃಷ್ಣ ಹೆಗ್ಗಡೆಯವರು ಗುಲ್ಬರ್ಗಾಕ್ಕೆ ಬಂದು ಜನರ ಪರಿಸ್ಥಿತಿಯನ್ನು ತಿಳಿದುಕೊಂಡು ಹೇಳಿಕೆ ಕೊಟ್ಟಾಗ ಇದು ರಾಜಕೀಯ ಹೇಳಿಕೆ ಎಂದು ಶ್ರೀಮಾನ್ ಚೆನ್ನಬಸಪ್ಪನವರು ಹೇಳಿರುವುದು ಹಾಸ್ಯಾಸ್ಪದವಾಗುತ್ತದೆ. ಬರಗಾಲ ನಿವಾರಣೆಗೆ ಸಾಧ್ಯ ಇದಷ್ಟು ಎಲ್ಲವನ್ನೂ ಮಾಡಬೇಕಿತ್ತು. ಲಿಫ್ಟ್ ಇರಿಗೇಷನ್ ಸ್ಕೀಮ್ ಬಗ್ಗೆ ಎಲ್ಲಿಯೇ ಆಗಲಿ ಹೇಳಿಕೆ ಕೊಟ್ಟರೇ ಹೊರತು ಮತ್ತೇನೂ ಆಗಲಿಲ್ಲ. ಬರೀ ಹೇಳಿಕೆಯಿಂದ ಹೊಟ್ಟೆ ತುಂಬುವುದಿಲ್ಲ, ಅದರಿಂದ ತಲೆ ಕೆಟ್ಟುಹೋಗುತ್ತದೆ. ಸುಧಾರಣೆಯಾಗುವುದಿಲ್ಲ. ಇದು ದುರ್ದೈವದ ಸಂಗತಿ, ನಮ್ಮ ಭಾಗದ ಮಂತ್ರಿಗಳಾದ ಶಿವಣ್ಣನವರು ಮತ್ತು ದೇವೇಂದ್ರಪ್ಪನವರು ಬಹಳ ತರುಣರಿದ್ದಾರೆ ಅವರು ರಾಜಕೀಯ ಜೀವನದಲ್ಲಿ ಹೊಸದಾಗಿ ಕಾಲು ಇಟ್ಟಿದಾರೆ. ಹೆಚ್ಚು ಕೆಲಸ ಮಾಡಬೇಕು ಎಂದು ಆಸಕ್ತಿ ಇದೆ. ಅವರ ಮಾತನ್ನು ಯಾರು ಕೇಳುವುದಿಲ್ಲ ಎನ್ನುವುದು ವಾಡಿಕೆಯಾಗಿದೆ. ಆ ಮಾತು ಅವರು ಒಪ್ಪಿಕೊಳ್ಳಬೇಕಲ್ಲದೆ ವಿಧಿಯಿಲ್ಲ. ಶಿವಣ್ಣನವರು ಒಪ್ಪಿಕೊಂಡಿದ್ದಾರೆ. ಅವರ ಮಾತು ರಾಜ್ಯದಲ್ಲಿ ನಡೆಯುವುದಿಲ್ಲ ಎಂದು ಒಂದು ವಾತಾವರಣ ಹುಟ್ಟಿದೆ. ಅವರು ಬಂದರೂ ಕೂಡ ಅವರನ್ನು ಏನು ಕೇಳೋಣ ಅವರ ಮಾತು ಏನು ನಡೆಯುವುದಿಲ್ಲ ಎನ್ನತಕ್ಕ ಅಂತಃಕರಣ ಹುಟ್ಟತಕ್ಕ ಪರಿಸ್ಥಿತಿ ನಮ್ಮಲ್ಲಿ ಬಂದಿದೆ. ಇವೊತ್ತಿನ ದಿವಸ ಹುಚ್ಚಮಾಸ್ತಿಗೌಡರು ರಾಜಕೀಯ ಜೀವನದಲ್ಲಿ ಹಳಬರು ಇದ್ದಾರೆ, ಮತ್ತು ರೈತರು ಕೂಡ ಇದ್ದಾರೆ. ಅವರ ಜಿಲ್ಲೆಯಲ್ಲಿ ಒಂದು ವೇಳೆ ಪರಿಸ್ಥಿತಿ ಈ ರೀತಿ ನಿರ್ಮಾಣವಾದಾಗ ನಮ್ಮ ಮಂತ್ರಿಗಳು ಇಂತಹ ಮಾತು ಆಡತಕ್ಕ ಪ್ರಯತ್ನ ಯಾರಾದರೂ ಮಾಡಿದ್ದರೆ ಅವರು ಯಾವ ರೀತಿ ಹೆಜ್ಜೆ ತೆಗೆದುಕೊಳ್ಳುತ್ತಿದ್ದರು ಎನ್ನುವ ಮಾತು ಹೇಳಬೇಕು.

ಹೆಚ್ಚು ಮಳೆಬಂದು ನೀರು ಕೊಚ್ಚಿ ಹೋದಾಗ ಪರಿಹಾರ ಕೊಡಬೇಕು ಎಂದು ನಿರ್ಣಯಗಳು ಆಗು ತ್ತವೆ. ಆದರೆ ನಮ್ಮ ಮೂರು ಜಿಲ್ಲೆಯ ಜನರು ಕಳೆದ ಹತ್ತು ವರ್ಷಗಳಲ್ಲಿ ಕಂದಾಯವನ್ನು ಮಾಫಿ ಮಾಡಿ ಎಂದು ಎಂದೂ ಹೇಳಲಿಲ್ಲ. ಸತತವಾಗಿ ಕಂದಾಯವನ್ನು ಕಟ್ಟಿಕೊಂಡು ಬಂದಿದ್ದಾರೆ. ದೇವರ ಅನುಗ್ರಹ ಇಲ್ಲದೇ ಇದ್ದುದರಿಂದ ಮಳೆ ಇಲ್ಲದೆ ಈ ವರ್ಷ ಭೀಕರ ಕ್ಷಾಮ ಪರಿಸ್ಥಿತಿ ಉಂಟಾಗಿದೆ; ನನಗೆ ನನ್ನ ತಾಯಿ ಹೇಳುತ್ತಾರೆ, ೬೦-೭೦ ವರ್ಷಗಳಿಂದ ಇಂಥ ಪರಿಸ್ಥಿಯನ್ನು ಅವರು ನೋಡಲಿಲ್ಲ ಎಂದು ನಾವು ಇಬ್ಬರು ಅಣ್ಣತಮ್ಮಂದಿರು ಇದ್ದೇವೆ. ನಮಗೆ ೨೨೦ ಎಕರೆ ಭೂಮಿ ಇದೆ. ಆದ್ದರಿಂದ ನನಗೆ ಬರತಕ್ಕ ಕಾಳು ಒಂದು ಸೇರು ಇಲ್ಲ. ನಮ್ಮ ಮನೆಯಲ್ಲಿ ೮-೧೦ ಜನರು ಇದ್ದೇವೆ, ನನ್ನ ಸ್ವಂತ ತಮ್ಮನೇ ದುಡಿಯುತ್ತಾನೆ, ಆದರೂ ನಮ್ಮ ಪರಿಸ್ಥಿತಿ ಕಷ್ಟವಾಗಿದೆ. ಅಲ್ಲಿ ೫೦ ಎಕರೆ ಇದ್ದಂಥ ಮನುಷ್ಯ ಸೊಸೈಟಿಗಳಲ್ಲಿ ಕೊಡುವ ಸಾಲಗಳೆನ್ನೆಲ್ಲಾ ತೆಗೆದುಕೊಂಡುಬಿಟ್ಟಿದ್ದಾನೆ. ಮುಂದೆ ಸಾಲ ಕೊಡುವವರು ಯಾರು ಇಲ್ಲ. ಮಕ್ಕಳು ಉಪವಾಸ ಮಾಡಬೇಕಾಗಿದೆ, ಈಗ ಅವನು ಏನು ಮಾಡಬೇಕು ಎಂದು ತಿಳಿಯದಾಗಿದೆ. ಅವರು ಸಾಯುವ

(ಶ್ರೀ ಬಾಪುಗೌಡ ರಾಯಪ್ಪ)

ಪರಿಸ್ಥಿತಿಯಲ್ಲಿದ್ದಾರೆ, ಆದರೆ ಮಾನ್ಯ ಮಂತ್ರಿಗಳು ಸ್ಟಾರ್ವೇಷನ್‌ದಿಂದ ಯಾರೂ ಸತ್ತಿಲ್ಲ ಎಂದು ಹೇಳುತ್ತಾರೆ ನನ್ನ ಕಾನ್‌ಸ್ಟಿಟ್ಯೂಯನ್ಸಿಯಲ್ಲಿರುವ ಪರಿಸ್ಥಿತಿಯನ್ನು ಹೇಳಬೇಕಾದರೆ ಸುಮಾರು ೩೦–೪೦ ಜನ ಕಾರ್ಯಕರ್ತರು, ರೈತರು ನನ್ನ ಹತ್ತಿರ ಬಂದು, ೫೦ ರೂಪಾಯಿ ಕೊಡಿ, ೧೦೦ ರೂಪಾಯಿ ಕೊಡಿ ಎಂದು ತೆಗೆದುಕೊಂಡು ಬಾಂಬೆಗೆ ಹೋಗಿಬಿಟ್ಟಿದ್ದಾರೆ. ಹಳ್ಳಿಯಲ್ಲಿ ಗುದ್ದಲಿ ಹಿಡಿದುಕೊಂಡು ಹೇಗೆ ಹೋಗಲಿ ಎಂದು ಅವರು ಬಾಂಬೆ ಕಡೆಗೆ ಲಕ್ಷಗಟ್ಟಲೆ ಹೋಗಿಬಿಟ್ಟಿದ್ದಾರೆ. ಲಂಬಾಣಿಯವರು, ಹರಿಜನರು, ಲಿಂಗಾಯತರು, ಎಲ್ಲಾ ಜಾತಿಯ ಜನರು ಹೋಗಿದ್ದಾರೆ. ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ನಾನು ಒಂದು ಮನೆಗೆ ಹೋದಾಗ, ಆ ಮನೆಯವರನ್ನು ಯಾವ ಜಾತಿಯವರ ಎಂದು ಕೇಳಿದೆವು, ಲಿಂಗಾಯತರು, ಯಜಮಾನ ಮನೆಯಲ್ಲಿಲ್ಲ ಬಾಂಬೆಗೆ ಹೋಗಿದ್ದಾರೆ ಎಂದು ಹೇಳಿದರು. ಅವರ ಮನೆಯಲ್ಲಿ ಅತ್ತೆ, ಸೊಸೆ, ಸಣ್ಣ ಮಕ್ಕಳು ಇದ್ದರು, ಏನು ಮಾಡುತ್ತೀರಿ ಎಂದು ಕೇಳಿದಕ್ಕೆ, ನಮ್ಮ ಕೈ ನೋಡಿ, ಎಂದು ರಕ್ತದ ಕೈಯನ್ನು ತೋರಿಸಿದರು. ಅದನ್ನು ನೋಡಿದಾಗ ಮನುಷ್ಯನಲ್ಲಿ ಮನುಷ್ಯತ್ವ ಇತ್ತು ಎಂದರೆ ಸರ್ಕಾರದ ಮೇಲೆ ಯಾವ ರೀತಿ ಸಿಟ್ಟು ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ೬೦ ಎಕರೆ ಭೂಮಿ ಇದ್ದಂಥ ಮನುಷ್ಯ ಕೂಡ ಇವತ್ತು ಕೂಲಿ ಮಾಡಲು ಸಿದ್ಧನಾಗಿದ್ದಾನೆ ನಾವು ರಾಜಕೀಯ ಮಾಡಿ ಚುನಾವಣೆಯಲ್ಲಿ ಮತ್ತೆ ನಿಂತು ಗೆಲ್ಲಬೇಕು ಎಂದು ವಿರೋಧಪಕ್ಷದವರು ಈ ರೀತಿ ಮಾಡುತ್ತಾರೆ ಎಂದು ಯಾರೂ ತಿಳಿಯಬಾರದು. ಇಂಥ ಪರಿಸ್ಥಿತಿ ಸರ್ಕಾರದವರು ತಿಳಿದು ಏತಕ್ಕೆ ಎದುರಿಸಲಿಲ್ಲ ? ಸರ್ಕಾರದ ಮೆಷಿನರಿಯಲ್ಲಿ ದೋಷ ಇದೆಯೋ ಏನೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ ಮಧ್ಯಮ ವರ್ಗದ ರೈತರು ಬೇರೆ ಜಮೀನಿನಲ್ಲಿ ಕೂಲಿಗೆ ಹೋಗದೆ ಇದ್ದವರಿಗೆ ಯಾವ ತರಹ ಸಹಾಯ ಮಾಡಿದರೆ ಅವರ ಜೀವನ ಉತ್ತಮವಾಗಬಹುದು ಎನ್ನುವುದಕ್ಕೆ ಸಲಹೆ ಕೊಡುವುದು ಉತ್ತಮ.

ಶ್ರೀ ಬಾಪೂಗೌಡ ರಾಯಪ್ಪ.—ನಾವು ಹೇಳುತ್ತೇವೆ, ನೀವು ಹೂಂ ಎಂದು ಹೇಳುತ್ತೀರಿ ಆದರೆ ಕೆಲಸ ಆಗುವುದಿಲ್ಲ.

ಶ್ರೀ ಎನ್. ಹುಚ್ಚ ಮಾಸ್ತಿಗೌಡ.—ಕೆಲಸ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಜೀವನ ನಡೆಯಬೇಕು ಎನ್ನುವ ಬಗ್ಗೆ ತಮ್ಮ ಸಲಹೆ ಏನು ?

ಶ್ರೀ ಬಾಪೂಗೌಡ ರಾಯಪ್ಪ.—ನೀವು ಸಲಹೆ ಕೇಳುತ್ತೀರಿ, ಆದರೆ ಕೆಲಸವಾಗುವುದಿಲ್ಲ ದುರ್ಬಲರಿಗೆ ಕೆಲಸಮಾಡುವುದಕ್ಕೆ ಶಕ್ತಿಯಿಲ್ಲ. ಅಂಥವರಿಗೆ ಈಗ ಆರು ಕೆ.ಜಿ. ಆಹಾರಧಾನ್ಯ ಕೊಡಬೇಕು ಎಂದು ಆರ್ಡರ್ ಮಾಡಿರಿದ್ದೀರಿ ಎಷ್ಟರಮಟ್ಟಿಗೆ ಅದು ಕಾರ್ಯಗತವಾಗಿದೆ ? ಏತಕ್ಕೆ ಆಗಲಿಲ್ಲ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಂಥವರಿಗೆ ಯಾವರೀತಿ ಸಹಾಯ ಮಾಡಬೇಕು ಎಂದು ಹೇಳಿ ? ಮಧ್ಯಮವರ್ಗದವರು, ಯಾರಿಗೆ ಕೆಲಸ ಮಾಡುವುದಕ್ಕಾಗುವುದಿಲ್ಲ, ಅವರ ಜೀವನ ಉತ್ತಮವಾಗಿ ನಡೆಯುವುದಕ್ಕೆ ಯಾವ ಮಾರ್ಗವನ್ನು ಅನುಸರಿಸಿದರೆ ಆಗಬಹುದು ಎಂದು ಹೇಳಿ ಒಪ್ಪಿಕೊಳ್ಳೋಣ ?

ಶ್ರೀ ಬಾಪೂಗೌಡ ರಾಯಪ್ಪ.—ದನಗಳ ಸಂಪತ್ತು ಇವುಗಳ ರಕ್ಷಣೆ ಯಾವ ರೀತಿ ಆಗಬೇಕೋ ಆ ರೀತಿ ರಕ್ಷಣೆ ಆಗುತ್ತಿಲ್ಲ. ಅವಕ್ಕೆ ಫಾಡ್ಡರ್ ವ್ಯವಸ್ಥೆ ಏನೂ ಮಾಡಿದ್ದೀರಿ ?

ಅಧ್ಯಕ್ಷರು.—ಪರ್ಟಿನೆಂಟ್ ಆಗಿ ಮಂತ್ರಿಗಳು ಒಂದು ಪ್ರಶ್ನೆ ಕೇಳಿದ್ದಾರೆ, ಮಧ್ಯಮವರ್ಗದ ಜನ ಕೆಲಸ ಮಾಡುವುದಿಲ್ಲ, ಅವರ ಜೀವನ ಆಗಬೇಕು ಎನ್ನುದಕ್ಕೆ ತಮ್ಮ ಸಲಹೆ ಏನು ? ತಾವು ದನಗಳ ಸಬ್ಜೆಕ್ಟ್‌ಗೆ ಹೋಟು ಹೋದರೆ, ಹೇಗೆ ?

ಶ್ರೀ ಬಾಪೂಗೌಡ ರಾಯಪ್ಪ.—ಆ ಊರಲ್ಲಿ ಶ್ರೀಮಂತರು ಒಬ್ಬರು, ಇಬ್ಬರು ಇರುತ್ತಾರೆ. ಮಧ್ಯಮ ವರ್ಗದ ಜನರಿಗೆ ಲೋಕಲ್ ಕ್ರೆಡಿಟ್ ಸಿಗುವುದು ಎಕ್ಸಾಸ್ಟ್ ಆಗಿದೆ ತಕಾವಿ ಸಾಲ ಕೊಡಬೇಕಾದ ಮಾರ್ಗ ಇನ್ನಾವುದೂ ಉಳಿದಿಲ್ಲ ಅಂಥವರಿಗೆ ಇರುವುದು ಕೇವಲ ಒಂದೇ ಒಂದು ಮಾರ್ಗ ಅವರಿಗೆ ಬಾವಿಯ ಸಲುವಾಗಿ ಲೋನ್ ಕೊಡಿ, ೨–೩ ಸಾವಿರ ರೂಪಾಯಿ ತಕಾವಿ ಸಾಲ ಕೊಡಿ.

ಅಧ್ಯಕ್ಷರು.—ಅಂಥವರು ಯಾರು ಇಲ್ಲ ಎಂದು ಹೇಳಿದಿರಿ, ಬೊಂಬಾಯಿಗೆ ಹೋಗಿದ್ದಾರೆ ಎಂದು ಹೇಳಿದಿರಿ, ಯಜಮಾನರು ಮನೆಯಲ್ಲಿ ಇಲ್ಲ ಎಂದು ಹೇಳಿದಿರಿ.

ಶ್ರೀ ಬಾಪೂಗೌಡ ರಾಯಪ್ಪ.—ಈಗ ಡೆಸ್ಟಿಟ್ಯೂಟ್ಸ್‌ಗೆ ಹಣ ಕೊಡತಕ್ಕ ಪದ್ಧತಿ ಏನು ಇದೆ ಅದನ್ನು ಬದಲಾಯಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ನಮಗೆ ಭೀಕರ ಪರಿಸ್ಥಿತಿಯ ಅರಿವು ಇಲ್ಲ ಎಂದು ತಾವು ಹೇಳಿದಿರಿ.

ಶ್ರೀ ಬಾಪೂಗೌಡ ರಾಯಪ್ಪ.—ಸಂಪೂರ್ಣ ಅರಿವು ನಿಮಗೆ ಇದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆಲಸ ಮಾಡತಕ್ಕ ಸಾಮರ್ಥ್ಯ ಸರ್ಕಾರಕ್ಕೆ ಇಲ್ಲ ನಮಗೆ ಅರಿವು ಇಲ್ಲ ಎಂದು ಇಟ್ಟುಕೊಳ್ಳೋಣ ಮಧ್ಯಮ ವರ್ಗದವರ ಬಗ್ಗೆ ತಾವು ಕೊಟ್ಟ ಸಲಹೆ ನಮಗೆ ಅರ್ಥವಾಗಲಿಲ್ಲ. ಪ್ರತಿಯೊಂದು ಊರಿನಲ್ಲಿ ಮಧ್ಯಮ ವರ್ಗದ ಜನರು ಎಷ್ಟು ಜನ ಇದ್ದಾರೆ ? ಅವರು ಕೆಲಸ ಮಾಡುವ ಹಾಗಿಲ್ಲ ಎಂದರೆ ಅವರ ಜೀವನ ನಡೆಯುವುದು ಹೇಗೆ? ಅವರಿಗೆ ತಕಾವಿ ಸಾಲ ಕೊಡಿ ಎಂದರೆ ಎಷ್ಟು ಹಣ ಬೇಕು? ಮಧ್ಯಮ ವರ್ಗದ ಜನರಲ್ಲಿ ಕೂಲಿಗಾರರು ಎಷ್ಟು ಜನ ಇದ್ದಾರೆ ಎನ್ನುವುದನ್ನು ದಯಮಾಡಿ ಹೇಳಿದರೆ ನಮಗೆ ಒಳ್ಳೆಯ ಸಲಹೆ ಕೊಟ್ಟ ಹಾಗೆ ಆಗುತ್ತದೆ.

ಶ್ರೀ ಬಾಪೂಗೌಡ ರಾಯಪ್ಪ.—ಹಳ್ಳಿಗಳೊಳಗೆ ಎಲ್ಲರೂ ಮಧ್ಯಮ ವರ್ಗದವರು ಇದ್ದಾರೆ ಎಂದು ತಿಳಿಯಬಾರದು. ಸ್ವಂತ ಒಕ್ಕಲು ತನ ಮಾಡುತ್ತಾರೆ ಕೂಲಿಗೂ ಹೋಗುತ್ತಾರೆ ಸ್ವಂತ ಒಕ್ಕಲುತನ ಮಾಡುವವರು ಕೂಲಿ ಮಾಡುವುದಿಲ್ಲ ಆಳುಗಳನ್ನು ಇಟ್ಟು ಕೊಂಡು ಕೆಲಸ ಮಾಡತಕ್ಕ ಜನ ೮% ಸಿಕ್ಕುತ್ತಾರೆ. ಈ ಎಂಟು ಪರ್ಸೆಂಟ್ ಜನರಿಗೆ ಇರುವುದು ಒಂದೇ ಮಾರ್ಗ ಇವರಿಗೆ ಬಾವಿಗಳಿಗೆ ತಕಾವಿ ಸಾಲ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರಿಗೂ ಏನು ಮಾಡಬೇಕು ಎನ್ನುವುದರ ಬಗ್ಗೆ ಸರಿಯಾದ ಸಲೂಷನ್ ಗೊತ್ತಿಲ್ಲ ಏನು ಮಾಡುತ್ತಾರೆ?

ಶ್ರೀ ಬಾಪೂಗೌಡ ರಾಯಪ್ಪ.—ನನಗೆ ತಿಳಿದಿದ್ದನ್ನು ಹೇಳಿದೆ ಒಬ್ಬ ಮಾನ್ಯ ಸದಸ್ಯರು : ಇದಕ್ಕೆ ಒಂದೇ ಮಾರ್ಗವಿರುವುದು. ದೇಶದ ದುಡ್ಡನ್ನೆಲ್ಲಾ ನಮ್ಮ ರಾಜ್ಯ ಉತ್ತರದ ಭಾಗಗಳಿಗೆ ಉಪಯೋಗಿಸಿದರೆ ಜನರು ಸುಖವಾಗಿರುವರು.

ಶ್ರೀ ಬಾಪೂಗೌಡ ರಾಯಪ್ಪ.—ಇದು ಮಾತನಾಡು ವಿಚಾರವೇ ? ಹೀಗೆ ಹೇಳಲು ನಾಚಿಕೆಯಾಗುವುದಿಲ್ಲವೇ ?

ಅಧ್ಯಕ್ಷರು.—ಹಾಗೆ ಮಾತನಾಡಬಾರದು.

ಶ್ರೀ ಬಾಪೂಗೌಡ ರಾಯಪ್ಪ.— ಆ ಭಾಗ ಈ ಭಾಗ ಎಂದು ಹೇಳಿದರೆ ಆಂಧ್ರದ ವಿಚಾರ ಜ್ಞಾಪಕಕ್ಕೆ ಬರುವುದು ಪರಿಸ್ಥಿತಿ ಗಂಭೀರವಾಗಿದೆ ಎಂದರೆ ನಾವು ಹೇಳುವುದು ಅಸತ್ಯವೇ? ಇಷ್ಟು ಹೇಳುವುದು ಸರಕಾರಕ್ಕೆ ತಿಳುವಳಿಕೆ ಇಲ್ಲ ಎಂದಲ್ಲ, ತಿಳಿದರೂ, ಹೇಳಿಕೆ ಕೊಟ್ಟರೂ ಹೇಳದಂತೆ ಕಾರ್ಯಗತವಾಗಿಲ್ಲ. ಆರ್ಮುಗಂರವರ ವರದಿಯಲ್ಲೂ ಇದರ ಬಗ್ಗೆ ಪ್ರಸ್ತಾಪವಿದೆ. ನಾವು ಹಳ್ಳಿಗಳನ್ನು ಸುತ್ತಿ ಜನರ ಕಷ್ಟವನ್ನು ಕೊಂಡು ಹೇಳುತ್ತಿರುವುದು. ಸರಕಾರದ ಹೇಳಿಕೆಗೂ ಮಾಡುತ್ತಿರುವರ ಕಾರ್ಯಕ್ಕೂ ನಾನ್ನೂರು ಮೈಲಿ ದೂರವಿದೆ. ಕಾಂಟೂರ ಬಂಡಿಂಗ್ ಕೆಲಸದ ಬಗ್ಗೆ ಹೇಳುತ್ತಾ ಪಾಟೀಲರು ಎರಡು ಮೂರು ಡಿವಿಜನ್ ಮಾಡಿದ ಯಾರು ಕೆಲಸಕ್ಕೆ ಜಾಯಿನ್ ಆಗಿಲ್ಲ ಎಂದು ಹೇಳಿದರು. ಮುಂದಾದರೂ ನಮ್ಮ ಮುಂದಿರುವ ವರದಿ ಪ್ರಕಾರ ೫೦ ಕೋಟಿ ರೂಪಾಯಿ ಪಡೆಯಲು ಪ್ರಯುತ್ನ ಮಾಡುವರೆಂಬ ವಿಶ್ವಾಸವಿದೆ ಅದು ಎಷ್ಟು ಹಳ್ಳಿಗಳಿಗೆ ಮುಟ್ಟಿ ಪ್ರತಿ ಯೊಬ್ಬರಿಗೂ ಸಹಾಯವಾಗುವಂತೆ ಹೇಗೆ ಉಪಯೋಗವಾಗುವುದು ಎಂಬುದನು ಕಾದು ನೋಡಬೇಕಾಗಿದೆ. ಈಗಲು ಕೂಡ ಕಾಲ ಮಿಂಚಿಲ್ಲ. ದಿನವಹಿ ಪರಿಸ್ಥಿತಿ ಗಂಬೀರವಾಗುತ್ತಿದೆ ಬಾವಿಗಳಲ್ಲಿ ನೀರಿಲ್ಲ ಕೆಟ್ಟ ನೀರು, ಕೆಟ್ಟ ಆಹಾರ ಉಪಯೋಗಿಸಿ ಮತ್ತೊಂದು ರೋಗ ಬರುವ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಒಂದು ವಾರ ಫೂಟಿಂಗ್ ಮೇಲೆ ಕೆಲಸವಾಗಬೇಕು, ಆ ರೀತಿ ಮಾಡುವರು ಎಂಬ ಭಾವನೆ ಇದೆ. ಜನರು ತೊಂದರೆಯಿಂದ ಜೈಲಿಗಾದರೂ ಹೋದರೆ ಉತ್ತಮ, ಅಲ್ಲಿ ಊಟವಾದರೂ ಸಿಗುವುದು ಎಂಬ ಭಾವನೆ ವ್ಯಕ್ತಮಾಡುತ್ತಿದ್ದಾರೆ ಕಲ್ಬುರ್ಗಿಯಿಂದ ಬೊಂಬಾಯಿಗೆ ಎರಡು ಕ್ವಿಂಟಾಲ್ ಬಂಗಾರ ಹೋಗಿದೆ, ಭಾಂಡಗಳನ್ನು ಮಾರುವುದು ಎಲ್ಲಾ ಕಡೆಯೂ ಕಾಣುವುದು. ೩ ರೂಪಾಯಿಗೆ ಭಾಂಡಗಳನ್ನು ಮಾರಿದ್ದಾರೆ, ಎಂಟು ಹತ್ತು ಚೀಟಿಗಳಿವೆ ಇದರ ಬಗ್ಗೆ, ಫೋಟೋಗಳಿವೆ. ಬಂಗಾರ ಹೋಯಿತ್ತು ಧನಗಳು ಹೋದುವು, ಕೇವಲ ದೇಹ ಇದೆ. ಇಂಥ ಪರಿಸ್ಥಿತಿಯಿದೆ, ಇದನ್ನು ಹತೋಟಿಗೆ ತರಬೇಕು. ಈಗಾದರೂ ಸರಕಾರಿ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೀರಿ ಎಂದು ತಿಳಿಯುತ್ತೇನೆ. ಗುಲ್ಬರ್ಗ, ಬಿದರೆ, ಬಿಜಾಪುರಗಳಲ್ಲಿ ಒಳ್ಳೆಯ ಅಧಿಕಾರಿಗಳಿದ್ದಾರೆ, ನಮ್ಮ ಭಾಗದಲ್ಲಿ ಇಂಥ ಅಧಿಕಾರಿ

(ಶ್ರೀ ಬಾಪೂಗೌಡ ರಾಯಪ್ಪ)

ಗಳಿದ್ದಾರೆ. ಡಿವಿಜಲ್ ಕಮಿಷನರು ಲೈಸಾನ್ಸ್ ಆಫೀಸರಂತೆ ಕೆಲಸಮಾಡಬೇಕು. ಅವರು ಆಫೀಸರುಗಳಿಗೆ ಆರ್ಡರುಮಾಡಿ ಹೀಗೆ ಮಾಡಬೇಕೆಂದು ಸೂಚಿಸಬೇಕು, ಹೀಗೆ ಮಾಡಿದರೆ ನೆಮ್ಮದಿ ಬರುವುದು. ಇಲ್ಲದಿದ್ದರೆ ಆ ಭಾಗದ ಜನರಿಗೆ ಜೈಲಿಗೆ ಹೋಗೋಣ, ಇಲ್ಲ ಏನೂ ದೊರೆಯದಿರುವಾಗ ಅಲ್ಲಿ ಎರಡು ಹೊತ್ತು ಊಟವಾದರೂ ಕೊಡುವರು ಎಂದು ಹೇಳುವ ವಾತಾವರಣವುಂಟಾಗುವುದು. ಉಪವಾಸ ಮಾಡುವ ೧೦ ಸಾವಿರ ಜನರು ಗುಲ್ಬರ್ಗದಲ್ಲಿ ಅರೆಸ್ಟ್ ಆಗಲು ತಯಾರಿದ್ದಾರೆ ಇದನ್ನು ಇನ್ನಾದರೂ ತಿಳಿದು ಆ ಭಾಗ ಈ ಭಾಗ ಎಂದು ನೋಡದೆ ಕಷ್ಟದಲ್ಲಿರುವ ಪ್ರದೇಶಗಳಿಗೆ ತಕ್ಕ ಅನುಕೂಲ ಕಲ್ಪಿಸಬೇಕು. ನಮ್ಮದು ದರಿದ್ರ ಭೂಮಿಯಲ್ಲ, ಚೆನ್ನಾಗಿದೆ, ಮಳೆ ಬಂದರೆ ಸಾಕು, ಚೆನ್ನಾಗಿ ಬೆಳೆಯುವರು. ಇಂಥ ಪರಿಸ್ಥಿತಿಯಲ್ಲಿ ಯಾವ ಭಾಗವೇ ಆಗಲಿ ಕಷ್ಟದಲ್ಲಿರುವಾಗ ಅಲ್ಲಿಗೆ ಸಂಪೂರ್ಣವಾಗಿ ಸಹಾಯಮಾಡಿ ಬಂದಿರುವ ಪರಿಸ್ಥಿತಿಯನ್ನು ಎದುರಿಸಲು ಅಲ್ಲಿನ ಜನರಿಗೆ ಶಕ್ತಿಯನ್ನು ತಂದುಕೊಡಬೇಕು ಅಲ್ಲಿರುವ ಅಣ್ಣತಮ್ಮಂದಿರು, ತಂದೆತಾಯಿಗಳು ಎಂಥ ಪರಿಸ್ಥಿತಿಯಲ್ಲಿದ್ದಾರೆಂಬುದು ನೋಡಿದರೆ ಗೊತ್ತಾಗುವುದು ಕೊನಂದೂರು. ಲಿಂಗಪ್ಪನವರು, ಕಾಗೋಡು ತಿಮ್ಮಪ್ಪನವರು ಅವರ ಪರಿಸ್ಥಿತಿ ಅರಿತಿದ್ದಾರೆ. ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

(Mr. Deputy Speker in the Chair)

‡ ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬಿಹಾಳ).—ಮಾನ್ಯ ಸಭಾಪತಿಗಳೇ, ಈ ದಿವಸ ಆರ್ಮುಗಂರವರು ಕೊಟ್ಟಿರುವ ವರದಿ ಬಗ್ಗೆ ಕೇವಲ ನಾಲ್ಕು ಮಾತುಗಳನ್ನು ಹೇಳಲು ಪ್ರಯತ್ನಪಡುತ್ತೇನೆ. ನನಗೆ ತಿಳಿದಮಟ್ಟಿಗೆ ದೇವರು ಮಾಡದಿರುವ ಕೆಲಸವನ್ನು ಸರಕಾರ ಮಾಡಬೇಕೆಂದಿತ್ತು ಎಂದು ಅನೇಕ ಸದಸ್ಯರು ಭಾವಿಸಿರುವಂತೆ ಕಾಣುತ್ತದೆ. ಒಂದು ಗಂಭೀರ ಪರಿಸ್ಥಿತಿ ಇಂದಿನ ದಿವಸ ಇರುವಾಗ, ಒಂದು ಕಠಿಣ ಪ್ರಸಂಗವಿರುವಾಗ ದೇವರು ಎಲ್ಲರನ್ನೂ ಕಾಪಾಡಬೇಕು ಮಳೆಕೊಡಬೇಕು. ದೇವರು ಮಾಡದಿರುವುದನ್ನು ಮನುಷ್ಯ ಮಾಡಲು ಸಾಧ್ಯವೇ ? ಇದನ್ನು ವಿಚಾರ ಮಾಡಬೇಕಾಗುತ್ತದೆ ನನಗೆ ತಿಳಿದಮಟ್ಟಿಗೆ ದೇವರು ಮಾಡಿದಂಥ ಕೆಲಸವನ್ನು ಸರಕಾರ ಮಾಡಿದೆ ಎಂದು ಮಾನ್ಯ ಸದನದ ಮುಂದೆ ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. ಈಗ ಅತ್ತೆ ಸೊಸೆ ವಿಚಾರ ಜ್ಞಾಪಕಕ್ಕೆ ಬರುವುದು, ಸೊಸೆ ಎಷ್ಟು ಕೆಲಸಮಾಡಿದರೂ ಅತ್ತೆಗೆ ಸಮಾಧಾನವಾಗುವುದಿಲ್ಲ ಎಂದು ಹೇಳುವ ಸಂಪ್ರದಾಯವಿದೆ. ಹೀಗೆ ಕೆಲವು ಮಾನ್ಯ ಸದಸ್ಯರು ಸರಕಾರವನ್ನುದ್ದೇಶಿಸಿ ಹೇಳುವ ಪರಿಪಾಠವಿದೆ.

ಇನ್ನು ಆರ್ಮುಗಂ ಸಮಿತಿ ನೇಮಕಮಾಡುವಾಗ ನನಗೆ ತಿಳಿದಂತೆ ಈ ಸದನದ ಮುಂದೆ ಬಂದು ಮುಖ್ಯ ಪ್ರಶ್ನೆಯೆಂದರೆ ಸರಕಾರ ಸಾಧ್ಯವಿರುವ ಕೆಲಸ ಮಾಡಿದೆಯೋ ಇಲ್ಲವೋ, ಎರಡನೇಯದಾಗಿ ಬರಗಾಲದ ವಿಶೇಷ ಪರಿಸ್ಥಿತಿ ತಿಳಿದಿದೆಯೋ ಇಲ್ಲವೋ ಮತ್ತು ಮಂತ್ರಿಗಳು ನುಡಿದಂತೆ ನಡೆದರೇ ಎಂಬುದನ್ನು ಪರಿಶೀಲಿಸಬೇಕು ಎಂಬುದು. ಈ ಮೂರು ಮುಖ್ಯ ಪ್ರಶ್ನೆಗಳು ಆಗಿದ್ದವು ಎಂದು ನಾನು ತಿಳಿದಿದ್ದೇನೆ. ನನಗೆ ತಿಳಿದಂತ ಮಂತ್ರಿಗಳು ಬರಗಾಲದ ಪರಿಸ್ಥಿತಿಯನ್ನು ನಿಜವಾಗಿ ಅರಿತಿದ್ದಾರೆ, ಸಾಧ್ಯವಿದ್ದ ಕೆಲಸ ಮಾಡಿದ್ದಾರೆ ಎಂದು ಹೇಳುತ್ತೇನೆ.

3–30 P. M.

ಏನು ಕೆಲಸಗಳಿನ್ನೆ ಮಾಡಿಲ್ಲ ಎಂದು ಹೇಳತಕ್ಕದ್ದು ಇನ್ನೂ ಬಹಳ ವಿಚಿತ್ರವಾಗಿದೆ. ಈಗ ಅಲ್ಲಿ ಬಂದಿರತಕ್ಕ ಬರಗಾಲವೊಂದು ದೊಡ್ಡ ಪೆಡಂಭೂತ ಬಕಾಸುರ. ಆದುದರಿಂದ ಅಲ್ಲಿ ಇಲ್ಲಿಯುವರೆಗೂ ಎಷ್ಟೋ ಕೆಲಸಗಳನ್ನು ಮಾಡಿದ್ದರೂ ಅವಿನ್ನೂ ಸಾಲದು ಅನ್ನುವುದನ್ನು ನಾನೂ ಒಪ್ಪುತ್ತೇನೆ, ಎಲ್ಲರೂ ಅದನ್ನು ಒಪ್ಪುತ್ತಾರೆ ಆದರೆ ಅಲ್ಲಿ ದೊಡ್ಡ ದೊಡ್ಡ ಪ್ರಮಾಣದಲ್ಲಿ ಕೆಲಸಗಳನ್ನು ಕೈಗೊಳ್ಳಬೇಕಾಗಿರುವುದರಿಂದ ಅಲ್ಲಿ ಸ್ವಲ್ಪ ನಿಧಾನವಾಗಿರಬಹುದು ಆದರೆ ಇದೇ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ಅನೇಕರು ಇಲ್ಲಿ ರಾಜಕೀಯದ ವಾದಗಳನ್ನು ಮಾಡುತ್ತಿದ್ದೇವೆ. ಆದರೆ ನಾನು ಹೇಳುತ್ತಿದ್ದೇನೆ ನಮ್ಮ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಕೂಡ ಬರ ಬಿದ್ದಿದೆ. ಆದರೆ ಅಲ್ಲಿ ಸಾಕಷ್ಟು ಕೆಲಸಗಳು ಆಗಿವೆ. ಆದರೆ ಮಾನ್ಯ ಆರ್ಮುಗಂ ಅವರು ನಮ್ಮ ತಾಲ್ಲೂಕಿನ ವಿಚಾರದಲ್ಲಿ ಮತ್ತು ಬಸವನಬಾಗೇವಾಡಿ ವಿಚಾರದಲ್ಲಿ ಒಂದು ಮಾತನ್ನೂ ಕೂಡ ಹೇಳಿಲ್ಲ. ಆದಕ್ಕಾಗಿ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಆದರೆ

ಅವರಿಗೆ ಸರಿಯಾಗಿ ಇಲ್ಲಿ ಅಲ್ಲಿನ ಅಧಿಕಾರಿಗಳಿಂದ ಮಾಹಿತಿ ಸಿಕ್ಕಿತೋ ಇಲ್ಲವೋ ಗೊತ್ತಾಗುತ್ತಿಲ್ಲ. ಆದರೂ ಇಲ್ಲಿ ಅವರು ಏನನ್ನೂ ತಿಳಿಸದಿರುವುದರ ಬಗ್ಗೆ ಒಂದು ಸಂಶಯ ಬರುವುದಕ್ಕೆ ಅವಕಾಶವುಂಟಾಗಿದೆ.

ಆದರೆ ಮಾನ್ಯ ಅಧ್ಯಕ್ಷರೇ, ನಾನು ಕೇಳುತ್ತೇನೆ ಒಂದು ಪ್ರಶ್ನೆಯನ್ನು ಇದೆಲ್ಲಾ ನನಗೆ ಗೊತ್ತು. ಇದೊಂದು ರಾಜಕೀಯದ ಗತ್ತು ಎಂದು' ಆ ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳ ಪರಿಸ್ಥಿತಿ ಎಷ್ಟು ಭೀಕರವಾಗಿದೆಯೋ ಅಷ್ಟೇ ನಮ್ಮ ಮುದ್ದೇಬಿಹಾಳದ ಪರಿಸ್ಥಿತಿಯೂ ಭೀಕರವಾಗಿದೆ. ಆದರೆ ಅದರ ಬಗ್ಗೆ ಈ ವರದಿಯಲ್ಲಿ ಒಂದು ಚಕಾರ ಸೈತಾ ಇಲ್ಲ. ಅದಕ್ಕಾಗಿ ನಾನು ವಿಷಾದಿಸುತ್ತೇನೆ. ಮಾನ್ಯ ಆರ್ಮುಗಂ ಅವರು ನಮ್ಮ ಮುದ್ದೇಬಿಹಾಳ ತಾಲ್ಲೂಕಿನ ಕೆಲವು ಗ್ರಾಮಗಳಿಗಾದರೂ ಹೋಗಿದ್ದರೆ ಚೆನ್ನಾಗಿತ್ತು. ಅಲ್ಲಿ ಈ ದಿವಸ ಇಟ್ಟ ಬೆಳೆಗಳೆಲ್ಲಾ ಒಣಗುತ್ತಿವೆ. ಆದರೆ ಇಂಡಿಗಿ, ಸಿಂಧಗಿ ಮತ್ತು ಇನ್ನು ಕೆಲವು ತಾಲ್ಲೂಕುಗಳನ್ನು ಬಿಜಾಪುರದಲ್ಲಿ ಬಿಟ್ಟುಕೊಂಡರೆ ಇನ್ನುಳಿದ ತಾಲ್ಲೂಕುಗಳೆಲ್ಲಾ ಬಹಳ ಸುಭಿಕ್ಷವಾದ ತಾಲ್ಲೂಕುಗಳು. ಇಲ್ಲಿ ಪುಟ ೩ರಲ್ಲಿ ಹೀಗೆ ಹೇಳಲಾಗಿದೆ.—

The northern and north-eastern districts which are affected by scarcity conditions are as follows –(1) Bidar, complete district, consisting of 5 taluks, (2) Gulbarga district consisting of 10 taluks,(3) Bijapur district –2 1/2 taluks Indi, Sindgi and part of Bijapur taluk. (4) Belgaum district-Athani and Ramdurg taluks and parts of Raibag, Chikodi Gokak, Soundatti and Hukkeri.

ಇನ್ನು ಮುದ್ದೇಬಿಹಾಳ ಮತ್ತು ಬಾಗೇವಾಡಿ ತಾಲ್ಲೂಕುಗಳಲ್ಲಿ ಮಳೆ ಎಷ್ಟು ಬೀಳುತ್ತದೆ ಎಂಬುದಕ್ಕೆ ವಿವರಗಳನ್ನೂ ಕೂಡ ತಿಳಿಸಿದ್ದಾರೆ. ಆದರೆ ಇವರು ಈ ಡ್ರಾಟ್ ಕಂಡೀಷನ್ ಮಳೆ ಬೀಳುವುದರ ಲೆಕ್ಕಾಚಾರದ ಮೇಲೆ ಒಂದರ ಮೇಲೆಯೇ ಹೇಳಿದ್ದಾರೋ ಅಥವಾ ಇದಕ್ಕೆ ಇನ್ನೂ ಯಾವುದಾದರೂ ಮಾಪಕವಿದೆಯೋ ಅನ್ನುವುದಕ್ಕೆ ಶ್ರೀ ಆರ್ಮುಗಂ ಅವರನ್ನು ಕೇಳಬೇಕಾಗಿದೆ. ಅವರ ವರದಿಯಲ್ಲಿ ಯಾವ ಯಾವ ಪ್ರದೇಶದಲ್ಲಿ ಅಂದರೆ ಅಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಏಪ್ರಿಲ್‌ನಲ್ಲಿ ಮತ್ತು ಮೇ, ಜೂನ್, ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ಎಷ್ಟೆಷ್ಟು ಮಳೆ ಬಿತ್ತೆಂಬುದನ್ನು ತಿಳಿಸಿದ್ದಾರೆ. ಆದರೆ ಆ ಮಾನ್ಯ ಸದಸ್ಯರು ಒಂದು ವಿಚಾರವನ್ನು ತಿಳಿದುಕೊಳ್ಳಬೇಕಾಗಿದೆ–ಅದೇನೆಂದರೆ ಸೆಪ್ಟೆಂಬರ್ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲೂ ಕೂಡ ಮಳೆ ಬೀಳುತ್ತದೆ. ಆ ಕಾಲದಲ್ಲಿ ಕೆಲವು ದೊಡ್ಡ ಮಳೆಗಳೂ ಕೂಡ ಬೀಳುತ್ತವೆ. ಈವಿಚಾರ ಒಕ್ಕಲುತನದ ಜ್ಞಾನ ಇರತಕ್ಕವರಿಗೆಲ್ಲಾ ತಿಳಿದುದ್ದೇ ಆಗಿದೆ. ಆದರೆ ಈ ಕೊನೆಯ ನಾಲ್ಕು ತಿಂಗಳಲ್ಲೂ ಕೂಡ ಆ ಮುದ್ದೇಬಿಹಾಳ ಮತ್ತು ಬಸವನಬಾಗೇವಾಡಿ ತಾಲ್ಲೂಕುಗಳಲ್ಲಿ ಮಳೆಯಾಗಲಿಲ್ಲ. ಆದಾಗ್ಯೂ ಅವರು ಆ ಇಂಡಿ ಸಿಂಧಗಿ ತಲ್ಲೂಕುಗಳೇ ಬಹಳ ಬರಗಾಲಕ್ಕೆ ಸಿಕ್ಕಿರತಕ್ಕ ಪ್ರದೇಶಗಳೆಂದು ಹೇಳಿ ರತಕ್ಕದ್ದು ಸರಿಯಲ್ಲಾ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ'. ಅವರಿಗೆ ಈ ವಿಷಯಗಳು ರೆಕಾರ್ಡ್ ಮೂಲಕ ಗೊತ್ತಾಗದಿದ್ದರೆ ಬೇರೇ ಮಾರ್ಗದಿಂದಲಾದರೂ ಸಂಗ್ರಹಣೆ ಮಾಡಬಹುದಿತ್ತು. ಅವರ ವರದಿಯಲ್ಲಿ ಇಲ್ಲದಿದ್ದರೂ ನಾನು ಆ ಮುದ್ದೇಬಿಹಾಳ ಮತ್ತು ಬಸವನಬಾಗೇವಾಡಿ ಈ ಈ ಎರಡು ತಾಲ್ಲೂಕುಗಳೂ ಬಹಳ ಕ್ಷಾಮಕ್ಕೆ ಒಳಗಾದ ಪ್ರದೇಶಗಳೆಂದು ಒತ್ತಿಹೇಳುತ್ತೇನೆ. ಆದರೆ ಮುದ್ದೆಬಿಹಾಳ ತಾಲ್ಲೂಕಿನಲ್ಲಿ ಸಾಕಷ್ಟು ಕೆಲಸಗಳಾಗಿವೆ.

ಇನ್ನು ಈ ಆರ್ಮುಗಂ ಅವರ ವರದಿಯಲ್ಲಿ ಸತ್ಯಕ್ಕೆದೂರವಾದ ಅನೇಕ ಸಂಗತಿಗಳಿವೆ. ಸರ್ಕಾರಕ್ಕೆ ವಿರುದ್ಧವಾದ ಅನೇಕ ಸಂಗತಿಗಳೂ ಇರುತ್ತವೆ. ಪುಟ ೪೦ ರಲ್ಲಿ ನೋಡಿ ಅಲ್ಲಿ ಮುಖ್ಯಮಂತ್ರಿಗಳು ತಾ॥ ೧೬ನೇ ಸೆಪ್ಟೆಂಬರ್ ೧೯೭೨ರಲ್ಲಿ ಅಗರಖೇಡಾ ಮತ್ತು ಇಂಡೀ ಈ ಎರಡು ಗ್ರಾಮಗಳನ್ನು ಮಾತ್ರ ಭೇಟಿ ಮಾಡಿದ್ದರೆಂದು ಹೇಳಿದ್ದಾರೆ. ಅದು ಸರಿಯಾದದ್ದಲ್ಲ. ಆ ದಿವಸ ಅವರು ಮುದ್ದೇ ಬಿಹಾಳಿನ ಕೆಲವು ಗ್ರಾಮಗಳಿಗೂ ಕೂಡ ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಿದ್ದಲ್ಲದೆ, ಅಲ್ಲಿ ಕೆಲವು ಗ್ರಾಮಗಳಲ್ಲಿ ರಾತ್ರಿ ಹತ್ತು ಗಂಟೆಯ ವೇಳೆಲಿ ಸುಮಾರು ೧೦-೧೫ ಸಾವಿರ ಜನರನ್ನು ಉದ್ದೇಸಿಸಿ ಭಾಷಣ ಕೂಡ ಮಾಡಿದ್ದಾರೆ. ಹಾಗಿರುವಾಗ ಅದನ್ನು ವರದಿಯಲ್ಲಿ ನಮೂದಿಸಿಲ್ಲ. ಇದನ್ನೆಲ್ಲಾ ಮಾಹಿತಿ ಪಡೆದು ಶ್ರೀ ಆರ್ಮುಗಂರವರು ಬರೆಯಬೇಕಾಗಿತು. ಆದರೆ ಇವರು ಅಲ್ಲಿ ಹೂವಿನಹಿಪ್ಪರಿಗಿ ಮತ್ತು ಇನ್ನು ಕೆಲವು ಗ್ರಾಮಗಳ ವಿಚಾರವನ್ನು ಇವರು ತಮ್ಮ ವರದಿಯಲ್ಲಿ ಏನೂ ಬರೆಯದೆ ಹಾಗೇ ಕೈಬಿಟ್ಟಿದ್ದಾರೆ.

ಶ್ರೀ ಜೆ. ಎಲ್. ಕಬಾಡಿ :—ಸ್ವಾಮಿ ನನ್ನ ಒಂದು ಕ್ರಿಯೊಲೋಪವಿದೆ. ಈ ಏಕಸದಸ್ಯ ಆಯೋಗದವರು ಇಂಡಿ ತಾಲ್ಲೂಕಿನಲ್ಲಿ ಇಂಥ ಹಳ್ಳಿಗೇ ಭೇಟಿ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಮುಖ್ಯ ಮಂತ್ರಿಗಳು ಹೋಗಿದ್ದ ಗ್ರಾಮವನ್ನು ಹೇಳಿದರು. ಆದರೆ ಇದು ಏಕಸದಸ್ಯ ಆಯೋಗದವರ ವರದಿಯೋ ಅಥವಾ ಮುಖ್ಯ ಮುಂತ್ರಿಗಳು ಭೇಟಿ ಕೊಟ್ಟ ಗ್ರಾಮಗಳ ವರದಿಯೋ ? ಅದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕಲ್ಲವೇ?

Mr. Deputy Speaker :—What sort of a Point of Order is this? The hon. member wanted that Sri Sajjan should yield. But he has not yielded. Now he is converting the Point of Order to avail himself of an opportnity to speak. This is not good for Sri Kabadi who is not new to this House.

ಶ್ರೀ ಎಂ. ಎಂ. ಸಜ್ಜನ್ :—ಮಾನ್ಯ ಸದಸ್ಯರು ಏಕೆ ಇದರಲ್ಲಿ ವಕೀಲಿವಹಿಸಬೇಕು? ಶ್ರೀ ಆರ್ಮುಗಂ ಅವರೇ ಇಲ್ಲಿದ್ದಾರೆ. ಅವರೇ ಹೇಳಬಹುದಲ್ಲಾ?

Mr. Deputy Speaker.—If he finds something in this wanting (report, he should not expect it) from the hon. Member Sri Arumugam. The reply will come from the Government.

Sri M. M. Sajjan.—There was no necessity for the intervention by Mr. Kabadi.

ನಾನು ಈಗ ಮುಖ್ಯವಾಗಿ ಹೇಳಬೇಕಾದದ್ದು, ಸನ್ಮಾನ್ಯ ಸದಸ್ಯರಾದ ಮಾನ್ಯ ಶ್ರೀ ಆರ್ಮುಗಂ ಅವರು ಅವರ ವರದಿಯಲ್ಲಿ ಕೆಲವೊಂದು ವಿಷಯಗಳನ್ನು ಬರೆದಿಲ್ಲ. ಆದ್ದರಿಂದ ಹಿಂದುಳಿದ ಬಿಜಾಪುರ ಜಿಲ್ಲೆಯಲ್ಲಿ ೨೦೦ ತಾಲ್ಲೂಕುಗಳ ಚಿತ್ರ ಮಾನ್ಯ ಸದಸ್ಯರಿಗೆ ಒಂದೇ ಸಾರಿ ಗೊತ್ತಾಗುವುದಿಲ್ಲವೆನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಆದರೆ ನಾನು ಯಾವುದೇ ತರಹ ದೋಷಾರೋಪಣೆಯನ್ನು ಮಾನ್ಯ ಸದಸ್ಯರಾದಂಥ ಶ್ರೀ ಆರ್ಮುಗಂ ಅವರ ಮೇಲೆ ಹೊರಿಸುವುದಿಲ್ಲ.

ಇನ್ನು ಪುಟ ೫೮. ಮೈಗ್ರೇಷನ್ ಬಗ್ಗೆ ಯಾವ್ಯಾವ ತಾಲ್ಲೂಕಿನಿಂದ ಎಷ್ಟೆಷ್ಟು ಜನರು ವಲಸೆ ಹೋಗಿದ್ದರು ಎನ್ನತಕ್ಕ ವಿವರವನ್ನೂ ಕೂಡ ಸನ್ಮಾನ್ಯ ಸದಸ್ಯರಾದ ಶ್ರೀ ಆರ್ಮುಗಂ ಅವರು ಬರೆದಿಲ್ಲ. ಈ ಪ್ರಶ್ನೆ ಬಹಳ ಗಂಭೀರವಾಗಿದೆ. ಸಿಂಧಗಿ ಮಾನ್ಯ ಸದಸ್ಯರು ಇಂಡಿ ತಾಲ್ಲೂಕಿನಿಂದ ಸಾವಿರಾರು ಜನರು ವಲಸೆ ಹೋಗುತ್ತಿದ್ದರೆಂದು ಹೇಳುವಾಗ, ಬಿಜಾಪುರ ಡೆಪ್ಯುಟಿ ಕಮಿಷನರ್ ಅತಂಟಿಕೇಟೆಡ್ ಸ್ಟೇಟ್‌ಮೆಂಟ್ ಕೊಟ್ಟಿರುವುದನ್ನು ಸಹ ನೋಡಬಹುದು. ಅಭಾವ ಪರಿಸ್ಥಿತಿ ಈಗ ಬಿಜಾಪುರದ ಮೂರು-ನಾಲ್ಕು ತಾಲ್ಲೂಕುಗಳಲ್ಲಿ ಹೆಚ್ಚಾಗಿದೆ. ನನಗೆ ತಿಳಿದು ಬಂದಿರುವ ಪ್ರಕಾರ ಸಿಂಧಗಿ ತಾಲ್ಲೂಕಿನಲ್ಲಿ ಯಾರೂ ವಲಸೆ ಹೋಗಿಲ್ಲ. ಇಂಡಿ ತಾಲ್ಲೂಕಿನಲ್ಲಿಯೂ ವಲಸೆ ಯಾರೂ ಹೋಗಿಲ್ಲ. ಆದ್ದರಿಂದ ಅಲ್ಲಿಂದ ವಲಸೆ ಜನ ಹೋಗಿದ್ದಾರೆಂದು ಹೇಳುವ ಮಾತು ನಿಜವಾಗಿ ಸತ್ಯಕ್ಕೆ ದೂರವಾದ ಮಾತು ಎಂಬುದಾಗಿ ನಾನು ಹೇಳುತ್ತಿದ್ದೇನೆ. ಈಗ ಸರ್ಕಾರದವರು ಬರಗಾಲದಿಂದ ಬಳಲತಕ್ಕ ಪ್ರದೇಶದಲ್ಲಿ ನನಗೆ ತಿಳಿದ ಹಾಗೆ ರಸ್ತೆಗಳನ್ನು ಮಾಡಿಸುತ್ತಿದ್ದಾರೆ ಬಾವಿ ತೋಡುವ ಕೆಲಸಕಾರ್ಯಗಳನ್ನು ಮಾಡಿಸುತ್ತಿದ್ದಾರೆ. ಕೆಲವು ಪ್ರದೇಶಗಳಲ್ಲಿ ಬಾವಿಗಳಲ್ಲಿ ನೀರೇ ಇಲ್ಲವೆಂದು ಹೇಳುತ್ತಿದ್ದಾರೆ. ಅಂಥಹ ಪ್ರದೇಶಗಳಲ್ಲಿ ಬದಿಗಳ ನಿರ್ಮಾಣಕ್ಕಾಗಿ ಹೆಚ್ಚಿನ ಹಣವನ್ನು ಖರ್ಚುಮಾಡಲು ಸರ್ಕಾರದವರು ಮನಸ್ಸು ಮಾಡಿದ್ದರೆ ಪ್ರೊಡಕ್ಷನ್ ವರ್ಕ್ಸ್ ಜಾಸ್ತಿಯಾಗಿ ಆಗುತ್ತಿತ್ತು. ಅಲ್ಲಿನ ಜನರಿಗೆ ವಿಶೇಷವಾಗಿ ಈಗ ನೀರು ಯಥೇಚ್ಛವಾಗಿ ಸಿಗಬೇಕು. ನೀರು ಹೆಚ್ಚಿಗೆ ದೊರೆತರೆ ಇರ್ರಿಗೇಷನ್ ಮಾಡುವುದಕ್ಕೂ ಮತ್ತು ತೋಟಗಳನ್ನು ಮಾಡುವುದಕ್ಕೂ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ಇನ್ನು ಮುಂದೆ ಪ್ರತಿಯೊಂದು ಗ್ರಾಮದಲ್ಲಿಯೂ ಬಾವಿ ತೆಗೆಸಬೇಕು. ಆಗ ಬರಗಾಲ ಪರಿಸ್ಥಿತಿ ಎಷ್ಟೋ ನಿವಾರಣೆಯಾಗುತ್ತದೆ. ಇನ್ನು ನನ್ನ ಮಾನ್ಯ ಗೆಳೆಯರಾದ ಮಾನ್ಯ ಶ್ರೀ ಬಾಪುಗೌಡರು ಮಿಡಲ್ ಕ್ಲಾಸ್ ಜನರ ಬವಣೆ ಹೋಗಬೇಕಾದರೆ ಅವರಿಗೆ ತೋರಿದಂಥಹ ಮಾತನ್ನು ಹೇಳಿದರು. ಅದು ನಿಜಕ್ಕೂ ಆಗಬೇಕು. ಒಕ್ಕಲಿಗರಿಗೆ ಬೇಕಾದಂಥ ಹೊಲಗಳಲ್ಲಿ ಬಾವಿ ತೆಗೆಸಿಕೊಟ್ಟರೆ ಒಂದು ಬಾವಿಗೆ ೩೦ರಿಂದ ೪೦ ಜನರು ದುಡಿಯುವುದರಿಂದ ಕೂಲಿ ಸಿಗುತ್ತದೆ ಈ ಬಾವಿಯನ್ನು ಆಮೇಲೆ ಹೊಲದ ಮಾಲೀಕನ ವಶಕ್ಕೆ ಕೊಟ್ಟರೆ ಅವನು ಸ್ವತಃ ದುಡಿದು ಅದರಿಂದ ಅನುಕೂಲ ಪಡೆದುಕೊಳ್ಳುತ್ತಾನೆ. ಇದರ ಜೊತೆಗೆ ಬರಗಾಲ ಪೀಡಿತ ಪ್ರದೇಶಗಳಲ್ಲಿ ಇರತಕ್ಕ ಕಾಲೇಜುಗಳಲ್ಲಿ, ಸ್ಕೂಲುಗಳಲ್ಲಿ ಫೀಸ್ ಮಾಫಿ ಮಾಡಬೇಕೆಂಬ ಮಾತನ್ನು ಹೇಳಿದ್ದಾರೆ ಅಲ್ಲಿ ಬರಗಾಲದಿಂದ ಬಳಲತಕ್ಕ ಜನರ ಮಕ್ಕಳಿಗೆ ಅದರಲ್ಲಿಯೂ ವಿದ್ಯಾರ್ಥಿಗಳಿಗೆ ಒಳ್ಳೆಯ ಪರ್ಯಾಯ ಸಿಗಬೇಕಾದರೆ ಅವರಿಗೆ ಮೊಟ್ಟ ಮೊದಲನೆಯದಾಗಿ ಫೀಸ್ ವಿಷಯದ ಬಗ್ಗೆ ಅನುಕೂಲಗಳು ಒದಗಬೇಕು. ಗುಲ್ಬರ್ಗಾದಲ್ಲಿನ ಹುಡುಗರು ಬಿಜಾಪುರ, ಹೈದರಬಾದ್, ಮುಂತಾದ ಸ್ಥಳಗಳಿಗೆ ಹೋಗಿ ಕಲಿಯಬಹುದು ಅವರು ಎಲ್ಲಿ ಹೋದರೂ ಬರಗಾಲ ಪೀಡಿತ ಪ್ರದೇಶಗಳಿಂದ ಹೋದಂಥ ಮಕ್ಕಳಿಗೆ ಯಾವುದೇ ಕಾಲೇಜಿನಲ್ಲಿಯೂ ಫೀಮಾಫಿ ಮಾಡಬೇಕು. ಅದರ ಬಗ್ಗೆ ಸರ್ಕಾರದವರು ಒಂದು ತಿದ್ದುಪಡಿ ಆಜ್ಞೆಯನ್ನು ಹೊರಡಿಸಬೇಕು. ಅದು ಈಗಲೇ ಸರ್ಕಾರದಲ್ಲಿ ಆಗಬೇಕೆಂಬ ಮಾತನ್ನು ನಾನು ಹೇಳಬಯಸುತ್ತೇನೆ.

ಇನ್ನು ಸಿಂಧಗಿ ತಾಲ್ಲೂಕಿನ ಮಾನ್ಯ ಸದಸ್ಯರು ಅಲ್ಲಿಯ ಜನರಿಗೆ ಕೆಲಸವಿಲ್ಲ, ಕೆಲಸವಿಲ್ಲ ಎಂಬುದಾಗಿ ಬಹಳ ಆವೇಶದಿಂದ ಮಾತನಾಡಿದರು. ನಾನು ಈ ಸಂದರ್ಭದಲ್ಲಿ ಈ ಸದನದ ಗಮನಕ್ಕೆ ಒಂದು ವಿಚಾರವನ್ನು ತರುತ್ತಿದ್ದೇನೆ. ಆ ತಾಲ್ಲೂಕಿನಲ್ಲಿ ೧೮ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಈಗಾಗಲೇ ೯ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಂದ ಮೇಲೆ ೯ ಲಕ್ಷ ರೂಪಾಯಿಗಳು ಅಲ್ಲಿಯೇ ಇದೆ. ಅದು ಸಂಬಂಧಪಟ್ಟ ಅಧಿಕಾರಿಗಳ ಒಂದು ತಹಬಾದಿನಲ್ಲಿಯೇ ಇತ್ತು. ಅವರು ಬೇಕಾದಷ್ಟು ಕೆಲಸಗಳನ್ನು ಮಾಡುವುದಕ್ಕೆ ಅವಕಾಶವಿಲ್ಲ. ಅದಕ್ಕಾಗಿಯೇ ಮಾನ್ಯ ಸದಸ್ಯರು ಆ ರೀತಿಯಾಗಿ ರಾಜಕೀಯವಾಗಿ ಮಾತನಾಡಿದರೆಂದು ನಾನು ಪುನಃ ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ :—ಮಾನ್ಯ ಸದಸ್ಯರು ರಾಜಕೀಯವಾಗಿ ಮಾತನಾಡಿದರೆಂದರೆ ಹೇಗೆ? ನಾವು ಆ ರೀತಿಯಾಗಿ ಮಾತನಾಡಲಿಲ್ಲ. ಮಾನ್ಯ ಸದಸ್ಯರು ಕ್ಷಾಮದ ಬಗ್ಗೆ ಮಾತನಾಡಿದ ಎಲ್ಲಾ ಸದಸ್ಯರು ರಾಜಕೀಯ ದೃಷ್ಟಿಯಿಂದ ಮಾತನಾಡಿದ್ದಾರೆ ಎಂದು ಹೇಳಿದರು. ಇದು ನ್ಯಾಯದ ದೃಷ್ಟಿ ಕೋನದಿಂದ ನೋಡಿದರೆ ವಿರುದ್ಧವಾಗಿ ಕಾಣುತ್ತದೆ. ಸತ್ಯಕ್ಕೆ ದೂರವಾಗಿರುತ್ತದೆ ಮತ್ತು ಕ್ರಮಬದ್ಧ ವಲ್ಲವೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಅದು ಮಾನ್ಯ ಸದಸ್ಯರ ಅಭಿಪ್ರಾಯ ಅಷ್ಟೆ.

ಶ್ರೀ ಎಂ. ಎಂ. ಸಜ್ಜನ್ ನಾನು ಎಲ್ಲಾ ಸದಸ್ಯರು ರಾಜಕೀಯವಾಗಿ ಮಾತನಾಡಿದ್ದಾರೆಂದು ಹೇಳಿಲ್ಲ. ಕೇವಲ ಸಿಂಧಗಿ ಸದಸ್ಯರು ಆ ರೀತಿಯಲ್ಲಿ ಮಾತನಾಡಿದರು ಎಂದು ನಾನು ಹೇಳಿದ್ದೇನೆಯೇ ಹೊರತು ಬೇರೇನೂ ಅಲ್ಲ. ನಮ್ಮ ಸರ್ಕಾರದವರು ಬಿಜಾಪುರಕ್ಕೆ ಬರಗಾಲದ ಬಗ್ಗೆ ಒಂದು ಕೋಟಿ ೨೨ ಲಕ್ಷ ೭೭ ಸಾವಿರದ ೮೦೦ ರೂಪಾಯಿ ಖರ್ಚು ಮಾಡಿ ೮೦ ಲಕ್ಷ ಜನರಿಗೆ ಕೆಲಸವನ್ನು ಒದಗಿಸಿ ಕೊಟ್ಟಿದ್ದಾರೆ. ಈಗ ಇದ್ದಂತಹ ಅಥವಾ ಇನ್ನು ಮುಂದೆ ಬರಬಹುದಾದಂತಹ ಭೀಕರ ಪರಿಸ್ಥಿತಿ ನಿವಾರಣೆಯಾಗಬೇಕಾದರೆ, ಆಲಮಟ್ಟಿ ಡ್ಯಾಮಿನ ಲಿಫ್ಟ್ ಇರಿಗೇಶನ್ ಸ್ಕೀಮಿನ ೨ನೇ ಹಂತದಲ್ಲಿ ಆಗತಕ್ಕ ಲಿಫ್ಟ್ ಕಂ ಫ್ಲೋ ಕೆನಾಲ್ ಯೋಜನೆ ಏನಿದೆ, ಅದನ್ನು ಆದಷ್ಟು ಜಾಗ್ರತೆಯಾಗಿ ಮಾಡಿ ಮುಗಿಸಬೇಕು. ಅದರ ಬಗ್ಗೆ ಒಂದು ೫ ಕೋಟಿ ರೂಪಾಯಿಯ ಯೋಜನೆ ಮಾಡಿ ಚೀಫ್ ಇಂಜಿನಿಯರ್ ಮಂಜೂರು ಮಾಡುವುದಕ್ಕೋಸ್ಕರ ಸರ್ಕಾರಕ್ಕೆ ಕಳಿಸಿ ಕೊಟ್ಟಿದ್ದಾರೆ. ಅದು ಮಂಜೂರು ಆದರೆ ಅದರಿಂದ ಸುಮಾರು ೨೦ ಸಾವಿರ ಜನರಿಗೆ ಕೆಲಸ ದೊರಕುತ್ತದೆ ಮತ್ತು ಸುಮಾರು ೫೦–೫೫ ಸಾವಿರ ಎಕರೆ ಮುದ್ದೇಬಿಹಾಳ್ ಮತ್ತು ಇನ್ನೊಂದು ತಾಲೂಕಿನಲ್ಲಿ ನೀರಾವರಿಯಾಗುತ್ತದೆ. ಆದ್ದರಿಂದ ಇದಕ್ಕೆ ಮಹತ್ವ ಕೊಟ್ಟು ಈ ಕೆಲಸವನ್ನು ತುರ್ತಾಗಿ ತೆಗೆದುಕೊಂಡು ಬರಗಾಲ ಪ್ರದೇಶದಲ್ಲಿರತಕ್ಕಂತಹ ಜನರಿಗೆ ಕೆಲಸ ಸಿಗುವಂತೆ ಮಾಡಬೇಕೆಂದು ಹೇಳುತ್ತೇನೆ.

ಅದರ ಜೊತೆಯಲ್ಲಿ ಬಿಜಾಪುರ ಜಿಲ್ಲೆ ಕೈಗಾರಿಕೆಯಲ್ಲಿಯೂ ಬಹಳ ಹಿಂದುಳಿದ ಪ್ರದೇಶ ಎಂಬುದು ಎಲ್ಲರಿಗೂ ಗೊತ್ತಿದೆ. ಹೆಚ್ಚು ಕೈಗಾರಿಕೆಗಳನ್ನು ಅಲ್ಲಿ ಮಾಡುವುದರಿಂದ ಜನರಿಗೆ ಹೆಚ್ಚು ಕೆಲಸವನ್ನು ಕೊಡುವುದಕ್ಕಾಗುತ್ತದೆ. ಆ ಪ್ರದೇಶದ ತಾಳೀಕೋಟೆ ಎನ್ನುವಲ್ಲಿ ಒಂದು ಸಿಮೆಂಟ್ ಫ್ಯಾಕ್ಟರಿ ಮಾಡಬೇಕೆಂದು ಕೆಲಸ ಶುರು ಮಾಡಿದ್ದಾರು. ಅದಕ್ಕೆ ನಾಲ್ಕು ಕೋಟಿ ರೂಪಾಯಿ ಖರ್ಚಾಗುತ್ತದೆ. ಅದನ್ನು ಅಲ್ಲಿ ಬೇಗನೇ ಮಾಡಿದರೆ ಇಡೀ ತಾಲ್ಲೂಕಿನ ಹಿತದೃಷ್ಟಿಯಿಂದ ಒಂದು ಒಳ್ಳೆಯ ಕೆಲಸ ಮಾಡಿ ಬರಗಾಲದ ಪ್ರದೇಶದ ಜನರಿಗೂ ಅನುಕೂಲ ಮಾಡಿದ ಹಾಗೆ ಆಗುತ್ತದೆ. ಅದನ್ನು ಜಾಗ್ರತೆಯಾಗಿ ಮಾಡಬೇಕೆಂದು ಹೇಳುತ್ತೇನೆ.

ನನ್ನ ಅನುಭವದ ಪ್ರಕಾರ ಹಿಂದೆ ಯಾವುದೇ ಸರ್ಕಾರ ಬಂದಿರಬಹುದು ಅಥವಾ ಬಂದು ಹೋಗಿರ ಬಹುದು: ಆದರೆ ಯಾವ ಬರಗಾಲದಲ್ಲಿಯೂ ಈಗಿನ ಸರ್ಕಾರ ಮಾಡಿದಂತಹ ಕೆಲಸ ಹಿಂದೆ ಯಾವ ಸರ್ಕಾರವೂ ಮಾಡಿಲ್ಲವೆಂದು ಹೇಳುತ್ತೇನೆ. ಸರ್ಕಾರದ ಮಂತ್ರಿಗಳು ಬೇರೆ ಬೇರೆ ಬರಗಾಲದ ಪ್ರದೇಶಕ್ಕೆ ಹೋಗಿ ಅಲ್ಲಿರತಕ್ಕಂತಹ ಪರಿಸ್ಥಿತಿಯನ್ನು ನೋಡಿ ಸಾಕಷ್ಟು ಕೆಲಸಕಾರ್ಯಗಳನ್ನು ಮಾಡಿ ಯಾರೂ ವನವಾಸ, ಉಪವಾಸ ಮಾಡದ ಹಾಗೆ ಮಾಡಿದ್ದಾರೆ. ಆದರೆ ಅನೇಕ ಸದಸ್ಯರು ಇಷ್ಟು ಮಾಡಿದರೂ, ಏನೂ ಮಾಡಿಲ್ಲವೆಂದು ಹೇಳುವುದನ್ನು ನೋಡಿದರೆ ಅದು ಬಹಳ ಕಟುವಾಗಿ ಕಾಣುತ್ತದೆ. ಮಾನ್ಯ ಆರ್ಮುಗಂ ರವರ ವರದಿಯಲ್ಲಿರತಕ್ಕಂತಹ ಬರಗಾಲದ ಪರಿಸ್ಥಿತಿ ಚಿತ್ರ ಸರಿಯಾಗಿದ್ದರೂ ಕೂಡ ಸರ್ಕಾರದ ಮೇಲೆ ಅದರಲ್ಲಿ ಮಾಡಿದಂತಹ ಅಪಾದನೆ ಸತ್ಯಕ್ಕೆ ದೂರವಾದುದು ಎಂಬ ಮಾತನ್ನು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿಶ್ವನಾಥರೆಡ್ಡಿ (ಯಾದಗಿರಿ) —ಸನ್ಮಾನ್ಯ ಅಧ್ಯಕ್ಷರೆ, ನಾವು ಇಂದು ಚರ್ಚಿಸುತ್ತಾ ಇರುವುದು ಪ್ರತಿ ವರ್ಷ ಆಗುವಂತಹ ಅಥವಾ ಸಾಧಾರಣವಾಗಿ ಆಗುವಂತಹ ಬರಗಾಲದ ಪರಿಸ್ಥಿತಿ ಯಲ್ಲ. ಅಲ್ಲಿ ಜನರು ಇವತ್ತು ಸಾವಿನ ಸೆರೆಯಲ್ಲಿ ಹೋರಾಟ ಮಾಡುತ್ತಿದ್ದಾರೆ ಅಂಥ ಒಂದು ಪರಿಸ್ಥಿತಿಯ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುತಿದ್ದೇವೆಂಬುದನ್ನು ಎಲ್ಲರೂ ಲಕ್ಷದಲ್ಲಿಟ್ಟುಕೊಳ್ಳಬೇಕು. ಪ್ರತೀ ವರ್ಷವೂ ಅಲ್ಲಲ್ಲಿ ಸಮಯಕ್ಕೆ ಸರಿಯಾಗಿ ಮಳೆಯಾಗದೆ ಇರುವುದರಿಂದ ಸರ್ಕಾರದವರು ಏನಾದರೂ ಅಲ್ಲಿ ಕೆಲಸ ಮಾಡಿಸುತ್ತಿದ್ದಾರೆ. ಅದು ತಾತ್ಕಾಲಿಕವಾದು ಪರಿಸ್ಥಿತಿಯಾಯಿತು. ಆದರೆ ಇವೊತ್ತಿನ ದಿವಸ ಬಂದಂತಹ ಪರಿಸ್ಥಿತಿ ಬಹಳ ವಿಪರೀತವಾದುದು. ನಾವು ಇವತ್ತು ಬಹಳ ತೀವ್ರವಾದ ಫ್ಯಾಮಿನ್ ಪರಿಸ್ಥಿತಿಯಲ್ಲಿದ್ದೇವೆಂಬುದನ್ನು ಮಾನ್ಯ ಸದಸ್ಯರು ಮನಗಾಣಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಸದನದ ಮಾನ್ಯ ಸದಸ್ಯರು ಒಬ್ಬರು ಒಂದು ಮಾತನ್ನು ಇಲ್ಲಿ ಹೇಳಿದರು. ಅದೇನೆಂದರೆ, ಈ ಭಾಗದ ದುಡ್ಡನ್ನು ಆ ಕಡೆ ಒಯ್ದರೆ, ಆಗ ಅಲ್ಲಿರತಕ್ಕಂತಹ ಕ್ಷಾಮದ ಪರಿಸ್ಥಿತಿ ನಿವಾರಣೆಯಾಗುತ್ತದೆ ಎಂಬ ಮಾತನ್ನು ಹೇಳಿದರು.

3-30 P.M.

ಸಾಮಾನ್ಯ ಪರಿಸ್ಥಿತಿಯಲ್ಲಿ ಈ ರೀತಿ ಮಾಡಿದ್ದನ್ನು ಹೇಳಿದ್ದರೆ ಸಮಂಜಸ ಆಗಬಹುದಾಗಿತ್ತು. ಈ ಸದನದ ಮಾನ್ಯ ಸದಸ್ಯರಾದ ಶ್ರೀ ಆರ್ಮುಗಂ ಅವರು ಆ ಕ್ಷಾಮಪೀಡಿತ ಪ್ರದೇಶಕ್ಕೆ ಸೇರಿದವರಲ್ಲ, ಅವರು ಆ ಕ್ಷಾಮ ಪೀಡಿತ ಪ್ರದೇಶಕ್ಕೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನೂ, ಅಲ್ಲಿಯ ಭೀಕರ ದೃಶ್ಯವನ್ನೂ, ಮತ್ತು ಜೀವಶ್ರವ ಹೆಣಗಳ ಒಂದು ದೃಶ್ಯವನ್ನೂ ನೋಡಿಕೊಂಡು ಬಂದು ವರದಿ ಮಾಡಿ ಈ ಸಭೆಯಲ್ಲಿ ಭಾಷಣ ಮಾಡಿ ಹೇಳಿದ ಮೇಲೂ ಕೂಡ ಸರ್ಕಾರದವರು ಮಾನವೀಯತೆಯ ದೃಷ್ಟಿಯಿಂದ ನೋಡದೆ ಹೀಗೆ ಹೇಳುತ್ತಾರೆ ಎಂದರೆ ನನಗೆ ಆಶ್ಚರ್ಯವಾಗುತ್ತದೆ.

ಇನ್ನು ಸರ್ಕಾರ ಏನು ಮಾಡಿದೆ ಎನ್ನತಕ್ಕಂಥಾ ಮಾತನ್ನು ಹೇಳಬೇಕಾದರೆ ಸರ್ಕಾರದವರು ಏನೂ ಮಾಡಿಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಕ್ಷಾಮಪರಿಸ್ಥಿತಿಗೆ ತಕ್ಕಂತೆ ಸರ್ಕಾರ ಕೆಲಸ ಮಾಡಿದೆಯೋ? ಕೆಲವು ಮಾನ್ಯ ಸದಸ್ಯರು ಮತ್ತು ಕೆಲವು ಮಂತ್ರಿಗಳು ಮಾತನಾಡುತ್ತಾ ಬೇರೆ ಸರ್ಕಾರಗಳಿಗಿಂತ ನಮ್ಮ ಹಿಂದೆ ಇದ್ದಂಥಹ ಸರ್ಕಾರಕ್ಕಿಂತ ನಾವು ಬಂದಮೇಲೆ ಇಷ್ಟು ಕೆಲಸಗಳನ್ನು ಮಾಡುತ್ತಾ ಇರಲಿಲ್ಲ ಎಂಬುದನ್ನು ಬಹಳ ಹೆಮ್ಮೆಯಿಂದ ಹೇಳಿದ್ದಾರೆ. ಅವರು ಇನ್ನೊಂದು ಮಾತನ್ನು ಹೇಳಿದ್ದಾರೆ ಅದೇನೆಂದರೆ ಇಷ್ಟು ವರ್ಷಗಳವರೆಗೂ ಮೊದಲಿದ್ದ ಸರ್ಕಾರದವರು ಮುಂದಾಲೋಚನೆ ಮಾಡಿ ಕೆಲವೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೆ ಇಂಥಾ ಒಂದು ಪರಿಸ್ಥಿತಿ ಇವೊತ್ತು ಉದ್ಭವಿಸುತ್ತಾ ಇರಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಈ ಮಾತು ಬಹುಮಟ್ಟಿಗೆ ಒಪ್ಪತಕ್ಕ ಮಾತು ಆದರೆ ಮಾನ್ಯ ಸದಸ್ಯರು ಮತ್ತು ಮಾನ್ಯ ಮಂತ್ರಿಗಳು ನಮ್ಮ ಸರ್ಕಾರ ಇಷ್ಟು ಮಾಡಿದೆ ಇಷ್ಟೊಂದು ಮಾಡುತ್ತಾ ಇರಲಿಲ್ಲ ಎನ್ನುವುದು ಒಪ್ಪತಕ್ಕಂಥಾ ಮಾತು ಅಲ್ಲ. ಇವೊತ್ತು ಆ ಹಿಂದಿನ ಸರ್ಕಾರ ಇದ್ದಿದ್ದರೆ ನಿಮಗಿಂತ ಹೆಚ್ಚು ಮುಂಜಾಗ್ರತೆ ವಹಿಸಿ ಹೆಚ್ಚು ಮಾನವೀಯತೆ ದೃಷ್ಟಿಯಿಂದ ಅವರು ಕೆಲಸ ಮಾಡುತ್ತಿದ್ದರೋ ಏನೋ ಎಂದು ನನಗೆ ಅನಿಸುತ್ತದೆ. ಹಿಂದಿನ ಸರ್ಕಾರಗಳು ಸ್ವಲ್ಪಮಟ್ಟಿಗೆ ಕೆಲಸವನ್ನು ಮಾಡಿವೆ. ಇಂದಿನ ಸರ್ಕಾರ ಬರಗಾಲ ಪರಿಸ್ಥಿತಿಗೆ ತಕ್ಕಂತೆ ಎಷ್ಟು ಕೆಲಸವನ್ನು ಮಾಡಬೇಕಾಗಿತ್ತೋ ಅದಕ್ಕಿಂತ ಹೆಚ್ಚು ಕೆಲಸ ಮಾಡಿದ್ದಾರೆ. ಆದರೆ ಈಗ ಸರ್ಕಾರ ಕ್ಷಾಮದ ದವಡೆಯಲ್ಲಿ ಹೋರಾಡತಕ್ಕಂಥಾ ಜನಗಳಿಗೆ ನಿಜವಾದ ನಿವಾರಣಾ ಪರಿಸ್ಥಿತಿಯನ್ನು ಮಾಡಿಲ್ಲ ಎನ್ನತಕ್ಕಂಥಾದ್ದನ್ನು ಅವರು ಒಪ್ಪಲೇ ಬೇಕು. ಇವೊತ್ತು ಬಿಜಾಪುರ, ಬೆಳಗಾಂ ಗುಲ್ಬರ್ಗ, ರಾಯಚೂರಿನ ಕೆಲವು ಭಾಗಗಳು ಬೀದರ್ ಈ ಪ್ರದೇಶಗಳು ಏನಿವೆ ಅಲ್ಲಿ ಭೀಕರ ಕ್ಷಾಮ ಪರಿಸ್ಥಿತಿ ಇದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಆರ್ಮುಗಂ ಅವರು ಅವರು ಕೊಟ್ಟಿರುವ ವರದಿಯಲ್ಲಿ ಪುಟ ೬೭ರಲ್ಲಿ "In living memory the people of Gulbarga and Bidar and parts of Bijapur and Belgaum districts have not seen such worst drought conditions. The Problems are multifold. Water for men and cattle, food for human beings and fodder for cattle, and survival of both, are some of the problems which require immediate attention" ಎಂದು ಹೇಳಿದ್ದಾರೆ. ಇಂದು ಬಂದಿರುವಂಥಹ ಪರಿಸ್ಥಿತಿ ಎಂದೂ ಬಾರದೆ ಇದ್ದಂಥಹ ಪರಿಸ್ಥಿತಿ, ನಮ್ಮ ಜೀವನದಲ್ಲಿ ನೋಡದೆ ಇರುವಂಥಹ ಪರಿಸ್ಥಿತಿ ಎನ್ನುವುದನ್ನು ಮಾನ್ಯ ಸರ್ಕಾರದವರು ಲಕ್ಷ್ಯದಲ್ಲಿ ಇಡಬೇಕು. ಮುಂದೆ ಪುಟ ೬೭ರಲ್ಲಿ The magnitude of the problem is so big in as much as any amount of Sugar or jaggery thrown in a ocean will not change the taste of the ocean water.

The relief measures undertaken so far are not adequate considering the problems that the People are facing in these areas'' ಎಂದು ಹೇಳಿದ್ದಾರೆ. ಈಗಿನ ಸರ್ಕಾರದವರು ಸ್ಕೇರ್ಸಿಟಿ ಬಂದಾಗ ಏನು ಮಾಡಬೇಕಾಗಿತ್ತು, ಅದಕ್ಕಿಂತ ಹೆಚ್ಚು ಮಾಡಿರಬಹುದು. ಆದರೆ ಇಂದಿನ ಕ್ಷಾಮ ಪರಿಸ್ಥಿತಿಗನುಗುಣವಾಗಿ ಎಷ್ಟು ಕೆಲಸವನ್ನು ಮಾಡಬೇಕಾಗಿತ್ತೋ ಅಷ್ಟು ಕೆಲಸವನ್ನು ಮಾಡಿಲ್ಲ ಎಂದು ಗೊತ್ತಾಗುತ್ತದೆ. ಈ ದೃಷ್ಟಿಯಿಂದ ಈ ಒಂದು ತೀವ್ರವಾದ ಪರಿಸ್ಥಿತಿಯನ್ನು ಸರ್ಕಾರದವರು ಲಕ್ಷ್ಯದಲ್ಲಿಟ್ಟುಕೊಂಡು ಮಾನ್ಯ ಸರ್ಕಾರದವರು ಇದನ್ನು ವಿಚಾರ ಮಾಡಬೇಕು ಎನ್ನತಕ್ಕಂಥಾ ಮಾತನ್ನು ನಾನು ನಿವೇದಿಸಿಕೊಳ್ಳುತ್ತೇನೆ. ಇನ್ನೊಂದು ವಿಷಯವೇನೆಂದರೆ ಸರ್ಕಾರ ಈ ಪರಿಸ್ಥಿತಿಯ ತೀವ್ರತೆಯ ಬಗ್ಗೆ ಲಕ್ಷ ಕೊಟ್ಟಿದೆಯೋ ಇಲ್ಲವೋ ಎನ್ನುವ ಅನುಮಾನ ಕೂಡ ನಮಗೆ ಬರುತ್ತದೆ. ಒಂದು ವೇಳೆ ಸರ್ಕಾರದವರಿಗೆ ಪರಿಸ್ಥಿತಿಯ ಪರಿಚಯವಿದ್ದರೂ ಕೂಡ ಅದನ್ನು ಸೀರಿಯಸ್ ಆಗಿ ವಿಚಾರ ಮಾಡುವುದಕ್ಕೆ ಹೋಗಿಲ್ಲ ಎನ್ನುವ ಅನುಮಾನ ನಮಗೆ ಬರುತ್ತದೆ. ಒಂದು ವೇಳೆ ವಿಚಾರ ಮಾಡಿದರೂ ಕೂಡ ಈಗ ನಾವು ಯಾರನ್ನಾದರೂ ಒಂದು ಕಡೆ ಟ್ರಾನ್ಸ್‌ಫರ್ ಮಾಡಿ ಎಂದು ಹೇಳಿದಾಗ ನೋಡೋಣ, ಮಾಡೋಣ ಎನ್ನತಕ್ಕಂಥಾ ಭಾವನೆಯಲ್ಲಿ ಈ ಕ್ಷಾಮ ಪರಿಸ್ಥಿತಿಯ ಕೆಲಸ ಕಾರ್ಯಗಳ ಬಗ್ಗೆ ವಿಚಾರ ಮಾಡತಕ್ಕ ಮನೋಭಾವನೆ ಕಾಣುತ್ತಿದೆ ಎನ್ನುವ ಮಾತು ದೃಢವಾಗಿದೆ. ಮತ್ತು ಮಂತ್ರಿಗಳು ಆ ಭಾಗದಲ್ಲಿ ಪ್ರವಾಸ ಮಾಡಿದಾಗ ಅವರು ಏನು ಹೇಳಿದ್ದಾರೆ ಎನ್ನತಕ್ಕಂಥಾ ಮಾತು ಕೂಡ ಅವರ ಲಕ್ಷ್ಯದಲ್ಲಿ ಇದೆಯೋ ಇಲ್ಲವೋ ಎನ್ನುವ ಅನುಮಾನ ನಮಗೆ ಇದೆ.

ಉಪಾಧ್ಯಕ್ಷರು.— ಏನೇನು ಮಾಡಬೇಕು ಎಂಬುದನ್ನು ಹೇಳಬೇಕು.

ಶ್ರೀ ವಿಶ್ವನಾಥರೆಡ್ಡಿ.—ಮಾನ್ಯ ಮಂತ್ರಿಗಳಾದಂಥಹ ಶ್ರೀಮಾನ್ ಹುಚ್ಚಮಾಸ್ತಿಗೌಡರು ನವೆಂಬರ್ ೨೪ನೇ ತಾರೀಖಿನ ದಿವಸ ನನ್ನ ಮತಕ್ಷೇತ್ರವಾದ ಬೇವಿನಹಳ್ಳಿಗೆ ಭೇಟಿ ಕೊಟ್ಟಾಗ ಅಲ್ಲಿ ಕೆಲಸ ಮಾಡತಕ್ಕ ಕೂಲಿಗಾರರು ನಮಗೆ ಒಂದು ದಿವಸಕ್ಕೆ ಒಂದು ರೂಪಾಯಿ ಕೂಲಿ ಕೂಡ ಸಿಕ್ಕುವುದಿಲ್ಲ ಅದಕ್ಕಾಗಿ ತಾವು ದಯಮಾಡಿ ನಮಗೆ ಒಂದು ದಿವಸಕ್ಕೆ ಕನಿಷ್ಟ ೨ ರೂಪಾಯಿ ಕೂಲಿಯನ್ನಾದರೂ ಕೊಡುವ ಹಾಗೆ ಮಾಡಬೇಕು ಎಂದು ಆ ಕೂಲಿಗಾರರು ಮಾನ್ಯ ಮಂತ್ರಿಗಳಲ್ಲಿ ನಿವೇದನೆ ಮಾಡಿಕೊಂಡಿದ್ದಾಗ, ಆಗ ಶ್ರೀಮಾನ್ ಹುಚ್ಚಮಾಸ್ತಿಗೌಡರು ಅದರ ಬಗ್ಗೆ ಒಂದು ಸೂಕ್ತವಾದ ನಿರ್ಣಯವನ್ನು ತೀವ್ರವಾಗಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು. ಇವೊತ್ತು ಡಿಸೆಂಬರ್ ೨೦ನೇ ತಾರೀಖು ಇಲ್ಲಿಯ ತನಕ ಆ ಬಗ್ಗೆ ಯಾವ ನಿರ್ಣಯವೂ ಆಗಿಲ್ಲ. ಇದೇ ಪ್ರಕಾರ ಎಷ್ಟೋ ಜನ ಮಂತ್ರಿಗಳು ಆ ಕಡೆ ಪ್ರವಾಸ ಬಂದಾಗ ಸಾಕಷ್ಟು ಮಾತುಗಳನ್ನು ಹೇಳಿದ್ದಾರೆ. ಶ್ರೀಮಾನ್ ಚನ್ನಬಸಪ್ಪನವರು ಬಂದಾಗ ಡಿಸೆಂಬರ್ ತಿಂಗಳನಲ್ಲಿ ನಿಮಗೆ ನೀರು ಕೊಡುತ್ತೇವೆ ಎಂದು ಹೇಳಿದರು. ಲಿಫ್ಟ್ ಇರಿಗೇಷನ್ ಮುಖಾಂತರ ನೀರನ್ನು ಒದಗಿಸುತ್ತೇವೆ ಎಂದು ಹೇಳಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಒಳ್ಳೆಯ ದಕ್ಷರು ಎನಿಸಿಕೊಂಡಿರತಕ್ಕ ಶ್ರೀಮಾನ್ ಚನ್ನಬಸಪ್ಪನವರ ಗತಿಯೇ ಇದಾದಮೇಲೆ ಬಾಕಿ ಮಂತ್ರಿಗಳು ಕೆಲಸ ಮಾಡುವಂಥಾದ್ದನ್ನು ನಾನು ಹೇಳುವುದಕ್ಕೆ ಬಯಸುವುದಿಲ್ಲ. ಆ ಅಭಾವ ಪರಿಸ್ಥಿತಿಗೆ ತುತ್ತಾಗಿರತಕ್ಕ ಜನರ ಪರಿಸ್ಥಿತಿ ಜೀವನ ಮರಣದ ಹೋರಾಟವಾಗಿದೆ. ಅದು ನಮ್ಮ ಮಂತ್ರಿಗಳಿಗೆ ಒಂದು ಆಟ ಆಗಿದೆಯೋ ಏನೋ ಎಂದು ಅನಿಸುತ್ತದೆ.

ನಮ್ಮ ಭಾಗಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಇತರೇ ಮಂತ್ರಿಗಳು ಅನೇಕ ಸಲ ಬಂದು ನಾನಾ ರೀತಿಯ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಆದರೆ ಒಂದನ್ನೂ ಪಾಲನೆ ಮಾಡಲಿಲ್ಲ, ಇದರಿಂದ ಅಲ್ಲಿಯ ಜನರಿಗೆ ಒಂದು ರೀತಿಯ ನಿರಾಶಾ ಭಾವನೆ ಬಂದಿದೆ. ಮಂತ್ರಿಗಳಿಗೆ ತಾವು ಏನು ಮಾತನಾಡುತ್ತೇವೆಂಬ ಎಚ್ಚರಿಕೆಯೇ ಮಾತನಾಡುವಾಗ ಇರುವುದಿಲ್ಲ. ಮಾತನಾಡಿ ಇನ್ನೊಂದು ಊರಿಗೆ ಹೋದ ಮೇಲೆ, ಮೊದಲಿನ ಊರಿನಲ್ಲಿ ಹೇಳಿದ್ದನ್ನು ಮರೆತುಬಿಡುತ್ತಾರೆ. ಇದರಿಂದ ಜನರಿಗೆ ಮಂತ್ರಿಗಳ ಮಾತಿನ ಬಗ್ಗೆ ಸಂಶಯ ಬಂದುಬಿಟ್ಟಿದೆ. ಈ ಬಗ್ಗೆ ಟೀಕಾತ್ಮಕವಾದರೂ ಸಹ ಒಂದು ಮಾತನ್ನು ಹೇಳಬಯಸುತ್ತೇನೆ ಏನೆಂದರೆ ಮಂತ್ರಿಗಳು ಮಾತನಾಡುವ ಕಾಲಕ್ಕೆ ಟೇಪ್‌ರೆಕಾರ್ಡ್ ಇಟ್ಟುಕೊಳ್ಳಬೇಕು. ಸಾಯಂಕಾಲದ ಸಮಯದಲ್ಲಿ ವಿಶ್ರಾಂತಿ ತೆಗೆದುಕೊಳ್ಳುವಾಗ ಟೇಪ್‌ರೆಕಾರ್ಡ್ ಹಾಕಿ ತಾವು ಏನು ಹೇಳಿದ್ದೇವೆಂದು ತಿಳಿದುಕೊಂಡು ಅದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಈಗ ಮುಖ್ಯಮಂತ್ರಿಗಳ ಭಾಷಣ ಟೇಪ್-ರೆಕಾರ್ಡ್ ಆಗುತ್ತಿದೆ.

ಶ್ರೀ ವಿಶ್ವನಾಥರೆಡ್ಡಿ.—ಅದೇ ರೀತಿ ಮಂತ್ರಿಗಳ ಭಾಷಣವೂ ಟೇಪ್-ರೆಕಾರ್ಡ್ ಆಗಬೇಕು. ಮಂತ್ರಿಗಳು ಮಾತನಾಡಿದ್ದಕ್ಕೂ ಬೆಲೆ ಇರುವಂತಿರಬೇಕು. ಮಂತ್ರಿಗಳು ಮಾತನಾಡುವ ಆವೇಶದಲ್ಲಿ ಚುನಾವಣಾ ಸಮಯದಲ್ಲಿ ಭಾಷಣ ಮಾಡುವಂತೆ ಭಾಷಣ ಮಾಡಿ ಅನೇಕ ರೀತಿಯ ಆಶ್ವಾಸನೆಗಳನ್ನು ಕೊಟ್ಟುಬಿಡುತ್ತಾರೆ. ನಂತರ ಮರೆತುಬಿಡುತ್ತಾರೆ. ನಮ್ಮ ರಾಜ್ಯದ ಆಶ್ರಿತ ಇಂಥಹವರ ಕೈಗೆ ಸಿಕ್ಕಿ ಸಾವಿರಾರು ದನಗಳು ಸತ್ತವು. ಇನ್ನು ಮುಂದೆ ಸಾವಿರಾರು ಜನರು ಸಾಯುವ ಪರಿಸ್ಥಿತಿ ಬರಬಹುದು. ಬೇಕು, ಮಾತನಾಡಿದ ನಂತರ ಅದನ್ನು ಕಾರ್ಯಗತ ಮಾಡಬೇಕು. ಈ ರೀತಿಯಿಂದ ನಡೆದುಕೊಳ್ಳ ಆಲೋಚನೆ ಮಾಡಿ ಮಾತನಾಡದಿದ್ದರಿಂದ ಇಂದು ಜನರು ಜೀವನ ಮರಣದ ಸಮಸ್ಯೆಯನ್ನು ಎದುರಿಸಬೇಕಾದ ಪರಿಸ್ಥಿತಿ ಬಂದಿದೆ. ಮಂತ್ರಿಗಳು ಜನರ ಜೀವನ ಮರಣದ ಹೋರಾಟದ ಜೊತೆ ಆಟವಾಡುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮಾನ್ಯ ಆರ್ಮುಗಂ ಅವರು ಆ ಭಾಗದಲ್ಲಿ ಮೂರು ನಾಲ್ಕು ದಿವಸಗಳ ಕಾಲ ಸುತ್ತಾಡಿ, ಅಲ್ಲಿಯ ಜನರ ಸಮಸ್ಯೆಗಳ ಬಗ್ಗೆ, ಜನರ ಕಷ್ಟನಷ್ಟಗಳ ಬಗ್ಗೆ, ಅಲ್ಲಿಯ ವಾತಾವರಣದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ವಿವರವಾಗಿ ಕೊಟ್ಟಿದ್ದಾರೆ. ಮತ್ತು ಅದಕ್ಕೆ ಕೆಲವೊಂದು ಸೂಚನೆಗಳನ್ನು ಸಹ ಕೊಟ್ಟಿದ್ದಾರೆ. ಈ ಮನೆಯಲ್ಲಿ ಸದಸ್ಯರು ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿ ಕಳಿಸಿಕೊಡಲಾಗಿತ್ತು. ಆದ ಕಾರಣ ಅವರು ಕೊಟ್ಟ ಸೂಚನೆಗಳನ್ನೆಲ್ಲಾ ಸರ್ಕಾರದವರು ಕಾರ್ಯಗತ ಮಾಡಬೇಕು. ಅಲ್ಲಿರುವ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ಬಗ್ಗೆ ನಾನು ಸಹ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಇನ್ನು ಮುಂದೆ ಇಂಥಹ ಬರಗಾಲ ಬರದಂತೆ ಮಾಡಲು ಸರ್ಕಾರದವರು ಮುಖ್ಯವಾಗಿ ಶಾಶ್ವತವಾದ ಯೋಜನೆಗಳನ್ನು ಕೈಕೊಳ್ಳಬೇಕು. ಆ ಭಾಗಗಳಲ್ಲಿ ಗ್ರೌಂಡ್‌ವಾಟರ್ ಇದ್ದರೂ ಅದನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ಇದರ ಬಗ್ಗೆ ಕೂಡ ಮಾನ್ಯ ಆರ್ಮುಗಂ ಅವರು ತಮ್ಮ ವರದಿಯ ೭೭ನೇ ಪುಟದಲ್ಲಿ ಹೇಳಿದ್ದಾರೆ. ಅದರ ವಿವರ ಈ ರೀತಿ ಇದೆ.

> "A very highly paid geologist should immediately be asked to take charge of these arid districts so that the problem of water supply at least for man and beast, is handled on a warfooting until the outbreak of the south-west monsoon in June 1973. It is necessary, that his headquarters be located in Gulbarga or Bidar or Bijapur; and he devotes his whole time until the outbreak of monsoon in the mid 1973, to complete this short-time assignment in action, and not on paper, and then settles down there itself to take over charge of the long-time programmes extending ever at least a decade".

ಆದರೆ ಇಂಥಹ ಒಂದು ಪರಿಸ್ಥಿತಿಯಲ್ಲಿ ಅಲ್ಲಿರುವ ಗ್ರೌಂಡ್‌ವಾಟರನ್ನು ಪಡೆಯುವ ಸಲುವಾಗಿ ಒಬ್ಬರು ಜಿಯಾಲಜಿಸ್ಟ್‌ನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಬಾಪುಗೌಡ ರಾಯಪ್ಪ.—ಗ್ರೌಂಡ್ ವಾಟರನ್ನು ಪಡೆಯುವ ಸಲುವಾಗಿ ಸಂಬಂಧಪಟ್ಟ ಸರ್ವೇಯರ್‌ಗಳು ಕಳೆದ ಮೂರು ವರ್ಷಗಳಿಂದ ಸರ್ವೆ ಮಾಡಿ, ಯಾವ ಯಾವ ಹಳ್ಳಿಗಳಲ್ಲಿ ನೀರು ಸಿಗುತ್ತದೆ ಎಂಬ ಬಗ್ಗೆ ಬ್ಲೂಪ್ರಿಂಟ್ ಕೂಡ ತಯಾರು ಮಾಡಿದ್ದಾರೆ. ಅದನ್ನು ಕಾರ್ಯಗತ ಮಾಡುವುದಷ್ಟೇ ಉಳಿದಿರುವ ಕೆಲಸ.

ಶ್ರೀ ವಿಶ್ವನಾಥರೆಡ್ಡಿ.—ಈ ಬಗ್ಗೆ ಒಂದು ದೀರ್ಘಕಾಲದ ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡಲು ಸರ್ಕಾರದವರು ವಿಚಾರ ಮಾಡಬೇಕು. ಈಗಾಗಲೇ ಮೂರನೇ ಒಂದು ಭಾಗದಷ್ಟು ಪಶುಸಂಪತ್ತು ನಾಶವಾಗಿರುವುದರಿಂದ, ಉಳಿದಿರುವ ಜಾನುವಾರುಗಳನ್ನಾದರೂ ಉಳಿಸುವುದಕ್ಕೆ ತೀವ್ರವಾದಂಥ ಕ್ರಮ ತೆಗೆದುಕೊಳ್ಳಬೇಕು. ಈಗ ಸರ್ಕಾರದವರು ಲಾರಿಗಳ ಮೂಲಕ ಮೇವನ್ನು ಅಲ್ಲಿಗೆ ಸಾಗಿಸುತ್ತಿದ್ದಾರೆ. ಇದು ಕೇವಲ ತಾತ್ಕಾಲಿಕವಾದಂಥ ವ್ಯವಸ್ಥೆ. ೧೫ ದಿವಸ ಅಥವಾ ಒಂದು ತಿಂಗಳವರೆಗೆ ಈ ರೀತಿ ಸಾಗಿಸಬಹುದು. ಬಹಳ ಕಾಲದವರೆಗೆ ಈ ರೀತಿ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಲಿಫ್ಟ್ ಇರಿಗೇಷನ್ ಮೂಲಕ ಪ್ರತಿ ತಾಲ್ಲೂಕನಲ್ಲಿಯೂ ಹೈಬ್ರೀಡ್ ಹುಲ್ಲನ್ನು ಬೆಳೆಸುವ ಯೋಜನೆಯನ್ನು ಹಾಕಿಕೊಂಡರೆ, ಸಾಕಷ್ಟು ಮಟ್ಟಿಗೆ ಈಗಿನ ಪರಿಸ್ಥಿತಿಯನ್ನು ಎದುರಿಸಬಹುದು. ಒಕ್ಕಲುತನ ದೃಷ್ಟಿಯಿಂದ ಪಶುಸಂಪತ್ತು ಬಹಳ ಮುಖ್ಯವಾದುದು. ಅದು ನಾಶವಾದರೆ, ನಾಳೆ ಮಳೆ ಬಂದಾಗ ರೈತರು ವ್ಯವಸಾಯ ಮಾಡಲು ಜಾನುವಾರು ಇಲ್ಲದಿದ್ದರೆ ಕಷ್ಟವಾಗು

ತ್ತದೆ. ಒಕ್ಕಲುತನ ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತದೆ. ಈ ಒಂದು ದೃಷ್ಟಿಯಿಂದ ಜಾನುವಾರುಗಳನ್ನು ಉಳಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆದು ಹೇಳುತ್ತೇನೆ. ಜನರನ್ನು ಉಳಿಸುವ ಬಗ್ಗೆ ಕೂಡ ಒಂದು ಮಾತನ್ನು ಹೇಳುತ್ತೇನೆ.

ಲಿಫ್ಟ್ ಇರಿಗೇಷನ್ ಸ್ಕೀಂಸ್‌ಗಳನ್ನು ತೆಗೆದುಕೊಂಡು ಇದಕ್ಕೆ ಬೇಕಾಗುವ ಪಂಪುಸೆಟ್ಟುಗಳನ್ನು ಕೊಡುವ ಪ್ರಯತ್ನ ಮಾಡಬೇಕೆಂದು ಸರಕಾರದಲ್ಲಿ ಹೇಳುತ್ತೇನೆ. ಬಡವರಾದವರು ಪಂಪು ಸೆಟ್ಟುಗಳನ್ನು ಕಿರಾಯಾದ ಮೇಲೆ ತೆಗೆದುಕೊಳ್ಳಲು ಹೋದರೆ ಅವರಿಗೆ ತಿಂಗಳಿಗೆ ಒಂದು ಸೆಟ್ಟಿಗಾಗಿ ಸುಮಾರು ೩೦-೩೫ ರೂಪಾಯಿಗಳಷ್ಟು ಖರ್ಚು ಬರುತ್ತದೆ. ಇದು ಬಡವರಿಗೆ ಕೊಡಲು ಕಷ್ಟವಾಗುತ್ತದೆ, ಇದನ್ನು ಸರಕಾರ ಗಮನಕ್ಕೆ ತೆಗೆದುಕೊಂಡು ಇದನ್ನು ಸೂಕ್ತವಾಗಿ ಪರಿವರ್ತನೆ ಮಾಡಿ ಒಂದೊಂದು ತಾಲ್ಲೂಕಿಗೂ ಸಾಕಷ್ಟು ಪಂಪು ಸೆಟ್ಟುಗಳು ರೈತರಿಗೆ ಸಿಗುವಂತೆ ವ್ಯವಸ್ಥೆ ಮಾಡಬೇಕು. ಮಾನ್ಯ ಕಂದಾಯ ಮಂತ್ರಿಗಳಾದ ಶ್ರೀ ಹುಚ್ಚಮಾಸ್ತಿಗೌಡರವರು ಇಲ್ಲಿ ಬರಗಾಲದ ಪರಿಸ್ಥಿತಿಯ ಬಗ್ಗೆ ಕೊಟ್ಟಿರುವ ಸ್ಟೇಟುಮೆಂಟಿನಲ್ಲಿ ಅವರೇ ಹೇಳುವಂತೆ ಕನಿಷ್ಟ ಹತ್ತು ಬಾವಿಗಳನ್ನು ಪ್ರತಿಯೊಂದು ಗ್ರಾಮದಲ್ಲೂ ತೋಡಿಸಬೇಕೆಂದು ಯೋಜನೆ ಗುರಿ ಹಾಕಿಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಅವರ ಆ ಗುರಿ ಮುಟ್ಟಿತೋ ಇಲ್ಲವೋ ನನಗೆ ತಿಳಿಯದು. ಹೋದ ಸಾಲಿನಲ್ಲಿ ಎಂದರೆ ೨೦ನೇ ದಿನಾಂಕ ಅಕ್ಟೋಬರ್ ತಿಂಗಳಲ್ಲಿ ಇದರ ಬಗ್ಗೆ ಕ್ಯಾಬಿನೆಟ್ಟು ಡಿಸಿಷನ್ ಆಗಿದೆ ಎಂದು ಕೇಳುತ್ತೇವೆ. ಈ ತೀರ್ಮಾನದಂತೆ ಇಲ್ಲಿಯವರೆಗೆ ಎಷ್ಟು ಕಡೆಗಳಲ್ಲಿ ಬಾವಿಯನ್ನು ತೋಡಿಸಿದ್ದಾರೆ ಎನ್ನುವುದನ್ನು ವಿಚಾರ ಮಾಡಿದರೆ ಒಂದು ಬಾವಿ ಕೂಡ ಒಂದು ಗ್ರಾಮದಲ್ಲಿ ಆಗಿಲ್ಲ. ಇದಕ್ಕಾಗಿ ನಾನು ಸೂಚನೆ ಕೊಡುವುದು ಇಂತಹ ಕೆಲಸಗಳನ್ನು ವಾರ್ ಫುಟ್ಟಿಂಗ್ ಮೇಲೆ ಎಷ್ಟು ವೇಗದಲ್ಲಿ ಹೋಗಿ ಜನಕ್ಕೆ ಸಹಾಯ ಮಾಡಬಹುದೋ ಆ ವೇಗದಲ್ಲಿ ಎಲ್ಲ ಕಾರ್ಯಗಳೂ ಆಗುವಂತೆ ಮಾಡುವುದು ಅವಶ್ಯ. ಪ್ರತಿಯೊಂದು ಊರಿನಲ್ಲೂ ಹತ್ತು ಬಾವಿಗಳನ್ನು ತೋಡಿಸಬೇಕಾದರೆ ಅಲ್ಲಿನ ರೈತರಿಗೆ ಸಾಲವನ್ನು ಕೊಟ್ಟು ಅದು ನೇರವಾಗಿ ರೈತರ ಕೈಗೆ ಸಿಗುವ ವ್ಯವಸ್ಥೆ ಮಾಡಬೇಕು. ಒಂದು ಊರಿನಲ್ಲಿ ಸುಮಾರು ಹತ್ತು ಬಾವಿಗಳನ್ನು ಮಾಡುವ ವ್ಯವಸ್ಥೆ ಮಾಡಿದರೆ ಇದರಿಂದ ಜನರಿಗೆ ಸ್ವಲ್ಪ ಕೂಲಿ ಸಿಗಲೂ ಅನುಕೂಲವಾಗುತ್ತದೆ ಮತ್ತು ಸ್ವಲ್ಪಮಟ್ಟಿಗೆ ಜನಕ್ಕೆ ಕುಡಿಯುವ ನೀರು ಸಿಗುತ್ತದೆ ಮತ್ತು ಆ ಬಾವಿ ಕೆಳಗೆ ಒಂದೆರಡು ಎಕರೆಗಳಿಗೆ ನೀರು ಉಪಯೋಗ ಮಾಡ ಬಹುದು. ಮತ್ತು ಇದರಿಂದ ಜನಕ್ಕೆ ಸ್ವಲ್ಪ ಮಟ್ಟಿನ ಅನುಕೂಲವಾಗುತ್ತದೆ ಎಂದು ಇಲ್ಲಿ ಸರಕಾರಕ್ಕೆ ಸೂಚಿಸುತ್ತೇನೆ. ಜನಕ್ಕೆ ಇದರಿಂದ ಸ್ವಲ್ಪ ಕೂಲಿ ಸಿಗಲು ತಾಲ್ಲೂಕು ಮಟ್ಟದಲ್ಲಿ ಅನುಕೂಲವಾಗುತ್ತದೆ. ಸುಮಾರು ಶೇಕಡಾ ನಾಲ್ಕರಷ್ಟು ಇಲ್ಲವೇ ಐದರಷ್ಟು ಜನಕ್ಕೆ ಕೂಲಿ ಸಿಗಬಹುದು. ಇವೊತ್ತು ಶೇಕಡಾ ೨೫ ರಿಂದ ೩೫ ರವರೆಗೆ ಜನಕ್ಕೆ ಕೂಲಿ ಸಿಗುತ್ತಿಲ್ಲ. ಇಂದು ಅನೇಕ ಹಳ್ಳಿಗಳಲ್ಲಿ ಜನ ಕೂಲಿ ಕೆಲಸ ಸಿಗುತ್ತಿಲ್ಲ ನಮಗೆ ಎಲ್ಲಾದರೂ ಕೆಲಸಗಳನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಸರಕಾರ ಲೇಬರು ಪೊಟೆನಷಿಯಾಲಿಟಿ ಏನಿದೆ ಅದನ್ನು ನೋಡಿಕೊಂಡು ಎಲ್ಲ ಜನಕ್ಕೂ ಕೆಲಸಗಳು ಸಿಗುವ ಹಾಗೆ ವ್ಯವಸ್ಥೆ ಮಾಡುವುದು ಅತ್ಯಗತ್ಯವಾಗಿದೆ. ಇದಕ್ಕಾಗಿ ಇಲ್ಲಿ ಕೆಲ ಸದಸ್ಯರು ಅಪ್ಪರ ಕೃಷ್ಣಾ ಪ್ರಾಜೆಕ್ಟ್ ಕೆಲಸವನ್ನು ಬೇಗನೆ ತೆಗೆದುಕೊಳ್ಳಬೇಕೆಂದು ಹೇಳಿದರು. ಇಂತಹ ದೊಡ್ಡ ಯೋಜನೆಗಳನ್ನು ಮಾಡಲು ಬೇಗನೆ ಕೆಲಸಗಳನ್ನು ಮಾಡಿದರೆ ಜನಕ್ಕೆ ಕೂಲಿ ಕೆಲಸಗಳು ಸಿಗುತ್ತವೆ. ಇದೇ ಸಂದರ್ಭದಲ್ಲಿ ಈಚೆಗೆ ನಮ್ಮ ಮಾನ್ಯ ಪಿ ಡಬ್ಲ್ಯು ಡಿ ಮಂತ್ರಿಗಳಾದ ಶ್ರೀ ಚನ್ನಬಸಪ್ಪನವರು ಬರಗಾಲದ ಪ್ರದೇಶಗಳ ಎಲ್ಲ ಶಾಸಕರುಗಳನ್ನು ಕರೆಸಿ ಒಂದು ಮೀಟಿಂಗನ್ನು ಕರೆದಿದ್ದರು. ಅದರಲ್ಲಿ ನಾವು ಹೋಗಿದ್ದೆವು. ಈ ಭಾಗದ ಎಲ್ಲ ಎಂ ಎಲ್ ಎ ಗಳೂ ಅಂದು ಬಂದಿದ್ದರು ಮತ್ತು ಈ ಮೀಟಿಂಗಿಗೆ ಕೃಷ್ಣಾಪ್ರಾಜೆಕ್ಟ್ ಚೀಫ್ ಇಂಜನೀಯರ್‌ರವರಾದ ಶ್ರೀ ಅಂಗಡಿಯವರೂ ಕೂಡ ಬಂದಿದ್ದರು, ಅವರು ಅಂದು ಕೊಟ್ಟ ವರದಿ ಪ್ರಕಾರ ಇಲ್ಲಿ ಕೆಲಸಗಳನ್ನು ಮಾಡುತ್ತಿರುವವರು ಸುಮಾರು ೧೨೦೦ ಜನಕಿಂತ ಹೆಚ್ಚಿಗೆ ಇಲ್ಲ ಮತ್ತು ಕೆಲವುಜನರು ಬೇರೆ ಊರುಗಳಿಂದ ಕೆಲಸಕ್ಕೆ ಬಂದವರು ಸುಮಾರು ಆರುನೂರು ಜನಕ್ಕಿಂತ ಹೆಚ್ಚು ಜನಕ್ಕೆ ಅಲ್ಲಿ ಕೆಲಸವಿಲ್ಲದೆ ವಾಪಸು ಬಂದರು ಎನ್ನುವುದು ನಮಗೆ ತಿಳಿದು ಬಂದಿದೆ. ಇದರಿಂದ ಮಾನ್ಯ ಚೀಫ್ ಇಂಜನೀಯರ್‌ರವರು ಹೇಳಿದಂತೆ ಇಲ್ಲಿ ನಾನೂರು ಜನಕ್ಕೆ ಮಾತ್ರ ಕೆಲಸಗಳು ಸಿಕ್ಕಿದಂತಾಯಿತು. ಇದರಿಂದ ಇಲ್ಲಿನ ಸ್ಥಿತಿ ಎಷ್ಟು ಭೀಕರವಾಗಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಸರಕಾರ ಕೆಲಸಗಳನ್ನು ಜನಕ್ಕೆ ಒದಗಿಸಿದ್ದರೆ ಇಲ್ಲಿಂದ ಬೇರೆ ಕಡೆಗಳಿಗೆ ಹೋಗುತ್ತಿರಲಿಲ್ಲ. ಕೆಲವು ತಾಲ್ಲೂಕು ಗಳಲ್ಲಿ ಸಾವಿರಾರು ಜನರು ಗುಳೆ ಕಿತ್ತುಕೊಂಡು ಹೋಗುತ್ತಿದ್ದಾರೆ. ಉದಾಹರಣೆಯಾಗಿ ಹೇಳಬೇಕಾದರೆ ಮೊನ್ನೆ ದಿವಸ ನಾನು ಊರಿಂದ ಬರುವಾಗ ನಮ್ಮ ತಾಲ್ಲೂಕಿನ ಈ ಭಾಗದ ಜನರು ಎಂದರೆ ಸುಮಾರು ೩೦-೩೫ ಜನ ಇದ್ದರು. ಇವರಲ್ಲಿ ೧೦-೨೦ ಜನರು ನಾನು ಬರುವಾಗ ಗುಂಟಕಲ್ ರೈಲ್ವೆ ಸ್ಟೇಷನ್‌ನಲ್ಲಿ ನೋಡಿದರು ಮತ್ತು ಎಲ್ಲಿಯಾದರೂ ಕೆಲಸಗಳನ್ನು ಕೊಡಿಸಿ ಎಂದು ಬೇಡಿದರು ಮತ್ತು ಅವರಲ್ಲಿದ್ದ ಪಾತ್ರೆಪದಾರ್ಥಗಳನ್ನೆಲ್ಲಾ ಮಾರಿ ಬಂದಿದ್ದರು. ಇವರು ನಮ್ಮ ಸರಕಾರದಲ್ಲಿ ಅವರ ಕಷ್ಟವನ್ನು ಹೇಳಿಕೊಳ್ಳಲಿಎಂದು ನಾನು ಅವರಿಗೆ ಇಲ್ಲಿಗೆ ಬರಲು ಹೇಳಿ ಬಂದೆ. ಈಚೆಗೆ ಅವರು ಇಲ್ಲಿಗೆ ಬಂದು ನನ್ನ ಹತ್ತಿರ ಬಂದರು. ಅವರನ್ನು ಮಾನ್ಯ ಮಂತ್ರಿಗಳ

(ಶ್ರೀ ವಿಶ್ವನಾಥರೆಡ್ಡಿ)

ಕಡೆಗೆ ಕರೆದುಕೊಂಡು ಹೋಗಿ ಅವರ ಕಷ್ಟಗಳನ್ನು ಕಂದಾಯ ಮಂತ್ರಿಗಳಿಗೂ ತಿಳಿಸಿ ಬಂದೆ. ಇವರಿಗೆ ಊಟಕ್ಕೆ ಕೂಡ ನಾನೆ ವ್ಯವಸ್ಥೆ ಮಾಡಿ ನಮ್ಮ ಜೊತೆಯಲ್ಲೆ ಒಂದೆರಡು ದಿನ ಇಟ್ಟುಕೊಂಡು ಅವರನ್ನು ಕಳುಹಿಸಿದೆ. ಇಂತಹ ಜನರನ್ನು ಹೇಗಾದರೂ ಮಾಡಿ ಉಳಿಸಬೇಕಾಗಿದೆ. ಇದಕ್ಕಾಗಿ ಕಳಕಳಿಯಿಂದ ಸರಕಾರದಲ್ಲಿ ವಿನಂತಿ ಮಾಡುವುದು ಸಾಕಷ್ಟು ಕೆಲಸಗಳು ಜನಕ್ಕೆ ಸಿಗುವಂತೆ ವ್ಯವಸ್ಥೆ ಮಾಡಬೇಕು. ಮಾನ್ಯ ಕಂದಾಯ ಮಂತ್ರಿಗಳು ಸ್ಕೇರ್ಸಿಟಿ ಏರಿಯಾದಲ್ಲಿ ಸಾಕಷ್ಟು ಕ್ಷಾಮ ಪರಿಸ್ಥಿತಿ ಬಗ್ಗೆ ಯಾವ ರೀತಿ ಕೆಲಸಗಳಾಗಿವೆ ಅದರ ಬಗ್ಗೆ ಇಲ್ಲಿ ಅನೇಕ ಅಂಶಗಳನ್ನು ಇಟ್ಟು ಹೇಳಿಕೆ ಕೊಟ್ಟಿದ್ದಾರೆ. ಇದನ್ನು ನೋಡಿದರೆ ಗುಲ್ಬರ್ಗಾ ಹಾಗೂ ಬೀದರು ಈ ಭಾಗಗಳನ್ನು ಸರಕಾರ ಸಾಕಷ್ಟು ಅಲಕ್ಷ್ಯ ಮಾಡಿದೆ ಎನ್ನುವುದು ನಮಗೆ ತಿಳಿಯುತ್ತದೆ. ಅಧಿಕಾರಿಗಳ ಅಲಕ್ಷತೆ ಇಲ್ಲಿ ಚೆನ್ನಾಗಿ ಕಂಡುಬರುತ್ತದೆ. ಇಲ್ಲಿರುವ ಹೇಳಿಕೆ ಪ್ರಕಾರ ಗುಲ್ಬರ್ಗಾ ಜಿಲ್ಲೆಗಾಗಿ ಒಂದು ಬ್ಲೂ ಪ್ರಿಂಟ್ ತಯಾರು ಮಾಡಿ ಇಲ್ಲಿನ ಕೆಲಸಗಳನ್ನು ಮಾಡಬೇಕಾದರೆ ಸುಮಾರು ೬೦-೭೦ ಲಕ್ಷ ರೂಪಾಯಿಗಳಷ್ಟು ಹಣ ಗುಲ್ಬರ್ಗಾ ಜಿಲ್ಲೆ ಒಂದಕ್ಕೆ ಬೇಕಾಗಬಹುದು. ಇದಕ್ಕಾಗಿ ರಾಯಚೂರಿನಲ್ಲಿರುವ ಅಪ್ಪರು ಕೃಷ್ಣದಂತಹ ದೊಡ್ಡ ಯೋಜನೆಗಳನ್ನು ತೆಗೆದುಕೊಂಡರೆ ಆಗ ಅಲ್ಲಿ ಸಾಕಷ್ಟು ಜನರಿಗೆ ಕೆಲಸಗಳನ್ನು ಒದಗಿಸಲು ಸಾಧ್ಯವಾಗಬಹುದು. ಶ್ರೀ ಮಾನ್ ತಿರುಮಲಗಿಂರವರೂ ಕೂಡ ಈ ಭಾಗದ ಜನರ ಬಗ್ಗೆ ಸಾಕಷ್ಟು ಅವರ ವರದಿಯಲ್ಲಿ ತಿಳಿಸಿದ್ದಾರೆ. ಇದಕ್ಕಾಗಿ ನಾನು ಸರಕಾರಕ್ಕೆ ಸಲಹೆ ಮಾಡುವುದು ಇದಕ್ಕಾಗಿ ಒಂದು ಹೈ ಪವರು ಕಮಿಟಿ ಒಂದು ಮಾಡಿ ಇದರಲ್ಲಿ ಬೀದರು, ಗುಲ್ಬರ್ಗಾ ಹಾಗೂ ರಾಯಚೂರು ಜಿಲ್ಲೆಯ ಶಾಸಕರನ್ನು ಇನ್ನಿತರರನ್ನು ಇದರಲ್ಲಿ ಹಾಕಿ ಇಲ್ಲಿನ ಸಂಕಷ್ಟಗಳ ಬಗ್ಗೆ ವಿಚಾರಣೆ ಮಾಡುವುದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳಬೇಕೆಂದು ಇಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇಂತಹ ಒಂದು ಹೈ ಲೆವಲ್ ಕಮಿಟಿ ಮಾಡಲು ಸಾಧ್ಯವಾಗದೆ ಹೋದರೆ ಈ ಸದನದ ನಾಲ್ಕೈದು ಮಂದಿಯನ್ನಾದರೂ ಸೇರಿದಂತೆ ಒಂದು ಕಮಿಟಿ ಮಾಡಿ ಇವರ ಮೂಲಕ ಜಿಲ್ಲಾದಲ್ಲಿ ಒಂದು ಕಮಿಟಿ ಹಾಗೂ ತಾಲ್ಲೂಕಾದಲ್ಲಿ ಒಂದು ಕಮಿಟಿ ಮಾಡಿ ಇದರ ಮೂಲಕ ಹೆಚ್ಚು ಕೆಲಸಗಳನ್ನು ಗಮನ ಕೊಟ್ಟು ಮಾಡಲು ತಕ್ಕ ಕ್ರಮ ತೆಗೆದುಕೊಳ್ಳುವುದು ಅಗತ್ಯ. ಇಂತಹ ಪರಿಸ್ಥಿತಿಯಲ್ಲಿ ಇದು ಅಗತ್ಯ, ಜಿಲ್ಲಾ ಲೆವಲ್‌ನಲ್ಲಿ ಒಂದು ಕಮಿಟಿ ಮಾಡಿ ಇದಕ್ಕೆ ಅನುಕೂಲವಾಗುವಂತೆ ತಾಲ್ಲೂಕಾ ಲೆವಲ್‌ನಲ್ಲಿ ಒಂದು ಲಯಸಾನ್ ಕಮಿಟಿ ಮಾಡಿದರೆ ಇದರಿಂದ ಹೆಚ್ಚು ಉಪಯೋಗವಾಗುತ್ತದೆ, ಇದರಿಂದ ಪ್ರತಿಯೊಂದು ಕಡೆಯಲ್ಲೂ ಸರಕಾರ ಏನು ಕೆಲಸಗಳನ್ನು ಮಾಡುತ್ತದೆ ಎನ್ನುವುದರ ಪರಿಚಯವಾಗಲು ಸಹಾಯವಾಗುತ್ತದೆ.

4-00 P. M.

ಪ್ರತಿದಿವಸ ಕೂಲಿಮಾಡತಕ್ಕವರು ಬಂದು ತಿರಗುವುದನ್ನು ನೋಡಿದರೆ ಕನಿಕರ ವಾಗುಂ ಕೂಲಿಮಾಡುವ ಪರಿಸ್ಥಿತಿ ಇಲ್ಲದೆ ತಿರಗುವುದರಲ್ಲಿಯೇ ಕಾಲ ವ್ಯಯವಾಗುತ್ತದೆ. ಅದನ್ನು ದೂರ ಮಾಡುವುದಕ್ಕೆ ಪ್ರತಿ ತಾಲ್ಲೂಕಿನಲ್ಲಿ ಒಂದೊಂದು ಲಯಸಾನ್ ಕಮಿಟಿ ಮಾಡಬೇಕು ಮತ್ತು ಅವರಲ್ಲಿ ಸಂಪೂರ್ಣ ಮಾಹಿತಿ ಇರಬೇಕು. ಅವರು ಮಾಹಿತಿಯನ್ನು ಒದಗಿಸಿ ಜನರಿಗೆ ಮಾರ್ಗದರ್ಶನ ಮಾಡಬೇಕು, ಅದೇ ಪ್ರಕಾರ ಜಿಲ್ಲೆಯಲ್ಲಿ ಪ್ಲಾನಿಂಗ್ ಕಮಿಟಿ ಮತ್ತು ರಾಜ್ಯ ಮಟ್ಟದಲ್ಲಿ ಹೈ ಪವರ್ ಕಮಿಷನ್ ಇವು ಮೂರು ಆದರೆ ಸಾಕಷ್ಟು ಮಟ್ಟಿಗೆ ಸೂಕ್ತ ಕ್ರಮ ಕೈಕೊಂಡಂತಾಗುತ್ತದೆ, ಸಾಕಷ್ಟು ಸಹಾಯ ಮಾಡಿದಂತಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಮಾನ್ಯ ಮಂತ್ರಿಗಳಾದ ಮಲ್ಲಿಕಾರ್ಜುನಸ್ವಾಮಿ ಅವರಲ್ಲಿ ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬನ್ನೇರುಘಟ್ಟದಲ್ಲಿ ಯಾವ ತರಹ ಪ್ರಾಜೆಕ್ಟ್ ತೆಗೆದುಕೊಂಡಿದ್ದಾರೆ ಅದೇ ರೀತಿ ಆ ಭಾಗದಲ್ಲಿ ಒಂದೆರಡು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡರೆ ತಕ್ಷಣ ಕೂಲಿಕಾರರಿಗೆ ಕೆಲಸ ಕೊಡತಕ್ಕ ಪರಿಸ್ಥಿತಿಯುಂಟಾಗಬಹುದು. ಎಲ್ಲ ಕಾರ್ಯಗಳ ಜೊತೆಗೆ ಇವರದೂ ಸ್ವಲ್ಪ ಸಹಾಯವಾದರೆ ಸಾಕಷ್ಟು ಮಟ್ಟಿಗೆ ಪರಿಹಾರ ಅಲ್ಲಿನ ಜನತೆಗೆ ಸಿಕ್ಕಬಹುದು. ಈ ಕೆಲವೊಂದು ಸೂಚನೆಗಳನ್ನು ಕೊಟ್ಟು, ಅಧ್ಯಕ್ಷರು ನನಗೆ ಸಮಯ ಕೊಟ್ಟದ್ದಕ್ಕಾಗಿ ಅವರಿಗೆ ಆಭಾರ ಮನ್ನಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ :— ನಾಳೆ ಸಭೆಯ ಕಾರ್ಯಕಲಾಪ ಮುಗಿಯುತ್ತದೆ. ಅದಕ್ಕೋಸ್ಕರ ರೆವೇನ್ಯೂ ಸಚಿವರು ಉತ್ತರ ಕೊಡುವಾಗ ನಾನು ಈಗ ಹೇಳುವ ವಿಚಾರದ ಬಗ್ಗೆ ಕೂಡ ಉತ್ತರವನ್ನು ಸಭೆಗೆ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆ ಭಾಗಗಳಲ್ಲಿ ಕಾಲರಾ ಹರಡುತ್ತಿದೆ ಎಂದು

ವರದಿಯಾಗಿದೆ. ನಿನ್ನೆಯ ಪತ್ರಿಕೆಗಳಲ್ಲಿ ೫ ಜನ ಸತ್ತಿದ್ದಾರೆಂದು ಇತ್ತು. ಈ ದಿವ ೨೫ ಜನ ಸತ್ತಿದ್ದಾರೆಂದು ವರದಿಯಾಗಿದೆ. ಆಹಾರವಿಲ್ಲದೆ ತೊಂದರೆಯಾಗಿರುವಾಗ, ಕುಡಿಯುವ ನೀರಿನ ತೊಂದರೆಯಿಂದ ಕಾಲರಾ ಸಾಂಕ್ರಾಮಿಕ ರೋಗ ಹರಡುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ಮಾಸ್ ಇನಾಕ್ಯುಲೇಷನ್ ಮುಂತಾದ ಕ್ರಮಗಳನ್ನು ತೆಗೆದುಕೊಳ್ಳುವ ದಿಸೆಯಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವುದರ ಬಗ್ಗೆ ವಿವರಗಳನ್ನು ಸಭೆಗೆ ಒದಗಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

† SRI BAPURAO ANANDRAO (Basavakalyan) :— Mr. Deputy Speaker, Sir, hon. member Sri M. Armugham has stated the facts prevailing in the drought affected areas in his report. I have studied the report. He has suggested the various steps to be taken. Of course, the Government has also taken the various steps to provide relief to the people of the drought affected areas. In Bidar district, Basavakalyan and humnabad taluks are badly affected. Some of the hon. members of this august House have toured those areas and my views are not different with the views expressed by my learned friend who visited the area, and hon. member Sri Aramugham also. To solve the problem, I plead that the Karanja project work should be taken up beacuse it is the only major work in my district, on which work more number of people could be employed. Soil conservation works and road works have almost come to an end. I request the Government to establish one more Division for Minor Irrigation Projects, with a sub-division, in this district to expedite the various schemes and and tanks in Aurad Basavakalyan and Humnabad, which I am sure will provide permanent relief to the people of the area. We can take up the work of these tanks as 'relief works' and expedite the same, so that we can provide more employment to the people who are suffering badly As Bidar district and its 5 taluks are hard hit, I request the Government to appoint a Special Deputy Commissioner for the district to be in charge of famine works and to look after the problems arising out of this drought situation.

As we all know, Sir, almost all the people of this area have respresented to Sri Arumugham that more irrigation wells should be taken up and loans should be providded for deepening of existing well as well as new wells and that these loans should be made available thr-uogh the Deputy Commissioner or the Revenue Officers or through the Committee but not through the P.L.D. Bank. In Maharashtra, I learn, they are sanctioning loans on the spot only by seeing the record of rights, title and possession. I suggast our Government a'so should sanction these loans on the same lines. I fee this is good scheme to solve the problem. Even if there are previous dues on the loan taken by the individual farmers they should be overlooked and loans should be advanced.

Sir, in this area the water table has already gone down. The only alrernative therefore is to provide more rigs not only for drinking water purposes but also for agricultural purposes and the Government should come forward to provide loans for this also or the Government

(SRI BAPURAO ANNARAO)

should sink wells with the help of rigs and recover the amount in easy instalments. The yield from crops in this area is not even 10 per cent, and in some areas there is no yield at all. Therefor, the question of exemption of land revenue should be consideredit should not be suspended, but on the other hand it should be exmpted. There is no drinking water in several villages in Basavakalyan and Humnabad taluks as also other parts of Bidar distritct. Of course, it may be due to water strata going down. But we have to deepen such wells with the help of rigs. In my constituency, Basavakalyan, there are at least half-a-dzoen villages where there is no water even in the open wells and bore-wells. In such places, arrangements should be made to provide water with tankers. I also suggest that N. R. W. schemes should be taken up without insisting on the 10 per cent contribution by the villagers at least in Hatyal and Honnalli villages. I request the Government to take up the these schemes to provide drinking water to these villages.

When we visited these two villages, the people demanded nothing but to provide water to these villages. Government has provided fodder by opening some depots. The fodder is sold at a high cost. It is difficult for the poor farmers to pruchase fodder at the prescribed rate. Tee fodder should be supplied to the farmers at the subsidised rates so that they can buy and feed the animals. Since the cattle wealth has already diminished for want of fodder, the people would face the crisis for cattle during the next coming years. In the interests of maintaining the cattle wealth, it is very necessary that the fodder should be supplied to the farmers at the subsidised rates.

The scarcity works which have been started should be carried on till the next harvest season begins *i.e.*, up to the end of September and October; otherwise there is no hope of survival.

In Bidar District, very few lift irrigation schemes have surveyed and plans and estimates have already been been prepared and kept ready. These Schemes should be implimented immediately. Action should be taken to undertake more lift irrigation scheme in our District. Arrangements should also be made to provide electricity to the lift irrigation schemes. There are some villages which are situated on the banks of the rives Manjera and Karanja. These villages should be covered with lift irrigation schemes. Wherever water is available, lift irrigation should be extended and if there is any difficulty in providing electricity, diesel engines should be provided. I understand that blue-prints for the development of Gulbarga District has been prepared, to provide permanent relief measurees. The Deputy Commissioners of Bilapur and Bidar may also be directed to prepare blue prints for the development of these districts on the lines of Gulbarga District, so that relief of a permanent nature could be provided to the people.

A part from the budgeted works, there is scope to provide work to labourers on National Highway *i.e*, N.H. No. 9 which passes through Bidar. It runs upto 50 miles. We can take up widening of this road. If this road work is taken up, then there would be scope for metal breaking, breaking of jelly etc., which would provide work for another 10,000 people.

It is learnt that the Government has ordered for taking up C.D. works, metal collection work and jelly breaking work on the 80 K.m. I request the Government to provide funds for taking up work not only on 80 K.m. of road work but also for earth-work and also to complete the incomplete road works. If works are not brought to a safe stage, whatever amount has been spent on these road works, would go a waste. All these works should be started on a war-footing and the amount for this purpose should be released.

I take this opportunity to plead for the establishment of a Division and a sub-division for the minor irrigation projects with head-quarters at Bidar because the magnitude of the work that would be taken up fully justify the sanctioning of the above offices. A saeprate Assistant Engineer should be asked to look after the tanks works. Already two tank works have been started at Basavakalyan and Humnabad. One Assistant Engineer should be exclusively in-charge of these works not only during the time of execution but also after the completion of tanks. If we do not make this arrangement, the tragedy which over took our State recently *viz*,. the breach of the Chikhole tank, should not be repeated in our District. It is necessary that the tanks constructed during the scarcity period should be well looked after even after the scarcity period This suggestion would no doubt involve some expenditure, but it is inevitable. This would be a purposeful expenditure if you want to avoid the catastrophy.

With these sugestions, I request the Government to take more steps to provide further relief to the drought affected people in our region and continue the works till the commencement of the harvest saason. With these works, I conelude my speech.

†ಶ್ರೀ ಜೆ. ಎಲ್. ಕಬಾಡಿ (ಬಲ್ಲೋಳಿ).—ಮಾನ್ಯ ಉಪ ಸಭಾಪತಿಗಳೇ, ಈವೊತ್ತಿನ ದಿವಸ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಆರುಮುಗಂರವರನ್ನು ಏಕ ಸದಸ್ಯ ಆಯೋಗದಿಂದ ಕಳುಹಿಸಲು ಈ ಮನೆ ಏನು ಒಪ್ಪಿಗೆ ಕೊಟ್ಟು ಕಳುಹಿಸಿತೋ ಅದರಂತೆ ಅವರು ನಮ್ಮ ಮೈಸೂರು ರಾಜ್ಯದ ಬರಗಾಲಕ್ಕೆ ತುತ್ತಾಗಿರತಕ್ಕಂಥ ಜಿಲ್ಲೆಗಳು ಏನು ಇವೆಯೋ ಆ ಪ್ರದೇಶಗಳಿಗೆ ಭೇಟಿ ಕೊಟ್ಟು ಬಂದಿದ್ದಾರೆ. ಅದು ಕೂಡ ಸ್ವಲ್ಪ ವೇಳೆಯಲ್ಲೇ ಅತ್ಯಂತ ಮಹತ್ವವಾದ ರಿಪೋರ್ಟನ್ನು ಇಲ್ಲಿ ಸಲ್ಲಿಸಿದ್ದಾರೆ. ಇದರ ಬಗ್ಗೆ ನಾವು ವಿಚಾರಣೆ ಮಾಡಿ ನೋಡಿದರೆ ನಿಜವಾಗಿಯೂ ಸರ್ಕಾರದವರು ಯಾವ ರೀತಿಯಿಂದಲೂ ಈ ಬರಗಾಲ ನಿವಾರಣೆಗೆ ಉಪಾಯ ಕೈಗೊಳ್ಳದೇ ಇರುವುದು ಇದರಲ್ಲಿ ವ್ಯಕ್ತವಾಗಿದೆ. ಆದರೆ ನಮ್ಮ ಜಿಲ್ಲೆ ಪರಿಸ್ಥಿತಿ ಬಗ್ಗೆ ಯಾವ ಯಾವ ತಾಲ್ಲೂಕುಗಳು ಕೆಟ್ಟ ಪರಿಣಾಮ ಹೊಂದಿವೆ, ಮಳೆ ಇಲ್ಲದೆ ಏನು ದುಃಸ್ಥಿತಿಯಲ್ಲಿವೆ ಇವೆಲ್ಲವನ್ನೂ ಸರ್ಕಾರಕ್ಕೆ ಮೇಲಿಂದ ಮೇಲೆ ನಾವು ವಿನಂತಿ ಮಾಡಿಕೊಳ್ಳುತ್ತಾ ಬಂದಿದ್ದೇವೆ. ಆದರೆ ಸರ್ಕಾರದವರು ಅಲ್ಲಿ ಕೈಗೊಂಡಿರತಕ್ಕಂಥ ಕೆಲಸ ಮತ್ತು ಅಲ್ಲಿಗೆ ಒದಗಿಸಿರತಕ್ಕಂಥ ಹಣ ನೋಡಿದರೆ ಯಾವ ರೀತಿಯಿಂದಲೂ ಆ ಪ್ರದೇಶಗಳಿಗೆ ಬರಗಾಲ ಬಂದಿದೆಯೋ ಇಲ್ಲವೋ ಎಂಬುದು ಗೊತ್ತಾಗುವುದಿಲ್ಲ. ನಾವು ಈ ಬಗೆ ಪದೇ ಪದೇ ಹೇಳುತ್ತಾ ಇದ್ದೇವೆ. ಅದಕ್ಕಾಗಿ ಮುಖ್ಯಮಂತ್ರಿಗಳು ಮತ್ತು ಕಂದಾಯ ಮಂತ್ರಿಗಳು ನಮಗೆ ಏನು ಹೇಳಿದರು ಎಂದರೆ ನಿಮ್ಮ ಜಿಲ್ಲೆಗೆ ಸ್ಪೆಷಲ್ ಆಗಿ ನಿಮ್ಮ ಜಿಲ್ಲೆಯ ಮಂತ್ರಿಗಳಾದ ಶ್ರೀಮಾನ್

(ಶ್ರೀ ಜಿ. ಎಲ್. ಕಬಾಡಿ)

ಕೆ.ಟಿ. ರಾಥೋಡ ಅವರನ್ನು ಅಲ್ಲಿಯ ಪರಿಸ್ಥಿತಿಯನ್ನು ಪರ್ಸನಲ್ ಆಗಿ ನೋಡುವುದಕ್ಕೆ ಕಳುಹಿಸುತ್ತೇವೆ. ಅವರು ಅಲ್ಲಿಯ ಪರಿಸ್ಥಿತಿಯನ್ನು ನೋಡಿದ ಮೇಲೆ ಅವರಿಂದ ರಿಪೋರ್ಟ್ ಬಂದ ಮೇಲೆ ಇಮ್ಮೀಡಿಯಟ್ ಆಗಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂದು. ಅದರಂತೆ ಅವರು ನಮ್ಮ ಜಿಲ್ಲೆಗೆ ಬಂದರು, ಆ ಬಗ್ಗೆ ತಮಗೆ ಒಂದು ವರದಿಯನ್ನೂ ಕೂಡ ಸಲ್ಲಿಸಿದರು. ಆದರೆ ಈ ವರದಿಯನ್ನು ಅವರು ಕೊಟ್ಟ ಕಾಲದಲ್ಲಿ ಅವರು ಯಾವ ರೀತಿಯಾಗಿ ಸಲ್ಲಿಸಿದರೋ ಗೊತ್ತಿಲ್ಲ. ಆ ಕಡೆಯ ಸದಸ್ಯರಿಗೂ ಗೊತ್ತಿಲ್ಲ. ಆದರೂ ಕೂಡ ಅವರು ಯಾವ ವರದಿಯನ್ನು ಕೊಟ್ಟಿದ್ದರು ಅದರ ಬಗ್ಗೆ ಏನೂ ಕೆಲಸ ನಡೆದಿಲ್ಲ.

ಇವೊತ್ತು ಜನಗಳು ಎಷ್ಟೋ ಕಡೆ ತಮ್ಮ ಹೊಲಗಳನ್ನು, ಮನೆಗಳನ್ನು ಬಿಟ್ಟು ಬೇರೆ ಪ್ರದೇಶಗಳಿಗೆ ವಲಸೆ ಹೋಗಿದ್ದಾರೆ ಎನ್ನುವ ನಿದರ್ಶನಗಳು ಇದ್ದರೂ ಸಹಿತ ಈಗಾಗಲೇ ಮಾತನಾಡಿದ ಸದಸ್ಯ ಶ್ರೀಮಾನ್ ಸಜ್ಜನ್‌ರವರು ಆ ರೀತಿ ತಮ್ಮ ಮುಂದೆ ಕಂಡುಬಂದಿಲ್ಲ ಎಂದು ಹೇಳಿದರು. ಎಸ್ಟಿಮೇಟ್ ಕಮಿಟಿ ಮೆಂಬರ್ ಆಗಿರತಕ್ಕವರು ಅವರು. ಕಮಿಟಿ ಜೊತೆಯಲ್ಲಿ ಗೋವಾಗೆ ಹೋದಾಗ ಅಲ್ಲಿದ್ದ ನಮ್ಮ ಜಿಲ್ಲೆ ಜನಗಳು ನಮ್ಮ ಬಿಜಾಪುರ ಜಿಲ್ಲೆಯವರು ಇಂಡಿ ತಾಲ್ಲೋಕಿನವರು ಲಂಬಾಣಿ ಮತ್ತು ಹರಿಜನರು ಹೊಟ್ಟೆಬಟ್ಟೆಗಾಗಿ ನಮ್ಮ ಗೋಳನ್ನು ದೂರಮಾಡುವುದಕ್ಕೆ ನಾವು ಇಲ್ಲಿಗೆ ಬಂದಿದ್ದೇವೆ ಎಂದು ಹೇಳಿ ಅವರು, ತಮ್ಮ ಊರಿನಲ್ಲಿ ಬಿಟ್ಟು ಬಂದಿರುವ ಹೆಣ್ಣು ಮಕ್ಕಳು ಮತ್ತು ಮುದುಕ ಮುದಿಕಿಯರನ್ನು ಕಾಪಾಡಿರಿ ಎಂದು ಅವರಿಗೆ ಹೇಳಿದ್ದಾರೆ. ಇದನ್ನು ಎಸ್ಟಿಮೇಟ್ ಕಮಿಟಿ ಮೆಂಬರ್ ಆದಂತಹವರು ಕೆಲವರು ನಮಗೆ ಹೇಳಿದರು. ಇಂತ ಪರಿಸ್ಥಿತಿ ತಿಳಿದುಕೊಂಡೂ ಕೂಡ ಶ್ರೀಮಾನ್ ಸಜ್ಜನ್‌ರವರು ಸರ್ಕಾರದವರು ಸಾಕಷ್ಟು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎನ್ನುವ ಭಾವನೆಯಲ್ಲಿ ಮಾತನಾಡಿದ್ದಾರೆ. ನಾನು ಹೇಳುತ್ತೇನೆ ಅದರಿಂದ ನಿಜವಾಗಿ ದುಃಖವಾಗುತ್ತದೆ. ಪರಿಸ್ಥಿತಿ ತಿಳಿದುಕೊಂಡು ಈ ರೀತಿ ಹೇಳುವುದು ಆಶ್ಚರ್ಯದ ಸಂಗತಿ. ಅವರು ವಕೀಲಿ ಮಾಡುತ್ತಾರೆ. ಭೂಮಿ ವಿಚಾರ ಗೊತ್ತಿಲ್ಲ ಎಂದು ಕಾಣುತ್ತದೆ.

ಉಪಾಧ್ಯಕ್ಷರು.— ವಕೀಲಿ ಇದ್ದರೂ ಭೂಮಿ ವಿಚಾರ ಗೊತ್ತಿರುತ್ತದೆ.

ಶ್ರೀ ಜಿ. ಎಲ್. ಕಬಾಡಿ.— ಆ ರೀತಿ ಅನುಭವ ಇದ್ದಿದ್ದರೆ ಈ ರೀತಿ ಹೇಳುತ್ತಾ ಇರಲಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ನಾನು ಕೆಲವು ಸಲಹೆಗಳನ್ನು ನಿಮಗೆ ಕೊಡುತ್ತೇನೆ. ಸಾಯಿಲ್ ಕನ್ಸರ್ವೇಷನ್ ಬಗ್ಗೆ ಸಲಹೆ ಕೊಡುವುದಾದರೆ ಇಲ್ಲಿಯವರೆಗೆ ನಮ್ಮಲ್ಲಿ ಇರತಕ್ಕಂಥ ಇಂಡಿ ತಾಲ್ಲೋಕು ೪ ಚಾರ್ಜಸ್ ಇವೆ. ಒಂದು ಸಬ್‌ಡಿವಿಜನ್‌ನಲ್ಲಿ ೪ ಚಾರ್ಜಸ್ ಉಂಟು ಅದರಿಂದ ಕೆಲಸಕ್ಕೆ ಬಹಳ ಆತಂಕವಾಗುತ್ತದೆ. ಪದೇ ಪದೇ ಸರ್ಕಾರದವರಿಗೆ ಹೇಳುತ್ತೇನೆ. ನಮ್ಮಲ್ಲಿ ಸಬ್ ಡಿವಿಜನ್ ತೆಗೆದುಕೊಂಡರೆ ಸಾಕಷ್ಟು ಕೆಲಸ ಇದೆ. ಹೆಚ್ಚು ಹೆಚ್ಚು ಸ್ಟಾಫ್ ನೇಮಿಸಿ ಎಂದು ಹೇಳುತ್ತಾ ಬಂದಿದ್ದೇನೆ. ಒಂದು ಚಾರ್ಜ್ ೫ ಮಂದಿ ಫೀಲ್ಡ್ ಅಸಿಸ್ಟೆಂಟ್ಸ್ ಇರುತ್ತಾರೆ, ಸಬ್‌ಡಿವಿಜನ್ ತೆಗೆದು ೭—೮ ಚಾರ್ಜ್‌ಸ್ ಇಟ್ಟರೆ, ಕನಿಷ್ಠ ಒಂದು ಚಾರ್ಜ ಕೆಳಗೆ ೨೦೦—೩೦೦ ಜನ ಕೆಲಸ ಮಾಡುತ್ತಾರೆ. ೩೦೦ ಕ್ಕಿಂತ ಹೆಚ್ಚಿಗೆ ಜನ ಬಂದರೆ ಮತ್ತೊಬ್ಬ ಅಸಿಸ್ಟೆಂಟ್ ಕೊಡಬೇಕಾಗುತ್ತದೆ. ಕೆಲಸ ಕೊಡುವುದಕ್ಕೆ ತೊಂದರೆಯಾಗಿದೆ, ಸರ್ವೆ ಮಾಡುವುದಕ್ಕೆ ತೊಂದರೆಯಾಗಿದೆ, ಪ್ಲಾನ್ ಇಲ್ಲದೆ ತೊಂದರೆಯಾಗಿದೆ. ಜನರಲ್ಲಿ ಹಾಹಾಕಾರ ಉಂಟಾಗಿದೆ. ಈ ಅಸಮಾಧಾನವನ್ನು ಹೋಗಲಾಡಿಸಬೇಕಾದರೆ ಬೇರೆ ಕಡೆ ಎಲ್ಲಿ ಬರಗಾಲದ ಭಾವನೆಯಿಲ್ಲ ಅಂತಹ ಸಬ್ ಡಿವಿಜನ್‌ನನ್ನು ಇಲ್ಲಿಗೆ ಸ್ವಿಚ್ ಓವರ್ ಮಾಡಿದರೆ ಈಗ ಬಂದಂತಹ ದುಃಸ್ಥಿತಿ ಹೋಗಲಾಡಿಸುವುದಕ್ಕೆ ಬಹಳ ಅನುಕೂಲವಾಗುತ್ತದೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಅಲ್ಲಿನ ಕೆಲಸ ಕಾರ್ಯಗಳನ್ನು ನೋಡಲಿಕ್ಕೆ, ಅಧಿಕಾರಿಗಳಿಗೆ ಸಾಕಷ್ಟು ತಿರುಗಾಡುವುದಕ್ಕೆ ವಾಹನ ಸೌಕರ್ಯ ಮಾಡಿಕೊಡಬೇಕು. ಒಂದೊಂದು ಡಿವಿಜನ್‌ನಲ್ಲಿ ೩ ಜೀಪು ಕೊಟ್ಟರೆ ಅನುಕೂಲವಾಗುತ್ತದೆ ಎಂದು ಕೇಳಿದ್ದೇನೆ. ತೀವ್ರವಾಗಿ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ.

ಅಲ್ಲದೆ ನಮ್ಮಲ್ಲಿ ಕಂದಾಯ ಮಂತ್ರಿಗಳು ಕ್ಷಾಮ ಪರಿಸ್ಥಿತಿ ನೋಡಲಿಕ್ಕೆ ಬಂದಾಗ ಅಲ್ಲಿ ಸಾಯಿಲ್ ಕನ್ಸರ್ವೇಷನ್ ಕೂಲಿಗಾರರು ಹೇಳಿದರು ನಮಗೆ ಕೂಲಿ ಸಾಕಾಗುವುದಿಲ್ಲ ದಯವಿಟ್ಟು ಹೆಚ್ಚಿಗೆ ಮಾಡಬೇಕು ಎಂದು. ಆಗ ಅಲ್ಲಿ ಅಧಿಕಾರಿಗಳು ಎರಡು ರೂಪಾಯಿ, ಎರಡು ರೂಪಾಯಿ ೨೦ ಪೈಸೆ ಕೊಡುತ್ತಿದ್ದೇವೆ ಎಂದು ಹೇಳಿದರು. ಅದಕ್ಕೆ ಜನರು ಗಂಡ ಹೆಂಡತಿ ಒಂದು ಹೊತ್ತು ಹೊಟ್ಟೆಗೆ ತಿನ್ನುವುದಕ್ಕೆ ಸಾಲುವುದಿಲ್ಲ ಎಂದು ಹೇಳಿದರು. ಆಗ ಓಲ್ಡ್ ಫ್ಯಾಮಿನ್ ಕೆಳಗೆ ಎಂಟು ಆಣೆ, ೧೨ ಆಣೆ ಜಾಸ್ತಿ ಮಾಡಬೇಕು ಎಂದು ಒಂದು ಸೂಚನೆ ಇದ್ದಾಗ್ಯೂ ಇಲ್ಲಿಯವರೆಗೆ ಅವರಿಗೆ ಕೂಲಿ ಹೆಚ್ಚಿಗೆ ಕೊಟ್ಟಿಲ್ಲ. ಕೊಡದೆ

ಇರುವುದಕ್ಕೆ ಕಾರಣ ಏನೋ ನನಗಂತೂ ತಿಳಿಯುವುದಿಲ್ಲ. ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕು. ಅಲ್ಲಿಂದ ಶ್ರೀಮಾನ್ ಆರ್ಮುಗಂರವರು ನಮ್ಮ ಇಂಡಿ ತಾಲ್ಲೋಕಿಗೆ ಭೇಟಿ ಕೊಟ್ಟಾಗ ಜನರು ಅವರನ್ನು ಘೇರಾವು ಮಾಡಿದರು, ಅವರಿಗೆ ಘೇರಾವು ಮಾಡಿದರೆ ಪ್ರಯೋಜನವಾಗುವುದಿಲ್ಲ ಅವರು ನಿಜವಾದ ಪರಿಸ್ಥಿತಿ ತಿಳಿದುಕೊಂಡು ಹೋಗುವುದಕ್ಕೆ ಬಂದಿದ್ದಾರೆ ಎಂದು ಹೇಳಿದೆ. ಅಲ್ಲಿಂದ ಹರಿಜನರು ಮತ್ತು ಹಿಂದುಳಿದ ವರ್ಗದವರು ಸ್ವತಃ ರಸ್ತೆಯಲ್ಲಿ ಕೂತುಬಿಟ್ಟರು. ಮತ್ತು ಅವರು ಆಶ್ವಾಸನೆ ಕೊಟ್ಟು ಹೋಗಿ ಎಂದು ಹೇಳಿದರು. ಡಿವಿಜನಲ್ ಕಮಿಷನರ್, ಡೆಪ್ಯುಟಿ ಕಮಿಷನರ್ ಎಲ್ಲರೂ ಇದ್ದರು. ಅವರಿಗೆ ಒಂದು ಮಾತನ್ನು ಹೇಳಿದರು ನೀವೇ ಏನು ಜನರಿಗೆ ಸಮಾಧಾನ ಮಾಡುತ್ತೀರಿ ಮಾಡಿ ಎಂದು, ಆಗ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಆರ್ಮುಗಂರವರು ಪರಿಸ್ಥಿತಿ ನೋಡಿಕೊಂಡು ಹೋಗಲಿಕ್ಕೆ ಬಂದಿದ್ದಾರೆ ದಯವಿಟ್ಟು ಅವರನ್ನು ಬಿಟ್ಟುಬಿಡಿ ಎಂದು ಹೇಳಿದ್ದಕ್ಕೆ ಏನಾದರೂ ಸರ್ಕಾರಕ್ಕೆ ಹೇಳಿ ಕೊಡಿಸುವ ವ್ಯವಸ್ಥೆ ಮಾಡಿದರೆ ಬಿಡುತ್ತೇವೆ ಎಂದು ಹೇಳಿದ್ದಾರೆ. ಆಗ ಶ್ರೀಮಾನ್ ಆರ್ಮುಗಂರವರು ಸರ್ಕಾರಕ್ಕೆ ನಿಮ್ಮದು ಎಲ್ಲಾ ಮಾಹಿತಿ ಇಡುತ್ತೇನೆ ಎಂದು ಹೇಳಿದರು ತಾವು ಮತ್ತು ಮಾನ್ಯಗಾರಿಕೆ ಮಂತ್ರಿಗಳು ಅಲ್ಲಿ ಎಷ್ಟೋ ಆಶ್ವಾಸನೆಗಳನ್ನು ಕೊಟ್ಟು ಬಂದಿರಿ ಆದರೆ ನಮ್ಮ ಜಿಲ್ಲೆಯ ಭಾವನೆ ಮಾತ್ರ ನೆಟ್ಟಗಾಗಲಿಲ್ಲ. ಎಷ್ಟು ಸಲ ಬಂದಿರಿ ಎಂಬುದು ವಿಷಯವಾಗಿ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಹಾರಾಷ್ಟ್ರದಲ್ಲಿ ಏನು ಕೆಲಸ ಕಾರ್ಯಗಳು ನಡೆದಿವೆ ಅದನ್ನೇ ನಮ್ಮಲ್ಲಿ ನಡೆಸಿದರೆ ಉತ್ತಮ. ಕೂಲಿಗಾರರಿಗೆ ದುಡಿಯುವ ಶಕ್ತಿ ಇಲ್ಲ. ಶಕ್ತಿ ಕಳೆದುಕೊಂಡಿದ್ದಾರೆ. ಮೈಮೇಲೆ ಇರುವ ಮಾಂಸ ಎಲುಬು ಬಿಟ್ಟರೆ ಬೇರೇನು ಇಲ್ಲ. ಜೀವಂತ ಹೆಣ ಆಗಿದ್ದಾರೆ ಎಂದು ಹೇಳಿದರೆ ಸುಳ್ಳು ಅಲ್ಲ. ಅದಕ್ಕೋಸ್ಕರ ೮ ತಾಸು ಹಾಜರಿ ಪದ್ಧತಿ ಮೇಲೆ ಕೆಲಸ ಕೊಡಬೇಕು. ಮಹಾರಾಷ್ಟ್ರದಲ್ಲಿ ೮ ತಾಸ್ ಹಾಜರಿಮೇಲೆ ಕೂಲಿ ಕೊಡುತ್ತಾರೆ. ಆ ರೀತಿ ಕೂಲಿ ಕೊಡುವ ವ್ಯವಸ್ಥೆ ಮಾಡಬೇಕು.

4-30 P. M:

ರಾಮಪುರ ಇಂಡಿ ತಾಲ್ಲೂಕಿಗೆ ಯಾವ ರೀತಿ ಅಂಟಿಕೊಂಡಿದೆ ಅನ್ನುವುದು ತಮಗೆ ಗೊತ್ತಿದೆ. ಅಲ್ಲಿ ಮಳೆಯಿಲ್ಲದೆ ಭೂಮಿ ಒಣಗಿದೆ, ಕೆಲಸ ಒದಗುವುದಿಲ್ಲ. ಕೂಲಿ ರೇಟ್ ಹೆಚ್ಚು ಮಾಡುವುದಕ್ಕೆ ಇವರ ಕಡೆಯಿಂದ ಆಗುವುದಿಲ್ಲ. ಅಲ್ಲಿಯ ಜನಗಳಿಗೆ ದುಡಿಯುವ ಶಕ್ತಿಯಿಲ್ಲ. ಹಾಜರಿ ಪದ್ಧತಿಯ ಮೇಲೆ ಎಂಟು ತಾಸು ಹಾಜರಿ ಕೊಟ್ಟರೆ ಕೂಲಿ ಸಿಕ್ಕುವ ವ್ಯವಸ್ಥೆ ಮಾಡಬೇಕು. ಇನ್ನು ದನಗಳ ಪರಿಸ್ಥಿತಿ ಹೇಳತೀರದು, ಇಂಡಿ ತಾಲ್ಲೂಕಿನ ಇಂಚಗೇರಿ ಒಂದು ಹಳ್ಳಿಯಲ್ಲಿ ಮೂರು ಸಾವಿರಕ್ಕೂ ಮೇಲ್ಪಟ್ಟು ದನಗಳು ಊರು ಬಿಟ್ಟು ಖಾನಾಪುರ ತಾಲ್ಲೂಕು ಕಡೆಗೆ ಹೋಗಿವೆ. ಧಾರವಾಡ ಜಿಲ್ಲೆ ಮತ್ತು ಬೆಳಗಾಂ ಜಿಲ್ಲೆಯ ರೈತರು ಸಾಕಷ್ಟು ಸಹಾಯ ಮಾಡಿ ಜನಗಳಿಗೆ ಹೊತ್ತು ಹೊತ್ತಿಗೆ ಊಟಕ್ಕೆ ಹಾಕುವುದು. ದನಗಳಿಗೆ ಮೇವು ಒದಗಿಸುವ ಅಂತಃಕರಣವನ್ನು ತೋರಿಸಿದ್ದಾರೆ. ಈ ನಿಜಸ್ಥಿತಿಯನ್ನು ಪೇಪರ ನಲ್ಲಿ ಓದಿರಬಹುದು. ಹೀಗೆ ಈಗವಾಗ ದನಗಳಿಗೆ ಮೇವಿನ ಸೆಂಟರ್ ಅನ್ನು ತೆಗೆಯಬೇಕು ಎಂದು ಹೇಳಿದ್ದಾರೆ. ಗುಣಾಪುರದ ಸೆಂಟರ್ ಅನ್ನು ತೆರೆದು ಅಲ್ಲಿ ತಪ್ಪು ಮಾಡಿದ್ದಾರೆ. ದನಗಳನ್ನು ಸಾಯಲಿಕ್ಕೆ ಬಿಡದೆ, ಅತ್ಯುತ್ತಮವಾದ ದನಗಳನ್ನು ಸಾಕುವ ವ್ಯವಸ್ಥೆ ಮಾಡಬೇಕು. ಇಂಡಿ ತಾಲ್ಲೂಕಿನಿಂದ ಹೋದ ದನಗಳಿಗೆ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಪುಕ್ಕಟೆ ಸಿಕ್ಕಿದಂಥ ಮೇವನ್ನು ಸರ್ಕಾರಕ್ಕೆ ಲಾಭದ ಮೇಲೆ ಹಂಚಲು ಹೊರಟಿದೆ. ೩೦—೩೫ ಪೈಸೆ ಮೇವಿನ ಮೇಲೆ ಚಾರ್ಜು ಮಾಡುತ್ತಿದ್ದಾರೆ ಇದರ ಬಗ್ಗೆ ಡೆಪ್ಯುಟಿ ಕಮಿಷನರ್ ಅವರನ್ನು ಕೇಳಿದರೆ, ಸರ್ಕಾರಿ ಆಜ್ಞೆ ಪ್ರಕಾರ ಮಾಡುತ್ತೇವೆ ಎಂದು ಹೇಳಿದರು. ಪುಕ್ಕಟೆಯಾಗಿ ಸಿಕ್ಕುವ ಮೇವನ್ನು ಪುಕ್ಕಟೆಯಾಗಿ ಕೊಡಬೇಕೆ ಹೊರತು ಚಾರ್ಜು ಮಾಡಬಾರದು ಎಂದು ವಿನಂತಿ ಮಾಡುತ್ತೇನೆ. ಅಲ್ಲದೆ ನಮ್ಮ ಕಡೆಯಲ್ಲಿ ಸವಳು ಭೂಮಿ ಜಾಸ್ತಿ ಇದೆ. ಬಿಜಾಪುರ ತಾಲ್ಲೂಕಿನಲ್ಲಿ ೬೦ರ ಫ್ಯಾಮಿನ್ ಪ್ರಕಾರ ಭೂಮಿ ಸವಳು ಆಗಬಾರದು ಎನ್ನುವ ಉದ್ದೇಶದಿಂದ ಊಳು ತೆಗೆಯುವ ಕೆಲಸವನ್ನು ತೀವ್ರ ಪ್ರಮಾಣದಲ್ಲಿ ಕೈಗೊಂಡರೆ ಹೆಚ್ಚು ಜನಕ್ಕೆ ಕೆಲಸ ಅನುವು ಮಾಡಿಕೊಟ್ಟ ಹಾಗೇ ಹಾಗಾಗುತ್ತದೆ. ಸವಳು ಭೂಮಿಯನ್ನು ಹೂಳು ತೆಗೆಯುವುದಕ್ಕೆ ಹೆಚ್ಚು ಹೆಚ್ಚು ಆದ್ಯತೆ ಕೊಡಬೇಕು. ಮಲಪ್ರಭ ಮತ್ತು ಘಟಪ್ರಭಾದಿಂದ ಬರತಕ್ಕ ಕಾಲುವೆ ಏನು ಇದೆ ಅದರ ಕೆಲಸಕಾರ್ಯಗಳನ್ನು ಶುರು ಮಾಡಿಲ್ಲ. ಇದರ ಕೆಲಸವನ್ನು ಹೆಚ್ಚಿನ ಪ್ರಮಾಣದಲ್ಲಿ ಶುರು ಮಾಡಿದರೆ ನಮ್ಮ ಜನರಿಗೆ ಹೆಚ್ಚಿನ ಕೆಲಸ ಕೊಟ್ಟ ಹಾಗಾಗುತ್ತದೆ. ವೀವರ್ಸ್ ಬಗ್ಗೆ ಮಾನ್ಯ ಸದಸ್ಯರಾದ ಭಂಗಿಯವರು ಹೇಳಿದ್ದಾರೆ. ಆದರೆ ಕಳೆದ ನಾಲ್ಕು ತಿಂಗಳಿಂದ ವೀವರ್ಸ್ ಬಗ್ಗೆ ನಾವು ಸರ್ಕಾರಕ್ಕೆ ಒತ್ತಾಯ ಮಾಡುತ್ತಾ ಬಂದಿದ್ದೇವೆ. ಅವರಿಗೆ ನೂಲು ಕೊಟ್ಟು, ಮಾಡಿದಂಥ ಮಾಲನ್ನು ಖರೀದಿ ಮಾಡಿ ಅವರಿಗೆ ಕೂಲಿ ಕೊಡಬೇಕು. ಇಲ್ಲಿಯವರೆಗೆ

(ಶ್ರೀ ಜಿ. ಎಲ್. ಕಬಾಡಿ)

ಅವರ ಬಗ್ಗೆ ಏನು ಕೆಲಸವನ್ನೂ ಮಾಡಿಲ್ಲ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರು ಅಲ್ಲಿಗೆ ಬಂದಿದ್ದಾರೆ ಅವರ ಬಗ್ಗೆ ಇವರು ಚಿಂತನೆಯನ್ನು ವ್ಯಕ್ತ ಮಾಡಿದ್ದಾರೆ. ಮಾನ್ಯ ನಾಗರಾಳ ಅವರನ್ನು ಕೇಳಿಕೊಂಡಾಗ, ಎರಡು ದಿವಸದಲ್ಲಿಯೇ ನೇಕಾರರಿಗೆ ನೂಲು ಒದಗಿಸುತ್ತೇವೆ ನೀವು ಯಾರೂ ಗಲಾಟೆ ಮಾಡಬೇಕಾಗಿಲ್ಲ ಎಂದು ಹೇಳಿದ್ದರು. ೧೫—೧೬ ದಿವಸವಾದರೂ ಇದರ ಬಗ್ಗೆ ಏನು ವ್ಯವಸ್ಥೆ ಮಾಡದೆ ಇರುವುದರಿಂದ ಅವರು ಉಪವಾಸ ವ್ರತ ಕೈಗೊಳ್ಳಬೇಕಾಯಿತು. ಆಗ ಅಲ್ಲಿಗೆ ಡೆಪ್ಯುಟಿ ಕಮಿಷನರ ಅವರು ಹೋಗಿ, ಸರ್ಕಾರದ ಮೇಲೆ ನಂಬಿಕೆ ಇಡಿ ಗಲಾಟೆ ಮಾಡಬೇಡಿ, ಇನ್ನು ನಾಲ್ಕು ದಿವಸದಲ್ಲಿ ನೂಲನ್ನು ಒದಗಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟರು. ಸರ್ಕಾರದ ಪತಿಯಿಂದ ಡೆಪ್ಯುಟಿ ಕಮಿಷನರ್ ಅವರು ಆದೇಶ ಕೊಟ್ಟು, ವಿಶ್ವಾಸ ವ್ಯಕ್ತ ಮಾಡಿದಾಗ ಇವರು ಉಪವಾಸ ಬಿಟ್ಟರು. ನಂತರ ೧೫ ದಿವಸ ನೋಡಿದರೂ ನೂಲನ್ನು ಒದಗಿಸಲಿಲ್ಲ. ಆ ಮೇಲೆ ಅವರು ಮತ್ತೆ ಉಪವಾಸ ಕೂತು, ಮುಖ್ಯಮಂತ್ರಿಗಳಿಗೆ ಮತ್ತು ನನಗೂ ವೈಯರ್ ಕಳುಹಿಸಿದರು. ಮಾನ್ಯ ದೇವೇಗೌಡರು ಅವರಿಗೂ ವೈಯರ್ ಕಳುಹಿಸಿದರು. ಯಾರಾದರೂ ಇವತ್ತಿನವರೆಗೂ ಏನು ಮಾಡಿದರು? ಉಪವಾಸವನ್ನು ಕೈಗೊಂಡಂಥ ಮಂದಿಗೆ ಈಗ ಆಗ ಜೀವ ಹೋಗುತ್ತಿದೆ. ಇಂಥ ದಾರುಣ ಪರಿಸ್ಥಿತಿಯ ರಿಪೋರ್ಟನ್ನು ಮಾಡಿದರೂ ಸಹಿತ ಯಾವ ಕಾರ್ಯವನ್ನು ತೆಗೆದುಕೊಳ್ಳದೇ ಇರುವಾಗ ನಾನು ಖುದ್ದಾಗಿ ಡಿವಿಜನಲ್ ಕಮಿಷನರ್ ಅವರಿಗೆ ಫೋನ್ ಮಾಡಿದಾಗ ಅವರು ನೂಲು ಒದಗಿಸುತ್ತೇವೆ, ಗಲಾಟೆ ಮಾಡಬೇಡಿ, ನನ್ನ ಪರವಾಗಿ ಅವರನ್ನು ಸತ್ಯಾಗ್ರಹದಿಂದ ಎಬ್ಬಿಸಿ ಎಂದು ಹೇಳಿದಾಗ ಅವರು ಇವತ್ತು ಚರಕ ಕೊಟ್ಟರೆ ಸರಿ, ಕೊಡದೆ ಹೋದರೆ ನಾವು ನೀವು ಕೂಡಿ ಉಪವಾಸ ಮಾಡಬೇಕು ಎಂದರು. ಈ ಒಂದು ಖಾಜಿ ವ್ಯವಸ್ಥೆ ಮಾಡಿ ಉಪವಾಸ ಮಾಡುವುದನ್ನು ಬಿಡಿಸಬೇಕಾಯಿತು; ಆದರೆ ಸರ್ಕಾರದಿಂದ ಏನೂ ಸಿಕ್ಕಲಿಲ್ಲ. ಬಾಗಲಕೋಟೆ ಸ್ಪಿನ್ನಿಂಗ್ ಮಿಲ್ ಚೇರ್ಮನ್‌ರು ಆದ ಅಡಕೆ, ಎಂ.ಎಲ್.ಸಿ ಯವರು ಅಲ್ಲಿಯ ನೇಕಾರರಿಗೆ ರಾತ್ರಿಯೇ ನೂಲು ಒದಗಿಸಿ ಕೊಟ್ಟಿದ್ದರಿಂದ ಅವರು ಉಪವಾಸ ಮುಕ್ತಾಯ ಮಾಡಬೇಕಾಯಿತು. ಸರ್ಕಾರದ ವ್ಯವಸ್ಥೆ ಏನೂ ಆಗದೆ ಇದ್ದು, ಕಳವಳ ಪರಿಸ್ಥಿತಿಯನ್ನು ಚಿಂತಾಜನಕ ಪರಿಸ್ಥಿತಿಯನ್ನು ನಾವು ಹೇಳಿದರೂ ಅವರಿಗೆ ಬೋರ್ಗಲ್ಲ ಮೇಲೆ ಮಳೆ ಸುರಿದಂತಾಗಿದೆ. ಯಾವ ರೀತಿಯಿಂದಲೂ ಸರ್ಕಾರದಿಂದ ಕಾರ್ಯಗಳು ಆಗುತ್ತಾ ಇಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಈ ರೀತಿಯಾದರೆ ಪರಿಸ್ಥಿತಿ ಪೂರ್ತಿ ಹದಗೆಡುವ ಹಾಗೆ ಆಗುತ್ತದೆಯೇ ಹೊರತು ಹತೋಟಿಗೆ ತಂದಂತೆ ಆಗುವುದಿಲ್ಲ. ಕಳೆದ ೪—೫ ತಿಂಗಳಿಂದ ಈ ಪರಿಸ್ಥಿತಿ ಬಗ್ಗೆ ನಾವು ಮುಖ್ಯಮಂತ್ರಿಗಳಾಗಲೀ, ಮಾನ್ಯ ಚನ್ನಬಸಪ್ಪನವರಾಗಲೀ, ಕಂದಾಯ ಸಚಿವರಾಗಲೀ ಏನು ಹೇಳಿದರೂ ಸಹಿತ ಯಾವ ಮಟ್ಟಕ್ಕೆ ಕಾರ್ಯ ಆಗಿದೆ ಎಂದು ವಿಚಾರ ಮಾಡಿದರೆ ಒಂದು ಆಣೆ ಕೆಲಸವೂ ಆಗಿಲ್ಲ. ಈಗ ನೂರಕ್ಕೆ ೫ ರಷ್ಟು ಮಾತ್ರ ಕೆಲಸ ಆಗಿದೆ. ೧೦೦ಕ್ಕೆ ೩೫—೪೫ರಷ್ಟು ಕೆಲಸ ಆಗಿದೆ ಎಂದು ಹೇಳುವಷ್ಟು ಶಕ್ತಿ ನಮಗೆ ಇಲ್ಲ. ತಾವು ಇಂಡಿಗೆ ಬಂದಾಗ ಹೇಳಿದಿರಿ, ಭೀಮಾ ನದಿಗೆ ಎಲೆಕ್ಟ್ರಿಕಲ್ ಲೈನ್ ಎಳೆದು ಎರಡು ಮೂರು ದಿವಸದಲ್ಲಿ ಪಂಪು ಸೆಟ್ಟು ಕೊಡಿಸಿ, ಮೇವಿನ ವ್ಯವಸ್ಥೆಗೆ ಅವಕಾಶ ಮಾಡಿಕೊಡುತ್ತೇವೆ ಎಂದು.

(Madam Speakar in the Chair)

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡು ಮೂರು ದಿವಸದಲ್ಲಿ ಭೀಮಾ ನದಿಗೆ ಲೈನ್ ಎಳೆದು ಪಂಪು ಸೆಟ್ಟು ಹಾಕಿ ಹುಲ್ಲು ಬೆಳೆಸಿಕೊಡುತ್ತೇವೆ ಎಂದು ತಲೆ ಬ್ಯಾಲೆನ್ಸ್ ಇರುವವರು ಹೇಳುತ್ತಾರೆಯೇ?

ಶ್ರೀ ಬಾಪೂಗೌಡ ರಾಯಪ್ಪ.—ಮಾನ್ಯ ಮಂತ್ರಿಗಳು ಹೇಳಿದ ಧಾಟಿಯಲ್ಲಿ ಅವರು ಕೆಲಸ ಮಾಡಿದ್ದರೆ ಹುಲ್ಲು ಬೆಳೆಯುತ್ತಿತ್ತು.

ಅಧ್ಯಕ್ಷರು.—ನೀರು ಪೂರೈಸಿದರೂ, ಅಲ್ಲಿ ಹುಲ್ಲು ಬೆಳೆಸುವುದು ಕಷ್ಟ. ಅದಕ್ಕೆ ಮೂರು ದಿವಸ ಸ್ಟಾರ್ಟಿಂಗ್‌ಗೆ ಬೇಕಾಗುತ್ತದೆ.

ಶ್ರೀ ಜಿ. ಎಲ್. ಕಬಾಡಿ.—ಶ್ರೀ ಚನ್ನಬಸಪ್ಪನವರು ೫ನೇ ಸೆಪ್ಟೆಂಬರ್ ೧೯೭೫ರಲ್ಲಿ ಹೇಳಿದಂತೆ ಒಂದು ಲಕ್ಷ ರೂಪಾಯಿ ಅಲಾಟ್ ಮಾಡಿರುವರೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಗ್ಜಿಕ್ಯುಟಿವ್ ಎಂಜನಿಯರಿಗೆ ಒಂದು ಲಕ್ಷ ರೂಪಾಯಿಗಳವರೆಗೆ ಅಧಿಕಾರ ಕೊಟ್ಟಿದ್ದೇವೆ ಎಂದರೆ ಅರ್ಥವೇನು? ಅವರಿಗೆ ಅದಕ್ಕೆ ಪರವಾನಗೆ ಕೊಟ್ಟಿದೆ, ಅಷ್ಟು ಕೆಲಸ ಮಾಡಿಸಬಹುದು, ಒಂದು ಲಕ್ಷ ರೂಪಾಯಿ ಕೈಗೆ ಕೊಟ್ಟಿದ್ದೇವೆಂದಲ್ಲ.

ಶ್ರೀ ಜೆ. ಎಲ್. ಕಬಾಡಿ .—ಜನರು ನೀವು ಹೇಳಿರುವುದನ್ನು ಅರ್ಥಮಾಡಿಕೊಂಡಿದ್ದಾರೆ. ತಾವೇನೂ ಕೆಲಸ ಮಾಡಿಲ್ಲ ಎಂಬುದು ಜನರಿಗೆ ಗೊತ್ತಿದೆ.

ಶ್ರೀ ಎಚ್.ಎಂ.ಚನ್ನಬಸಪ್ಪ .—ನಿಮ್ಮ ಜಿಲ್ಲೆಯಲ್ಲಿ ೧,೫೦೦ ಕಿಲೋಮೀಟರು ರಸ್ತೆ ಧರ್ಮಕ್ಕೆ ಆಯಿತೇ? ಬಿಜಾಪುರ ಜಿಲ್ಲೆಯಲ್ಲಿ ೨ ಕೋಟಿ ೪ ಲಕ್ಷ ರೂಪಾಯಿಗಳು ಬರೀ ರಸ್ತೆಗೆ ಖರ್ಚುಮಾಡಿದೆ. ಬಹುಶಃ ಚರಿತ್ರೆಯಲ್ಲೇ ಇಷ್ಟು ಕೆಲಸ ನಡೆದಿರುವುದು ಇಷ್ಟು ವೇಗದಲ್ಲಿ ಆಗಿರುವುದು ಇರಲಾರದು. ೩,೯೩೬ ಕಿಲೋಮೀಟರ್ ರಸ್ತೆ ಮಾಡಿದೆ. ವಾಸ್ತವಾಂಶ ಒಪ್ಪಿಕೊಳ್ಳಿ. ಇನ್ನೂ ಹೆಚ್ಚು ಆಗಬೇಕು ಎಂದು ಹೇಳಿದರೆ ಅಡ್ಡಿಯಿಲ್ಲ, ಇನ್ನೂ ಮಾಡಬೇಕಾದ ಅಗತ್ಯವಿದೆ ಎಂದು ಹೇಳಿ, ಒಪ್ಪುತ್ತೇನೆ.

ಶ್ರೀ ಜೆ. ಎಲ್. ಕಬಾಡಿ .—ವೀವರ್ಸ್ ಸಲುವಾಗಿ ಮಾಡಿರುವ ಯಾವ ಯೋಜನೆಯೂ ಕಾರ್ಯಗತವಾಗಿಲ್ಲ. ಅಷ್ಟೇ ಅಲ್ಲ, ಬಡ ನೇಕಾರರು ಬಹಳ ಕಷ್ಟದಲ್ಲಿದ್ದಾರೆ, ನಮ್ಮಲ್ಲಿ ನಾಲ್ಕೈದು ಹಳ್ಳಿಗಳಲ್ಲಿ ಅವರಿದ್ದಾರೆ, ಅವರ ಬಗ್ಗೆ ಯಾವ ರೀತಿಯ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇದು ವಿಷಾದಕರ. ಮುಖ್ಯಮಂತ್ರಿಗಳಿಗೆ ಅಕ್ಟೋಬರ್ ೨೧ರಲ್ಲಿ ಒಂದು ಕಾಗದ ಬರೆದೆ. ಇಂಡಿ, ಸಿಂದಗಿ, ಮುದ್ದೇಬಿಹಾಳ ಮುಂತಾದ ಕಡೆಗಳಲ್ಲಿ ದನಗಳನ್ನು ಕಾಪಾಡಬೇಕಾಗಿದೆ, ಹುಲ್ಲನ್ನು ಅಲ್ಲಿಗೆ ಹಂಚಬೇಕು ಎಂದು ಬರೆದೆ. ಆದರೆ ಮೇವಿನ ಸಲುವಾಗಿ ಆಗಲಿ ದನಗಳ ರಕ್ಷಣೆ ಸಲುವಾಗಿ ಆಗಲಿ ಇಲ್ಲಿಯವರೆಗೆ ಯಾವ ರೀತಿಯ ಯೋಜನೆಯನ್ನು ಸಹ ಕೈಗೊಂಡಿಲ್ಲ. ಕೇವಲ ಹುಲ್ಲನ್ನು ತೆಗೆದುಕೊಂಡು ಹೋಗಲು ಅನುಮತಿ ಕೊಟ್ಟಿದ್ದಾರೆ, ಜನರು ತೆಗೆದುಕೊಂಡು ಹೋದರೆ, ಪೋಲೀಸರು ಹಿಡಿದು ಗಲಾಟೆ ಮಾಡುವರು. ಶ್ರೀ ರಾಥೋಡರವರಿಗೆ ಇದನ್ನು ಹೇಳಿದ್ದೇನೆ. ಇಂಥ ಭೀಕರ ಪರಿಸ್ಥಿತಿಯಲ್ಲಿ ಅಧಿಕಾರಿಗಳು ಹೀಗೆ ವರ್ತಿಸಿದ್ದಾರೆ.

ಇನ್ನು ಎರಡು ಸಲಹೆ ಕೊಡುತ್ತೇನೆ. ಈ ದಿವಸ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ರೈತರಿಗೆ ಸಿಕ್ಕುವ ಸಾಲ ಬೇಗ ಸಿಕ್ಕುವುದಿಲ್ಲ. ಇದರಿಂದ ರೈತರಿಗೆ ಕಷ್ಟವಾಗುವುದು. ತಕಾವಿ ಸಾಲ ಭೂ ಸುಧಾರಣೆಗೆ ಮತ್ತು ಭಾವಿಗೆ ಕೊಡುವುದನ್ನು ಇಂದು ಭೂ ಸುಧಾರಣೆಗೆ ಕೊಡುವುದಿಲ್ಲ, ಜಮೀನಿನ ಮೇಲೆ ಕೊಡುವುದಿಲ್ಲ ಎಂದು ಹೇಳುತ್ತಾರೆ ನಾನು ಡೆವೆಲಪ್‌ಮೆಂಟ್ ಬ್ಯಾಂಕಿಗೆ ಹೋಗಿ ಕೇಳಿದಾಗ ಆ ರೀತಿ ಯೋಜನೆ ಇಲ್ಲ, ಮೈನರ್ ಇರಿಗೇಷನ್ ಸ್ಕೀಂ ಇದೆ ಎಂದು ಹೇಳಿದರು. ಇದು ಸರಿಯಲ್ಲ. ಜಮೀನು ಅಭಿವೃದ್ಧಿಗೆ ಒಂದು ಯೋಜನೆ ಮಾಡಿ ಸಾಲ ತಕಾವಿ ರೂಪದಲ್ಲಿ ಕೊಡಬೇಕು. ಇಷ್ಟು ಹೇಳಿ ಅಧ್ಯಕ್ಷರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎ. ವಿ. ಪಾಟೀಲ್ (ರೋಣ).—ಸನ್ಮಾನ್ಯ ಅಧ್ಯಕ್ಷಣಿಯವರೇ, ಈ ದಿವಸ ಶ್ರೀಮಾನ್ ಅಮರ್ಗಂರವರ ವರದಿಯ ಬಗ್ಗೆ ಎರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಶ್ರೀಮಾನ್ ಅಮರ್ಗಂರವರು ಉತ್ತರ ಕರ್ನಾಟಕ ಭಾಗದ ಬರಗಾಲ ಪರಿಸ್ಥಿತಿ ಅಭ್ಯಾಸಮಾಡಿ ಒಂದು ವರದಿ ಕೊಟ್ಟಿದ್ದಾರೆ. ಅದನ್ನು ಸಭೆಯ ಮುಂದಿಟ್ಟಿದ್ದಾರೆ. ಸಾಧಾರಣವಾಗಿ ಅವರು ಬಿದರೆ, ಗುಲ್ಬರ್ಗ, ಬಿಜಾಪುರ, ಬೆಳಗಾಂ ಇಷ್ಟೆಲ್ಲಾ ಜಿಲ್ಲೆಗಳನ್ನು ನೋಡಿ ಬಂದು ವರದಿ ಕೊಟ್ಟಿದ್ದಾರೆ. ಆದರೆ ಮಾನ್ಯ ಸದಸ್ಯರು ಗುಲ್ಬರ್ಗ ಜಿಲ್ಲೆಯಲ್ಲಿ ಪ್ರವಾಸ ಮಾಡಿದರೂ ಅಲ್ಲಿ ಭೀಕರ ಪರಿಸ್ಥಿತಿ ಯಾವ ತಾಲ್ಲೂಕಿನಲ್ಲಿದೆ ಎಂಬುದರ ಬಗ್ಗೆ ವರದಿಯಲ್ಲಿ ಏನೂ ಹೇಳಿಲ್ಲ. ಉದಾಹರಣೆಗೆ ಅವರು ಆಲಂದ ತಾಲ್ಲೂಕಿಗೆ ಅಭ್ಯಾಸ ಮಾಡಲಿಕ್ಕೆ ರಾತ್ರಿ ೯ ಗಂಟೆಗೆ ಹೋದರು, ಡಾಕ್ ಬಂಗಲೆಯಲ್ಲಿ ಕುಳಿತು ಕಾರ್ಯಕರ್ತರ ಜೊತೆ ವಿಚಾರವಿನಿಮಯ ಮಾಡಿ ಒಂಬತ್ತೂವರೆಗೆ ಬಂಗಲೆ ಬಿಟ್ಟು ಗುಲ್ಬರ್ಗಾಕ್ಕೆ ಹೋದರು. ಅಷ್ಟು ಸಮಯದಲ್ಲಿ ಹೇಗೆ ಅಲ್ಲಿನ ವಿಚಾರಗಳನ್ನು ಅಭ್ಯಾಸ ಮಾಡಿದರೋ ತಿಳಿಯುವುದಿಲ್ಲ. ದುರ್ದೈವದಿಂದ ಅಲ್ಲಿ ಕಾರ್ಯಕರ್ತರೇನು ಸೂಚನೆ ಮಾಡಿದರೋ ಅದರ ಬಗ್ಗೆ ವರದಿಯಲ್ಲಿ ಒಂದು ಶಬ್ದವೂ ಇಲ್ಲ. ಇದರ ಸಲುವಾಗಿ ನಾನು ನಮ್ಮ ತಾಲ್ಲೂಕಿನ ಬಗ್ಗೆ ಏನು ಕಾರ್ಯಕ್ರಮ ಕೈಕೊಳ್ಳಬೇಕು ಎಂಬ ವಿಚಾರದಲ್ಲಿ ಎರಡು ಮಾತನ್ನು ಹೇಳುತ್ತೇನೆ.

ಯಾವ ವ್ಯಾಳೆಗೆ ಅಲ್ಲಿ ಬರಗಾಲ ಪರಿಸ್ಥಿತಿ ಉದ್ಭವಿಸಿತೋ ಆ ವ್ಯಾಳ್ಯಾಕ್ಕೆ ಅಲ್ಲಿನ ಎಲ್ಲಾ ಸಮಾಜ ಕಾರ್ಯಕರ್ತರೂ ಮತ್ತು ಎಂ ಎಲ್.ಎ.ಗಳನ್ನೂ ಕರೆದು ಅಲ್ಲಿ ಕೂಡಲೆ ಏನೇನಾಗಬೇಕು ಎಂಬುದರ ಬಗ್ಗೆ ಒಂದು ಪಟ್ಟಿಯನ್ನು ತಯಾರು ಮಾಡಿ ಅದನ್ನು ನಮ್ಮ ಮುಖ್ಯ ಮಂತ್ರಿಗಳ ಕಡೆಗೆ ಕೊಟ್ಟೆವು ಆ ಕೂಡಲೇ ಅವರು ಅದರ ಕಡೆಗೆ ಹೆಚ್ಚಿನ ಲಕ್ಷ್ಯಕೊಟ್ಟು ಅಲ್ಲಿ ಸುಮಾರು ಜನರಿಗೆ ಕಾರ್ಯವನ್ನೊದಗಿಸುವ ಕೆಲಸವನ್ನು ಮಾಡಿದರು ಆದರೆ ಅಲ್ಲಿ ಪರಿಸ್ಥಿತಿ ಹೇಗೆ ದಿನ ದಿನಕ್ಕೂ ಭೀಕರವಾಗುವುದಕ್ಕೆ ಹತ್ತಿತ್ತೋ ಆಗ ಸರ್ಕಾರದವರು ಅದರ ಕಡೆ ಲಕ್ಷ್ಯ ಕೊಡುವುದನ್ನು ಕಡಿಮೆ ಮಾಡಿದರು. ಆ ಕಾಲಕ್ಕೆ ಸರಿಯಾಗಿ ನಮ್ಮ ಪಕ್ಕದ ರಾಷ್ಟ್ರವಾದ ಮಹಾರಾಷ್ಟ್ರದಲ್ಲಿ ಕೂಡ ಇಂಥದೇ ಪರಿಸ್ಥಿತಿ ಉಂಟಾಗಿದ್ದುದರಿಂದ ಅಲ್ಲಿನ ಸರ್ಕಾರದವರು

(ಶ್ರೀ ಎ. ವಿ. ಪಾಟೀಲ್)

ಆಗಿನ ಪ್ರತಿಯೊಂದು ತಾಲ್ಲೂಕಿನದಲ್ಲೂ ೫೦ ಸಾವಿರ ಜನರಿಗೆ ಕೆಲಸವನ್ನು ಒದಗಿಸುವುದಕ್ಕೆ ಹತ್ತಿದ್ದರು. ಆದರೆ ನಾವು ಇಲ್ಲಿ ನಮ್ಮ ತಾಲ್ಲೂಕುಗಳಲ್ಲಿ ೧೦ ಸಾವಿರ ಜನರಿಗೆ ಕೆಲಸ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೆವು. ಅಂದರೆ ಮೂರನೇ ಒಂದು ಭಾಗವಾಯಿತು. ಅಂದರೆ ನಮ್ಮಲ್ಲಿರತಕ್ಕ ನೂರು ಜನರಲ್ಲಿ ೩೦ ಜನರಿಗೆ ಕೆಲಸವನ್ನು ಒದಗಿಸುವುದಕ್ಕೆ ಮಾತ್ರ ಇಲ್ಲಿ ಸಾಧ್ಯವಾಗಿತ್ತು. ಇನ್ನುಳಿದ ಜನರಿಗೆ ಇಲ್ಲಿ ಉದ್ಯೋಗ ದೊರೆಯುವುದಕ್ಕೆ ದುರ್ಲಭವಾಯಿತು. ಆ ಕಾರಣದಿಂದ ನಮ್ಮಲ್ಲಿಯ ಜನರು ಆ ಬೊಂಬಾಯಿ, ಮಹಾರಾಷ್ಟ್ರ ಮತ್ತು ಮೈಸೂರು ಇತ್ಯಾದಿ ಸ್ಥಳಗಳಿಗೆ ಹೊರಟು ಹೋಗುವುದಕ್ಕೆ ಪ್ರಾರಂಭ ಮಾಡಿದ್ದು ನಿಜಕ್ಕೂ ನಮ್ಮ ಒಂದು ದುರ್ದೈವದ ಸಂಗತಿ. ಆದರೆ ಆ ಕಾಲಕ್ಕೆ ನಮ್ಮ ಭಾಗದ ಜನರಿಗೆ ಸಾಕಷ್ಟು ಜನರಿಗೆ ಸಾಕಷ್ಟು ಕೆಲಸಗಳನ್ನು ಕೊಡಲಿಕ್ಕಾಗಲಿಲ್ಲ. ಅದರಿಂದ ಅಲ್ಲಿಯ ಪರಿಸ್ಥಿತಿ ಬಹಳ ಕೆಟ್ಟಿತು. ಆದರೆ ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಎಲ್ಲಾ ಕಡೆಗಳಲ್ಲೂ ಕೆಲಸವನ್ನು ಬಂದ್ ಮಾಡಿದರು. ಅಂದರೆ ನಮ್ಮ ಜನರು ಏನು ಅಲ್ಲಿಗೆ ಕೆಲಸಗಳಿಗೆ ಹೋಗಿದ್ದರು ಅವರಿಗೆ ಕೆಲಸ ಬಂದ್ ಮಾಡಿ ಅವರನ್ನು ವಾಪಸ್ ಇಲ್ಲಿಗೆ ಕಳುಹಿಸಿದ್ದಾರೆ ಆದುದರಿಂದ ಈಗ ಅಲ್ಲಿನ ಪರಿಸ್ಥಿತಿಯನ್ನು ಎದುರಿಸುವುದು ಇನ್ನೂ ಕಷ್ಟವಾಗಿದೆ. ಆದಾಗ್ಯೂ ಅಲ್ಲಿನ ಪರಿಸ್ಥಿತಿಯನ್ನು ಎದುರಿಸಲು ಒಂದು ರಿಲೀಫ್ ಸಮಿತಿ ಎಂದು ಒಂದು ಸಮಿತಿಯನ್ನು ಮಾಡಿದೆ. ಆ ಸಮಿತಿ ಅಲ್ಲಿ ಏನೇನು ಕೆಲಸಗಳನ್ನು ಕೈಗೊಳ್ಳಬೇಕು ಎಂಬುದರ ಬಗ್ಗೆ ಒಂದು ಬ್ಲೂ ಪ್ರಿಂಟನ್ನು ತಯಾರಿಸಿದೆ. ಇದೇ ಸಂದರ್ಭದಲ್ಲಿ ನಮ್ಮ ಸರ್ಕಾರದವರು ಒಂದು ಹೈಪವರ್ ಕಮಿಟಿಯನ್ನು ನೇಮಕ ಮಾಡಿ ಅದರ ಹೆಡ್‌ಕ್ವಾರ್ಟರನ್ನು ಗುಲ್ಬರ್ಗಾದಲ್ಲಿಟ್ಟು ಅದನ್ನು ಕೂಡಲೆ ಕಾರ್ಯಾಚರಣೆಯಲ್ಲಿ ತರುವಂತೆ ಸರ್ಕಾರಕ್ಕೆ ತಿಳಿಸಿದ್ದೇವೆ. ಆ ಹೈಪವರ್ ಕಮಿಟಿಯಲ್ಲಿ ಪಿ ಡಬ್ಲ್ಯು ಡಿ ಸೆಕ್ರೆಟರಿಗಳೂ, ಫೈನಾನ್ಸ್ ಸೆಕ್ರೆಟರಿಗಳೂ ರಾಜ್ಯದ ಚೀಫ್ ಇಂಜಿನಿಯರು ಮತ್ತು ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟರು ಇತ್ಯಾದಿಯವರೆಲ್ಲಾ ಅದರಲ್ಲಿರುವಂತೆ ಪ್ರಾರ್ಥಿಸಲಾಗಿದೆ. ಈ ಹೈಪವರ್ ಸಮಿತಿಗೆ ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಂದ ಒಂದು ಆದೇಶವನ್ನು ಕೊಟ್ಟು, ಅಲ್ಲಿ ಕೂಡಲೆ ೩೦ ಸಾವಿರ ಜನರಿಗೆ ಕೆಲಸಗಳನ್ನು ಒದಗಿಸಿಕೊಡಬೇಕು ಎಂದು ತಾಕೀತ್ ಮಾಡಿ ಕಳುಹಿಸಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಈಗ ಒಂದು ಏನಾಗಿದೆ ಎಂದರೆ ಅಲ್ಲಿ ರಸ್ತೆ ಕೆಲಸಗಳೆಲ್ಲಾ ಮುಗಿ ದಿವೆ. ಇನ್ನು ಸಾಯಿಲ್ ಕನ್‌ಸರ್ವೇಷನ್ ಕೆಲಸ ಸ್ವಲ್ಪ ಇದೆ. ಅದೂ ಕೂಡ ಇನ್ನು ಒಂದು ತಿಂಗಳಲ್ಲಿ ಮುಗಿಯ ಬಹುದು. ಅಲ್ಲಿಂದ ಅವರಿಗೆ ಅಲ್ಲಿ ಏನೇನೂ ಕೆಲಸಗಳಿಲ್ಲದಂತಾಗುತ್ತದೆ. ಅದಕ್ಕಾಗಿ ನಾನು ಸಲಹೆ ಮಾಡುವುದೇನೆಂದರೆ ಅಲ್ಲಿ ತಕ್ಷಣಕ್ಕೆ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ಇರಿಗೇಷನ್ ಕೆಲಸಗಳನ್ನು ಕೂಡಲೆ ಕೈಗೊಳ್ಳುವಂತೆ ಆ ಹೈಪವರ್ ಕಮಿಟಿಗೆ ಆದೇಶ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಬಂಡಿಂಗ್ ಕೆಲಸ ಕೂಡ ಈಗ ಸರಿಯಾಗಿ ಆಗುವುದಿಲ್ಲ ಅಲ್ಲಿ ಸರಿಯಾದ ಮಣ್ಣೇ ಇರುವುದಿಲ್ಲ. ಇತತಕ್ಕ ಮಣ್ಣೆಲ್ಲಾ ಬರಿ ಹಂಟೆ ಆಗಿರುತ್ತದೆ. ಆ ಹಂಟೆ ಮಣ್ಣು ಬಂಡಿಂಗ್ ಕೆಲಸಕ್ಕೆ ಸರಿಯಾಗುವುದಿಲ್ಲ. ಆದ್ದರಿಂದ ಅಲ್ಲಿ ಇರಿಗೇಷನ್ ಕೆಲಸಗಳನ್ನು ಕೈಗೊಳ್ಳುವಂತೆ ಆ ರಿಲೀಫ್ ಸಮಿತಿಯವರು ತೀರ್ಮಾನ ಮಾಡಿದ್ದಾರೆ. ಅಲ್ಲಿ ಕೂಡಲೆ ಮೈನರ್ ಇರಿಗೇಷನ್ ಕೆಲಸ ಮತ್ತು ಬಾವಿಗಳ ಕೆಲಸವನ್ನು ಕೊಳ್ಳಬೇಕು. ಆದರೆ ಈಗಾಗಲೇ ಆಗಿರತಕ್ಕ ಕ್ಯಾಬಿನೆಟ್ ಡಿಸಿಷನ್ ಪ್ರಕಾರ ಅಲ್ಲಿ ಪ್ರತಿ ಗ್ರಾಮಕ್ಕೂ ಒಂದು ವರ್ಷದಲ್ಲಿ ಹತ್ತು ಬಾವಿಗಳಾಗಬೇಕೆಂದಿದೆ. ಅದರ ಜೊತೆಗೆ ಮಹರಾಷ್ಟ್ರದಲ್ಲಿ ಪ್ರತಿ ಎರಡು ಗ್ರಾಮಗಳಿಗೆ ಮಧ್ಯೆ ಇಂತಿಷ್ಟು ಬಾವಿಗಳಾಗಲೇಬೇಕೆಂದು ಏನೊಂದು ಅಲ್ಲಿ ತೀರ್ಮಾನ ಕೈಗೊಂಡಿದ್ದಾರೆ ಅದೇ ಮಾದರಿಯಲ್ಲಿ ನಮ್ಮ ತಾಲ್ಲೂಕದಲ್ಲೂ ಕೂಡ ಎರಡು ಹಳ್ಳಿಗಳಿಗೆ ನಡುವೆ ಸಾಧ್ಯವಾಗದಿದ್ದರೆ ನಾಲ್ಕು ಹಳ್ಳಿಗಳ ನಡುವೆ ಯಾದರೂ ಕೆಲವು ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಲೇಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಆದರೆ ಈ ದಿವಸ ಅಲ್ಲಿ ಬಹಳ ತಾಪತ್ರಯವಾಗಿರುವುದು ಎಂದರೆ ಅಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಭೀಕರವಾಗಿರುತ್ತದೆ. ಅಲ್ಲಿ ೨-೩ ಮೈಲಿ ದೂರ ಹೋಗಿ ನೀರನ್ನು ತರಬೇಕಾಗಿದೆ. ಆದುದರಿಂದ ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಅಲ್ಲಿಗೆ ಇನ್ನೂ ಹೆಚ್ಚಿಗೆ ರಿಗ್ಸನ್ನು ಕಳುಹಿಸಿ ಕನಿಷ್ಟಪಕ್ಷ ಎರಡು ದಿನಗಳಲ್ಲಾದರೂ ಒಂದು ಬಾವಿಯನ್ನು ತೆಗೆಯುವುದಕ್ಕೆ ಅವಕಾಶ ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿನ ಒಕ್ಕಲಿಗರಿಗೆ ಒದಗಿರತಕ್ಕ ಇನ್ನೊಂದು ದೊಡ್ಡ ತೊಂದರೆ ಏದರೆ ಅಲ್ಲಿ ಕೆಲವರೇನು ಬಾವಿಗಳಿಗೆ ಪಂಪ್ ಸೆಟ್ಟನ್ನು ಹಾಕಿಕೊಂಡಿದ್ದಾರೆ ಅಂಥ ಬಾವಿಗಳಲ್ಲಿ ನೀರಿಲ್ಲದಂತಾಗಿದೆ. ಆದಾಗ್ಯೂ ಅಲ್ಲಿನ ಎಂ. ಎಸ್. ಇ. ಬಿ. ನವರು ಅವರಿಗೆ ಆ ಮಿನಿಮಂ ಛಾರ್ಜನ್ನು ಕಟ್ಟುವುದಕ್ಕೆ ಒತ್ತಾಯ ಮಾಡುತ್ತಿದ್ದಾರೆ. ಅದನ್ನು ಕೂಡಲೇ ಮುನ್ನಾ ಮಾಡುವಂತೆ ಅವರಿಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಷ್ಟೇ ಅಲ್ಲ ಅಲ್ಲಿಯ ಒಕ್ಕಲುತನದವರ ಪರಿಸ್ಥಿತಿ ಬಹಳ ಭೀಕರವಾಗಿದೆ. ಅವರಲ್ಲಿದ್ದ ಜಾನುವಾರುಗಳಲ್ಲಿ ಈಗಾಗಲೇ ನೂರಕ್ಕೆ ೩೦ ದನಗಳು ಹೋಗಿವೆ. ಆದುದರಿಂದ ಸರ್ಕಾರದವರು ಪ್ರತಿಯೊಂದು ಹಳ್ಳದ ತೀರದಲ್ಲೂ ನದೀ ತೀರಗಳಲ್ಲೂ ಅಂದರೆ ಹರಿಯುತಕ್ಕ ಹಳ್ಳ ಮತ್ತು ನದಿಗಳ ತೀರದಲ್ಲಿ ದನಗಳ ಮೇವನ್ನು ಬೆಳೆಸುವುದಕ್ಕೆ ಸರ್ವ ಪ್ರಯತ್ನಗಳನ್ನೂ ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಎಲ್ಲಾ ಮಾನ್ಯ

ಸದಸ್ಯರೂ ಕೂಡ ಇದನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು. ಆದರೆ ಸರ್ಕಾರದವರು ಕ್ಯಾಬಿನೆಟ್ಟಿನಲ್ಲಿ ಪ್ರತಿಯೊಂದು ಹಳ್ಳಿಗೂ ೧೦ ಬಾವಿಗಳನ್ನು ಒಂದು ವರ್ಷದಲ್ಲಿ ಒದಗಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಲ್ಯಾಂಡ್ ಡೆವಲಪ್ ಬ್ಯಾಂಕಿನವರಿಂದ ಸರ್ಕಾರಕ್ಕೆ ಒಂದು ಲೆಟರ್ ಬಂದಿದೆ ಎಂದು ಕೇಳುತ್ತೇನೆ. ಅದರಲ್ಲಿ ಸರ್ಕಾರದವರು ಒಂದು ಗ್ಯಾರಂಟಿಯನ್ನು ಕೊಟ್ಟರೆ ಆ ಬ್ಯಾಂಕಿನವರು ವರ್ಷಕ್ಕೆ ೧೦ ಬಾವಿಗಳಲ್ಲ, ೨೦ ಬಾವಿಗಳನ್ನು ಬೇಕಾದರೂ ತೆಗೆಸುವುದಕ್ಕೆ ಬ್ಯಾಂಕಿನವರು ತಯಾರಿದ್ದಾರೆ ಎಂದು ಆ ಲೆಟರಿನಲ್ಲಿ ಸರ್ಕಾರಕ್ಕೆ ಅವರು ಬರೆದಿದ್ದಾರಂತೆ. ಆ ವಿಚಾರದಲ್ಲಿ ಅವರಿಗೆ ಸೂಕ್ತ ಜವಾಬನ್ನು ಕೊಟ್ಟರೆ ಅಲ್ಲಿನ ತೊಂದರೆಯೂ ತಪ್ಪುತ್ತದೆ, ಜನರಿಗೆ ನೀರೂ ಒದಗುವುದಲ್ಲದೆ ಅವರಿಗೆ ಕೆಲಸವೂ ಕೂಡ ಸಿಕ್ಕಿದಂತಾಗುತ್ತದೆ. ಇದಕ್ಕೆ ಸರ್ಕಾರದವರು ಗಮನ ಕೊಡಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಶ್ರೀ ಆರ್ಮುಗಂ ಅವರು ಏನು ಅಭಾವ ಪರಿಸ್ಥಿತಿಯ ಬಗ್ಗೆ ಒಂದು ವರದಿಯನ್ನು ನಮ್ಮ ಎದುರಿಗೆ ಇಟ್ಟಿದ್ದಾರೆಯೋ ಅದನ್ನು ಅತಿ ಜಾಗ್ರತೆಯಾಗಿ ಕಾರ್ಯಗತವಾಗುವಂತೆ ಮಾಡಬೇಕೆಂದು ನಾನು ವಿನಂತಿ ಮಾಡಿ ನನಗೆ ಈ ಸದನದಲ್ಲಿ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ಬಹಳವಾಗಿ ಚಿರಋಣಿಯಾಗಿದ್ದೇನೆ.

5—00 P.M.

† ಶ್ರೀ ಪಿ. ಪಿ. ಹಿಗ್ರೆ (ಚಿಕೋಡಿ).—ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ಏಕಸದಸ್ಯ ಆಯೋಗದವರಾದ ಮಾನ್ಯ ಶ್ರೀ ಆವರ್ಮುಗಂ ಅವರು ಒಂದೇ ವಾರದಲ್ಲಿ ಅಭಾವ ಪರಿಸ್ಥಿತಿ ಬಗ್ಗೆ ಒಂದು ವರದಿಯನ್ನು ಈ ಸದನದಲ್ಲಿ ಮಂಡಿಸಿದ್ದರಿಂದ ಅದನ್ನು ಸ್ವಾಗತಮಾಡಿ ಅವರನ್ನು ಪ್ರಥಮವಾಗಿ ಅಭಿನಂದಿಸುತ್ತೇನೆ. ಶ್ರೀಮಾನ್ ಆವರ್ಮುಗಂ ಅವರು ಸಾವಿರಾರು ಜನರನ್ನು ಅದರಲ್ಲಿಯೂ ಕೂಲಿಗಾರರನ್ನು ಭೇಟಿ ಮಾಡಿ, ೩೦೮ ಜನ ಪ್ರಮುಖರನ್ನು ಭೇಟಿಮಾಡಿ ಅವರ ಸಲಹೆಗಳನ್ನು ತೆಗೆದುಕೊಂಡು ೭೭ ಹಳ್ಳಿಗಳಿಗೆ, ಪಟ್ಟಣಗಳಿಗೆ ಭೇಟಿಮಾಡಿ ಅಲ್ಲಿನ ಪರಿಸ್ಥಿತಿಯನ್ನು ಅರಿತು, ಕಂಡು, ತಿಳಿದು ಇವತ್ತು ನಮ್ಮ ಸದನದ ಮುಂದೆ ಒಂದು ವರದಿಯನ್ನು ಸಾದರು ಮಾಡಿದ್ದಾರೆ. ಇದು ಅರ್ಥಗರ್ಭಿತವಾಗಿದೆ. ಅದನ್ನು ಈ ಸಭೆಯಲ್ಲಿ ಮಂಡಿಸಲೇ ಬೇಕು ಮಂಡಿಸಿದ್ದಾರೆ. ಈಗ ರೂಲಿಂಗ್ ಸದಸ್ಯರಲ್ಲಿ ಕೆಲವರು ಸರ್ಕಾರ ಏನೂ ಕಾರ್ಯ ಮಾಡಲಿಲ್ಲ, ಸರ್ಕಾರಕ್ಕೆ ಈ ವಿಷಯದಲ್ಲಿ ಯಾವ ಮಾನವೀಯತೆಯೂ ಇಲ್ಲ, ಆಸ್ಥೆಯೂ ಇಲ್ಲ ಎಂಬುದಾಗಿ ವಿರೋಧ ಮಾಡಿದ್ದಾರೆ. ಆದರೆ ಅಂತಹ ವಿರೋಧಗಳಿಗೆ ಏನೂ ಅರ್ಥವಿಲ್ಲ. ಏಕೆಂದರೆ ಮಾನ್ಯ ಶ್ರೀ ಆರ್ಮುಗಂ ಅವರ ವರದಿಯಲ್ಲಿಯೇ ಗೊತ್ತಾಗುತ್ತದೆ. ಅವರು ಪ್ರತಿಯೊಂದು ಜಿಲ್ಲೆಗೂ, ಪ್ರತಿಯೊಂದು ಭಾಗಕ್ಕೂ ಎಷ್ಟೆಷ್ಟು ಹಣ ಖರ್ಚುಮಾಡಿದೆ, ಈಗ ಸದ್ಯಕ್ಕೆ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರ ಏನೂ ಮಾಡಲಿಲ್ಲ ಎನ್ನುವ ವಾದಕ್ಕೆ ಏನೂ ಅರ್ಥವಿಲ್ಲ. ಮಾನ್ಯ ಶ್ರೀ ಆವರ್ಮುಗಂ ಅವರೇ ಈ ಕಾರ್ಯ ಸಾಕಷ್ಟು ಆಗಲಿಲ್ಲವೆಂದು ಹೇಳಿದ್ದಾರೆ. ನಾನು ಮಾಡಬೇಕಾದಷ್ಟು ಮಾಡಿದ್ದೇನೆಂದು ಹೇಳಿದ್ದಾರೆ. ಸರ್ಕಾರವೂ ಮಾಡುತ್ತಿದೆ ಅದರೊಳಗೆ ಏನೂ ವಾದವಿಲ್ಲ. ಇದು ಒಂದು ಮಹತ್ತರವಾದಂಥ ಕಾರ್ಯ. ಅಂಥಾದ್ದನ್ನು ಇಷ್ಟು ಅಲ್ಪ ಕಾಲದಲ್ಲಿಯೇ ಒಮ್ಮೆಲೇ ಮಾನ್ಯ ಶ್ರೀ ಆರ್ಮುಗಂ ಅವರು ಎಲ್ಲಾ ಪ್ರಶ್ನೆಗಳನ್ನು ಬಿಡಿಸಬೇಕೆಂದು ಕಲ್ಪನೆ ಮಾಡುವುದು ಬಹಳ ತಪ್ಪು. ಮಾನ್ಯ ಶ್ರೀ ಆರ್ಮುಗಂ ಅವರು ಹೇಳಿದ ಪ್ರಕಾರ, ಅವರು ಕಣ್ಣುಗಳಿಂದ ಪ್ರತ್ಯಕ್ಷವಾಗಿ ನೋಡಿರುವ ದೃಶ್ಯ ಕಂಡಮೇಲೆ ಜೀವಮಾನದಲ್ಲಿ ಇಂತಹ ಕ್ಷಾಮ ಎಂದೂ ಬಂದಿಲ್ಲವೆಂಬುದನ್ನು ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಅವರೂ ಒಪ್ಪುತ್ತಾರೆ. ಇಷ್ಟು ಒಪ್ಪಿದರೂ ಸರ್ಕಾರ ಸಾಕಷ್ಟು ಕಾರ್ಯವನ್ನು ಈ ವರೆಗೆ ಮಾಡಿದ್ದಾರೆಂಬುದನ್ನೂ ಸಹ ನಾನು ಒಪ್ಪುತ್ತೇನೆ. ಮಾನ್ಯ ಶ್ರೀ ಆವರ್ಮುಗಂ ಅವರು ಮುಖ್ಯ ಪ್ರಶ್ನೆಗಳ ವಿಷಯವನ್ನು ಹೇಳಿದ್ದಾರೆ. ಈ ಸಂಗತಿಯನ್ನು ಸರ್ಕಾರ ಅರಿತುಕೊಂಡು ಪರಿಸ್ಥಿತಿಯನ್ನು ನಿವಾರಣೆ ಮಾಡುವ ಕಾಲಕ್ಕೆ ದನಗಳಿಗೆ, ಮಾನವನಿಗೆ ನೀರು ಹೇಗೆ ದೊರೆಯಬೇಕು, ದನಗಳಿಗೆ ಮೇವು ಹೇಗೆ ದೊರೆಯಬೇಕು, ಜನಗಳಿಗೆ ಆಹಾರ ಧಾನ್ಯಗಳು ಹೇಗೆ ಸಿಗಬೇಕೆಂಬುದನ್ನು ವಿಚಾರಮಾಡಿದ್ದಾರೆ. ಇದಕ್ಕೆ ಪೂರ್ವದಲ್ಲಿ ಮಾನವನಿಗೆ ಕೆಲಸಬೇಕು, ಮಳೆಯಂತೂ ಇಲ್ಲ. ಮಾನವನಿಗೆ ಕೆಲಸ ಕೊಡಬೇಕೆಂಬ ತೀವ್ರತೆಯಿಂದ ಕೆಲವು ಕಡೆಗಳಲ್ಲಿ ಸರ್ಕಾರ ಕೆಲಸ ಕೊಟ್ಟಿದೆ. ಆ ಕೆಲಸ ಆದಷ್ಟು ಪಟ್ಟಿಗೆ ಜನರಿಗೆ ಉಪಯೋಗವಾಗಲಿಕ್ಕೆ ಇಲ್ಲ. ಅದನ್ನು ಬಹಳ ತೀವ್ರಗತಿಯಿಂದ ಮಾಡಬೇಕು. ಮಾನವನಿಗೆ ಕೆಲಸ ಕೊಡುವ ದೃಷ್ಟಿಯಿಂದ ರಸ್ತೆಗಳ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಈಗಲೇ ರಸ್ತೆಯ ಕಾಮಗಾರಿಗಳನ್ನು ಸಾಕಷ್ಟು ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಾಡಬೇಕೆಂದು ಮಾನ್ಯ ಶ್ರೀ ಆವರ್ಮುಗಂ ಅವರು ಹೇಳಿದ ಪ್ರಕಾರ ಇನ್ನೂ ಉಳಿದಿರುವ ಅಂತಹ ಎಷ್ಟೋ ಕಾರ್ಯಗಳನ್ನು ಮಾಡಬೇಕಾಗಿದೆ. ಆದರಿಂದ ಅಷ್ಟಾಗಿ ಮುಂದಿನ ಯೋಜನೆಗಳಿಗೆ ಉಪಯೋಗ ಆಗಲಿಕ್ಕಿಲ್ಲ. ಅದನ್ನು

(ಶ್ರೀ ಪಿ. ಪಿ. ಹಿಗ್ರೆ)

ಮಾನ್ಯ ವಿರೋಧಪಕ್ಷದ ಸದಸ್ಯರಾಗಲೀ, ನಾವೇ ಆಗಲೀ ಒಪ್ಪಲೇಬೇಕು. ಆದರೆ ನಾನು ಈ ಸಂದರ್ಭದಲ್ಲಿ ಈ ವಿಷಯವನ್ನು ವಿಸ್ತರಣೆ ಮಾಡುವುದಕ್ಕೆ ಹೋಗುತ್ತಾ ಇಲ್ಲ. ಸರ್ಕಾರದವರು ಮಾಡಬೇಕಾದ ಕೆಲಸ: ದನಗಳಿಗೆ ನೀರು, ಮಾನವರಿಗೆ ನೀರು, ಆಹಾರ ಪದಾರ್ಥಗಳು, ದನಗಳಿಗೆ ಮೇವು-ಈ ಕೆಲಸಗಳನ್ನು ಸರ್ಕಾರದವರು ಜಾಗ್ರತೆಯಾಗಿ ಪೂರೈಸಬೇಕು. ಇವುಗಳಿಂದ ಪಾರಾಗುವ ವಿಚಾರಮಾಡಬೇಕು. ಏಕೆಂದರೆ ಈಗ ನಾವು ಬರೀ ಜನಗಳಿಗೆ ಕೆಲಸ ಕೊಡುತ್ತಿದ್ದೇವೆ. ಜನಗಳು ಬಹುಕಾಲದವರೆಗೆ ಬಾಳುವುದಿಲ್ಲ. ಇನ್ನು ಮುಂದೆ ಭೂಮಿಯ ಉತ್ಪನ್ನ ಬಗ್ಗೆ ಏನು ಮಾಡಬೇಕೆಂದರೆ, ಅದರಿಂದ ಬರತಕ್ಕ ಸಾಧನ ಸಂಪತ್ತುಗಳನ್ನು ವಿಚಾರಮಾಡಬೇಕು. ನಾವು ಪ್ರಪ್ರಥಮವಾಗಿ ಮಾನವರಿಗೇ ಆಗಲೀ, ದನಗಳಿಗೇ ಆಗಲೀ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. ಇದೇ ರೀತಿ ಭೂಮಿಯನ್ನು ಸಾಗು ಮಾಡಬೇಕಾದರೆ, ನಮಗೆ ಇರ್ರಿಗೇಷನ್ ಸಲುವಾಗಿ ನೀರಿನ ವ್ಯವಸ್ಥೆಯನ್ನು ಬಹಳ ಚೆನ್ನಾಗಿ ಮಾಡಬೇಕು. ಕುಡಿಯುವ ನೀರಿನ ವ್ಯವಸ್ಥೆಯ ಸಲುವಾಗಿ ರಿಗ್ ಯಂತ್ರಗಳನ್ನು ಉಪಯೋಗಿಸಿ ಬಾವಿಗಳನ್ನು ತೆಗೆಸಬೇಕು. ಸರ್ಕಾರದವರು ಆಹಾರ ಧಾನ್ಯಗಳನ್ನು ಒದಗಿಸುವಂತೆ, ನೀರಿನ ಸೌಕರ್ಯವನ್ನೂ ಸಹ ಒದಗಿಸಿಕೊಡಬೇಕು. ಮಳೆಗಾಲದಲ್ಲಿ ನೀರು ಸಿಕ್ಕಿದರೂ, ಏಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ ನೀರು ಸಿಗುವುದಿಲ್ಲ. ಅಂತಹ ಒಂದು ಮಹಾ ಸಂಕಟವನ್ನು ಪಾರುಮಾಡಬೇಕಾದರೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ರಿಗ್ ಯಂತ್ರಗಳನ್ನು ಉಪಯೋಗಿಸಿ ನೀರಿನ ಸೌಕರ್ಯವನ್ನು ಒದಗಿಸಿ ಕೊಡಬೇಕು.

ಇನ್ನು ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಎಲ್ಲೆಲ್ಲಿ ಮಾಡದೆ ಬಿಟ್ಟಿದ್ದಾರೋ ಅವನ್ನು ತೀವ್ರಗತಿಯಿಂದ ಮಾಡಬೇಕು. ಇನ್ನೊಂದು ಸಂಗತಿ. ನಮ್ಮ ಚಿಕೋಡಿ ತಾಲ್ಲೂಕಿನಲ್ಲಿ ಕೆರೆಗಳನ್ನು ಕಟ್ಟಬೇಕೆಂಬ ವಿಚಾರ ಮಾಡಿದ್ದರೂ ಈ ವರೆಗೆ ಕೈಗೊಳ್ಳಲಿಲ್ಲ. ಅಲ್ಲಿನ ಜನರು ಅದಕ್ಕಾಗಿ ಬಹಳವಾಗಿ ವಿರೋಧಮಾಡಿದ್ದಾರೆ. ಆದ್ದರಿಂದ ಸರ್ಕಾರದವರು ಎಮರ್ಜನ್ಸಿಯಾಗಿ ಆ ಕೆರೆಗಳನ್ನು ಕಟ್ಟಿ ಕೊಡಬೇಕು.

ಕೊನೆಯದಾಗಿ, ಮೊನ್ನೆ ಸರ್ಕಾರದವರು ಬರಗಾಲಪೀಡಿತ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳಿಗೆ ಫೀಸ್ ಸೌಕರ್ಯಗಳನ್ನು ಕೊಡುವ ಬಗ್ಗೆ ಒಂದು ಸರ್ಕಾರೀ ಆಜ್ಞೆಯನ್ನು ಹೊರಡಿಸಿದ್ದಾರೆ. ನಮ್ಮ ಬೆಳಗಾಂ ಜಿಲ್ಲೆಯೊಳಗೆ ಕಟ್ಟುನಿಟ್ಟಾಗಿ ಅದನ್ನು ಪಾಲನೆ ಮಾಡಿದ್ದರೂ ನಮ್ಮ ತಾಲ್ಲೂಕಿನೊಳಗೆ ಅದಿನ್ನೂ ಜಾರಿ ಬಂದಿಲ್ಲ. ಆದ್ದರಿಂದ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಸರ್ಕಾರೀ ಆಜ್ಞೆ ಏನಿದೆಯೋ ಅದನ್ನು ನಮ್ಮ ತಾಲ್ಲೂಕಿನಲ್ಲಿ ಜಾರಿಗೆ ಕೊಡದೇ ಬಿಟ್ಟುಬಿಟ್ಟಿರುವುದು ಚಿಕೋಡಿ ತಾಲ್ಲೂಕಿನ ಜನರ ಆರೋಪಣೆ ಬಾರದೇ ಇರುವ ರೀತಿಯಲ್ಲಿ ಕೂಡಲೇ ಅದನ್ನು ಇಲ್ಲಿಯೂ ಜಾರಿಗೆ ಕೊಡುವುದು ಬಹಳ ಸೂಕ್ತ. ಏಕೆಂದರೆ, ನಾನು ಊರಿಗೆ ಹೋಗಬೇಕಾದರೆ ಬಹಳ ಕಠಿಣ ಇದೆ. ನಾವು ಈಗಾಗಲೇ ಟೆಲಿಗ್ರಾಂ, ಅರ್ಜಿಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಕಳುಹಿಸಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳೇ ಆ ರೀತಿಯಾದಂಥ ಸೌಲಭ್ಯಗಳನ್ನು ನಮಗೂ ಕೊಡುತ್ತೇವೆಂದು ಈ ಸದನದಲ್ಲಿಯೇ ಮಾತನಾಡಿದ್ದಾರೆ. ನಮಗೂ ಅದರ ಸೌಲಭ್ಯ ಶೀಘ್ರವಾಗಿ ಆಗುತ್ತದೆಂದು ತಾರ್ ಮೂಲಕ ನಮ್ಮ ತಾಲ್ಲೂಕಿಗೆ ಕಳುಹಿಸಿಕೊಟ್ಟಿದ್ದಾರೆಂದು ಕೇಳಿದ್ದೇನೆ. ಆದರೂ ಈ ವಿಷಯವನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಚಿಕೋಡಿ ತಾಲ್ಲೂಕನ್ನು ಇದರಲ್ಲಿ ಕೂಡಿಸಬೇಕೆಂದು ನಾನು ಸರ್ಕಾರದವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಇಷ್ಟು ಹೇಳಿ ನನಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜೆ. ಎಸ್ ಅಮ್ಮಣ್ಣವರ (ಸದಲಗಾ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದಂತಹ ಆಮ್ಗಾಂವಕರವರು ನಮ್ಮ ರಾಜ್ಯದ ಬರಗಾಲದ ಕರಾಳ ಛಾಯೆಯು ಬಿದ್ದ ಪ್ರದೇಶಗಳಿಗೆ ಪ್ರತ್ಯಕ್ಷವಾಗಿ ಭೇಟಿ ಕೊಟ್ಟು ಅಲ್ಲಿರತಕ್ಕಂಥಹ ಸಂಗತಿಗಳನ್ನು ತಮ್ಮ ವರದಿಯಲ್ಲಿ ಕೊಟ್ಟಿದ್ದಾರೆ. ಅವರು ಕೆಲವೇ ದಿವಸಗಳಲ್ಲಿ ಈ ಕಾರ್ಯವನ್ನು ಮಾಡಿ ವಿವರಗಳನ್ನು ಸಭೆಗೆ ಕೊಟ್ಟದ್ದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಅಷ್ಟೇ ಅಲ್ಲದೆ ಮಾನ್ಯ ವಿರೋಧ ಪಕ್ಷದ ನಾಯಕರು ಸರ್ಕಾರದವರು ಬರಗಾಲ ಪ್ರದೇಶದಲ್ಲಿ ಏನೂ ಖರ್ಚು ಮಾಡಿಲ್ಲವೆಂಬಂತೆ ಹೇಳಿದ್ದಾರೆ. ಆದರೆ ಮಾನ್ಯ ಆಮ್ಗಾಂವಕರವರೇ ತಮ್ಮ ವರದಿಯಲ್ಲಿ ಸರ್ಕಾರದವರು ಅಲ್ಲಿ ಏಳೂವರೆ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆಂದು ಹೇಳಿದ್ದಾರೆ. ಕೆಲಸ ಆಗಿರುವುದನ್ನು ಆಗಿದೆ ಎಂದು ಒಬ್ಬರೂ ಹೇಳಿಲ್ಲ. ಅದೇ ರೀತಿ ಆಮ್ಗಾಂವಕರವರು ಪೇಜ್ ೨, ಪ್ಯಾರಾ ೩ರಲ್ಲಿ ಕಳೆದ ೭ ವರ್ಷಗಳಿಂದ ಅಲ್ಲಿ ಮಳೆಯ ಅಭಾವ ಇದೆಯೆಂದು ಹೇಳಿದ್ದಾರೆ. ಹಿಂದೆ ಸರ್ಕಾರ ಇದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳದಿರುವುದರಿಂದ ಈ ರೀತಿ ಪರಿಸ್ಥಿತಿ ಹೋಗಿದೆ. ಇದಕ್ಕೆ ಯಾರು ಜವಾಬ್ದಾರರು ಎಂಬುದನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಸ್ಪಷ್ಟವಾಗಿ ಹೇಳಿದ್ದಾರೆ,

ನನ್ನ ಜಿಲ್ಲೆಯ ಬಗ್ಗೆ ಹೇಳುವುದಾದರೆ ಹಿಂದೆ ಎಂದೂ ಮನುಷ್ಯನ ಸ್ಮರಣೆಯಲ್ಲಿ ಬಾರದಂಥಹ ದುರ್ಭಿಕ್ಷ ಅಲ್ಲಿ ಬಂದಿದೆ. ಅದೇ ರೀತಿಯಾಗಿ ನನ್ನ ಸದಲಗಾ ಮತ ಕ್ಷೇತ್ರದ ಬಗ್ಗೆ ಹಾಗೂ ಚಿಕ್ಕೋಡಿ ತಾಲೂಕಿನ ಬಗ್ಗೆ ಸ್ವಲ್ಪ ಹೇಳುತ್ತೇನೆ. ಈ ಬರಗಾಲದಲ್ಲಿ ಈಗಾಗಲೇ ಕೆಲವೊಂದು ಕಾಮಗಾರಿಗಳು ಅಲ್ಲಿ ಆಗಿವೆ. ಆದರೆ ಇನ್ನೂ ಕೆಲವು ಕಾಮಗಾರಿಗಳು ಆಗಬೇಕಾಗಿವೆ. ನನ್ನ ಕ್ಷೇತ್ರದಲ್ಲಿ ಬರಗಾಲ ಕೆಲಸವೆಂದು ಎಷ್ಟೋ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ತಾಲ್ಲೂಕ್ ಲೆವಲ್ ಸ್ಕೇರ್‌ಸಿಟಿ ರಿಲೀಫ್ ಕಮಿಟಿಯಲ್ಲಿ ಹೇಳಿದರೆ. ಡೆಪ್ಯೂಟಿ ಕಮಿಷನರು ಅವರಿಗೆ ಅಂಥ ಕೆಲಸಗಳನ್ನು ತೆಗೆದುಕೋಳ್ಳಬೇಡಿ ಎಂದು ಹೇಳಿದ್ದಾರಂತೆ. ಆದ್ದರಿಂದ ಅವರಿಗೆ ಸೂಕ್ತವಾದ ಸೂಚನೆಗಳನ್ನು ಕೊಟ್ಟು ಅಲ್ಲಿರತಕ್ಕಂಥಹ ರಸ್ತೆ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಗೋಕಟ್ಟೆ ಕಟ್ಟಬೇಕಾದರೆ ಜನರು ವಾಲಂಟರಿಯಾಗಿ ಕಂಪೆನ್ಸೇಶನ್ ಇಲ್ಲದೆ ಜಮೀನು ಕೊಡಬೇಕೆಂದು ಇದೆ. ಈಗಿನ ಕಾಲ ಬದಲಾವಣೆಯಾಗಿರುವುದರಿಂದ ಆ ಒಂದು ಕಂಡೀಶನನ್ನು ರಿಲ್ಯಾಕ್ಸ್ ಮಾಡಿ ಕಂಪೆನ್ಸೇಶನ್ ಕೊಡುವ ಹಾಗೆ ಮಾಡಬೇಕು. ಏಕೆಂದರೆ, ಇವತ್ತು ೬—೭ ಎಕರೆ ಜಮೀನು ಜನರು ಬಿಡಬೇಕಾಗಿರುವುದರಿಂದ ೪೪ ಫ್ಯಾಮಿನ್ ರಿಲೀಫ್ ಹೆಡ್ಡಿನಿಂದ ಸಾಧ್ಯವಾದಷ್ಟು ಕಂಪೆನ್ಸೇಷನ್ ಕೊಡುವುದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಅಷ್ಟೇ ಅಲ್ಲದೆ ನಮ್ಮಲ್ಲಿ ಕಲ್ಲೋಳ ಎಂಬಲ್ಲಿ ಲಿಫ್ಟ್ ಇರಿಗೇಶನ್ ಕೆಲಸ ಪ್ರಾರಂಭವಾಗಿ ಮೂರು ವರ್ಷವಾಗಿದೆ. ಅಲ್ಲಿ ಈ ನೀರಾವರಿ ಕೆಲಸ ಜಾಗ್ರತೆಯಾಗಿ ಮಾಡಿದರೆ ಅಲ್ಲಿರತಕ್ಕಂಥಹ ಉಗಾರ್ ಸಕ್ಕರೆ ಕಾರ್ಖಾನೆಯವರು ಕಟ್ಟಿದ ಭಂಡಾರ ದಿಂದ ಅಲ್ಲಿ ನಿಂತಿರತಕ್ಕಂಥಹ ನೀರಿನಿಂದ ಸುಮಾರು ೩,೫೦೦ ಎಕರೆ ಜಮೀನಿಗೆ ಬಹಳ ಅನುಕೂಲವಾಗು ತ್ತಿತ್ತು. ಅಲ್ಲಿ ಇಂಗಳಿ ನೀರಾವರಿ ಸ್ಕೀಮನ್ನು ತೆಗೆದುಕೊಳ್ಳಬೇಕೆಂದು ನಾಲ್ಕು ಐದು ವರ್ಷ ಪ್ರಯತ್ನ ನಡೆದಿದ್ದರೂ ಇನ್ನೂ ಅದು ಆಗಲಿಲ್ಲ. ಅದು ಆದರೆ ಸುಮಾರು ಮೂರುವರೆ ಸಾವಿರ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಅದೇ ರೀತಿ ಕಾರದಗಾ ಲಿಫ್ಟ್ ಇರಿಗೇಷನ್ ಯೋಜನೆಯು ಬಹಳ ದಿನಗಳಿಂದ ಹಾಗೆಯೇ ಇದೆ. ಅದನ್ನು ಸಹ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ದೂದ್ ಗಂಗ, ವೇದ ಗಂಗ, ಪಾಚಗಂಗ ಮತ್ತು ಕೃಷ್ಣಾ ನದಿಗಳು ಹರಿಯುತ್ತಿದೆ. ಮಳೆಗಾಲದಲ್ಲಿಯಾದರೂ ಸಹ ನೀರು ಹರಿಯುತ್ತಿರುವಾಗ ಲಿಫ್ಟ್ ಇರಿಗೇಶನ್ ಸ್ಕೀಮ್‌ಗಳನ್ನು ಮಾಡಿದರೆ, ಅದರಿಂದ ಬೇಸಾಯ ಮಾಡಬಹುದು. ಅದೇ ರೀತಿಯಲ್ಲಿ ನನ್ನ ಕ್ಷೇತ್ರ ಹಾಗೂ ಅದಕ್ಕೆ ಹತ್ತಿರ ಇರತಕ್ಕ ಊರುಗಳು ಬರಗಾಲ ದಿಂದ ತೊಂದರೆಗೆ ಒಳಪಟ್ಟಿವೆ. ನನ್ನ ಕ್ಷೇತ್ರವನ್ನು ಕ್ಷಾಮ ಪ್ರದೇಶವೆಂದು ಡಿಕ್ಲೇರ್ ಮಾಡಬೇಕೆಂದು ಕಂದಾಯ ಮಂತ್ರಿಯವರಿಗೆ ಮತ್ತು ಮುಖ್ಯಮಂತ್ರಿಯವರಿಗೆ ಟೆಲಿಗ್ರಾಂ ಕಳಿಸಿ ಮೂರು ತಿಂಗಳ ಹಿಂದೆ ತಿಳಿಸಿದೇನೆ. ಹಾಗೆಯೇ ನಮ್ಮ ಭಾಗದಲ್ಲಿ ಇನ್ನೂ ಹೆಚ್ಚಿನ ಕೆಲಸ ಕಾರ್ಯಗಳನ್ನು ಮಾಡಿಸಬೇಕೆಂದು ಹೇಳಿದೇನೆ. ಉದಾಹರಣೆಗೆ ನಾಗರಾಳನಲ್ಲಿ ಮತ್ತು ಸದಲಗಾ, ಬೇಡತಿಹಾಳ ಬೋರಗಾಂವ ಮತ್ತು ಆಡಿ ಊರುಗಳಲ್ಲಿ ಒಂದೊಂದು ಟ್ಯಾಂಕ್ ಮಾಡುವುದಕ್ಕೆ ಸಾಧ್ಯವಿದೆ. ಅವುಗಳನ್ನು ಆದಷ್ಟು ತೀವ್ರಗತಿಯಿಂದ ತೆಗೆದುಕೊಂಡು ಅದರ ಮುಖಾಂತರ ಅಲ್ಲಿರತಕ್ಕ ಜನರಿಗೆ ಕೆಲಸಗಳನ್ನು ಒದಗಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಇನ್ನು ಬೆಳಗಾಂ ಜಿಲ್ಲೆಯಿಂದ ಯಾರೂ ವಲಸೆ ಹೋಗಿಲ್ಲ ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುವುದಿಲ್ಲ. ನನ್ನ ಕ್ಷೇತ್ರದ ಒಡಗೋಲ, ನಿಪ್ಪಾಣಿ ಕ್ಷೇತ್ರದ ಹದನಾಳ ಮುಂತಾದ ಪ್ರದೇಶಗಳ ಜನರು ವಲಸೆ ಹೋಗಿದ್ದಾರೆ. ಅಷ್ಟೇ ಅಲ್ಲದೆ ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ಇದೇ ಸದನದಲ್ಲಿ ಚಿಕ್ಕೋಡಿ ತಾಲ್ಲೂಕಿನಲ್ಲಿ ೭೪ ಹಳ್ಳಿಗಳಿಗೆ ಕುಡಿಯುವ ನೀರಿನ ಅಭಾವ ಇದೆಯೆಂದು ಹೇಳಿದ್ದಾರೆ. ನಾನಾ ದರೂ ಹೇಳುತ್ತೇನೆ. ನನ್ನ ಕ್ಷೇತ್ರದ ಪ್ರತಿಯೊಂದು ಊರಿನಲ್ಲಿಯೂ ಕುಡಿಯುವ ನೀರಿನ ಅಭಾವ ಇದೆ. ನಮ್ಮ ಕ್ಷೇತ್ರದ ಊರುಗಳಿಂದ ದಿನಾಲೂ ಇದೇ ಬಗೆ ಟೆಲಿಗ್ರಾಂಗಳ ಬರುತ್ತಾ ಇವೆ. ಆ ಪ್ರದೇಶಗಳಲ್ಲಿ ರಿಗ್‌ಮಷೀನನ್ನು ಒದಗಿಸಿದರೆ ಕುಡಿಯುವ ನೀರಿನ ಬಾವಿಗಳನ್ನು ತೆಗೆಯುವುದಕ್ಕೆ ಸಹಾಯವಾಗುತ್ತದೆ ಮತ್ತು ಜನವರಿಗೆ ಇದರಿಂದ ಬಹಳ ಅನುಕೂಲವು ಸಹ ಆಗುತ್ತದೆ. ಆದ್ದರಿಂದ ಅಲ್ಲಿಗೆ ರಿಗ್ ಮೆಶೀನನ್ನು ಜಾಗ್ರತೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನೀರಿಗಾಗಿ ಕಷ್ಟಪಡುತ್ತಿರುವ ಹಳ್ಳಿಗರು ನಡು ರಾತ್ರಿಯ ವೇಳೆಯಲ್ಲಿ ನೀರು ಹೊರುತ್ತಿರುವುದು ಸಂಕಟ ಉಂಟುಮಾಡುತ್ತಿದೆ.

ಇನ್ನು ಕಾಳಮ್ಮವಾಡಿ ಎನ್ನುವಲ್ಲಿ ದೂಧಗಂಗಾ ನದಿಗೆ ಮಹಾರಾಷ್ಟ್ರದಲ್ಲಿ ಒಂದು ಅಣೆಕಟ್ಟು ಕಟ್ಟು ತ್ತಿರುವುದರಿಂದ ನಮ್ಮ ತಾಲ್ಲೂಕಿನಲ್ಲಿರತಕ್ಕ ದೂಧಗಂಗಾ ನದೀ ದಡದ ಹಳ್ಳಿಗಳಿಗೆ ನೀರು ಬಾರದೆ ಬಹಳ ತೊಂದರೆಯಾಗಬಹುದಾಗಿದೆ. ಹಿಂದಕ್ಕೆ ಕಟ್ಟಿದ ಕೊಯ್ನಾ ಡ್ಯಾಂ ನಿಂದಲೂ ನಮ್ಮ ಭಾಗಕ್ಕೆ ಬಹಳ ತೊಂದರೆ ಯಾಗಿದೆ. ಆದರೆ ಆಗ ನಮ್ಮ ಪ್ರದೇಶ ಮುಂಬಾಯಿಗೆ ಸೇರಿದ್ದುದರಿಂದ ನಾವು ಏನು ಹೇಳುವುದಕ್ಕಾಗಲಿಲ್ಲ ಆದ್ದರಿಂದ ಈಗಲಾದರೂ ಮಹಾರಾಷ್ಟ್ರದಲ್ಲಿ ಕಾಳಮ್ಮವಾಡಿಯಲ್ಲಿ ಕಟ್ಟಲಾಗುತ್ತಿರುವ ಅಣೆಕಟ್ಟಿನ ಬಗ್ಗೆ ಸೂಕ್ತವಾದ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಂಡು ನಮ್ಮ ಭಾಗಕ್ಕೂ ಸರಿಯಾಗಿ ನೀರು ಬರುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಘಟಪ್ರಭಾ ರೈಟ್ ಬ್ಯಾಂಕ್ ಕೆನಾಲಿನ ಫಸ್ಟ್ ಟ್ರಿಬ್ಯೂಟರಿ ಕೆಲಸ ತೆಗೆದುಕೊಂಡರೆ ನಮ್ಮ ಭಾಗಕ್ಕೆ ಬಹಳ ಅನುಕೂಲವಾಗುತ್ತದೆ. ಅದಲ್ಲ ಬರಗಾಲಕ್ಕೆ ತುತ್ತಾದ ಪ್ರದೇಶವಾದುದರಿಂದ ಅಲ್ಲಿ ಇಂಥಹ ಕಾರ್ಯಕ್ರಮಗಳನ್ನು ಆದಷ್ಟು ಜಾಗ್ರತೆ ತೆಗೆದು

(ಶ್ರೀ ಜಿ. ಎಸ್. ಅವ್ವಣ್ಣನವರ)

ಕೊಳ್ಳಬೇಕು. ಅದೇ ರೀತಿ ಮುದುಕರಿಗೆ ಮತ್ತು ದುರ್ಬಲರಿಗೆ ಏನಾದರೂ ಸಹಾಯ ಕೊಡುವುದಿದ್ದರೆ, ಅದನ್ನು ಸಹ ಬೆಳಗಾಂ ಜಿಲ್ಲೆಯ ಜನರಿಗೆ ಒದಗಿಸಿಕೊಡಬೇಕು. ಯೋಜಿತಗಂಗಾ ಕಾವೇರಿ ಕೆನಾಲ ನಮ್ಮ ರಾಜ್ಯದ ಬರಗಾಲ ಜಿಲ್ಲೆಗಳಿಂದ ಹಾಯ್ದು ಹೋಗುವಂತೆ ಸರಕಾರ ಪ್ರಯತ್ನಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಪಾಟೀಲ್ (ಬಾಗೇವಾಡಿ) — ಮಾನ್ಯ ಅಧ್ಯಕ್ಷಿಣಿಯವರೇ ಕ್ಷಾಮಪರಿಸ್ಥಿತಿಯನ್ನು ಅವಲೋಕನ ಮಾಡಿ ಸರ್ಕಾರಕ್ಕೆ ವರದಿಯನ್ನು ಒಪ್ಪಿಸುವಾಗ ಶ್ರೀಮಾನ್ ಆರ್ಮುಗಂ ಅವರು ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಬಗ್ಗೆ ಅವರ ವರದಿಯಲ್ಲಿ ಪ್ರಸ್ತಾಪ ಮಾಡದೇ ಇರುವುದು, ಅಲ್ಲಿನ ಪರಿಸ್ಥಿತಿಯನ್ನು ವರದಿಯಲ್ಲಿ ಕಾಣಿಸದೇ ಇರುವುದು ನಿಜವಾಗಿಯೂ ನಮಗೆ ಆಘಾತವಾಗಿದೆ. ಶ್ರೀಮಾನ್ ಆರ್ಮುಗಂ ಅವರ ವರದಿಯನ್ನು ಓದಿದ ನಂತರ ನಮ್ಮ ಬಸವನ ಬಾಗೇವಾಡಿ ತಾಲ್ಲೂಕಿನ ವಿಷಯ ಇಲ್ಲದೆ ಇರುವುದನ್ನು ಅವರಲ್ಲಿ ಪ್ರಸ್ತಾಪ ಮಾಡಿದಾಗ ಅವರು ಎಲ್ಲೋ ಆ ವಿಷಯ ಕೈಬಿಟ್ಟು ಹೋಗಿದೆ. ಮಿಸ್ ಪ್ರಿಂಟ್ ಆಗಿದೆ, ನಾನು ಈ ವಿಚಾರವನ್ನು ಸಪ್ಲಿಮೆಂಟರಿಯಲ್ಲಿ ಬರೆಯುತ್ತೇನೆ ಎಂದು ಹೇಳಿದ್ದರು. ನಮ್ಮ ತಾಲ್ಲೂಕಿನಲ್ಲಿ ೩/೪ ಭಾಗ ಕ್ಷಾಮಪರಿಸ್ಥಿತಿಗೆ ತುತ್ತಾಗಿದೆ. ಈ ಮೊದಲು ೩—೪ ವರ್ಷಗಳಿಂದಲೂ ಬರಗಾಲದಿಂದ ನಾವು ಬಳಲುತ್ತಿದ್ದೇವೆ. ಬರಗಾಲ ಜಿಲೆಯಾದ ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕು ಬರಗಾಲ ಪೀಡಿತ ಪ್ರದೇಶ ಮತ್ತು ಬಹಳ ಹಿಂದುಳಿದ ತಾಲ್ಲೂಕು ಎಂದು ಹೆಸರಾಗಿದೆ. ಅಲ್ಲಿ ಈಗ ಸುಮಾರು ೩ ವರ್ಷಗಳಿಂದಲೂ ಮುಂಗಾರು ಮಳೆ ಇಲ್ಲ. ಇಲ್ಲಿ ಅರ್ಧಭಾಗ ಪೂರ್ತಿ ಮುಂಗಾರಿ ಬೆಳೆಯ ಕ್ಷೇತ್ರವಾಗಿದ್ದು ಒಂದೆರಡು ಮುಂಗಾರಿ ಮಳೆಗಳು ತಪ್ಪಿದರೆ ನಾವು ಬರಗಾಲದಿಂದ ನರಳಬೇಕಾಗುವುದು. ಉಳಿದ ಅರ್ಧಭಾಗ ಡೋಣಿ ಭಾಗವಾಗಿದ್ದು ಹೆಚ್ಚು ಮಳೆಯಾದರೇನೇ ಬೆಳೆ ಬರುವುದು. ಇಲ್ಲಿ ಕೇವಲ ಹಿಂಗಾರಿ ಪೀಕು ಬೆಳೆಯುವುದು. ಹೀಗಾಗಿ ಮಳೆ ಸ್ವಲ್ಪ ಹೆಚ್ಚು ಕಡಿಮೆ ಆದರೆ ಬರಗಾಲವೇ ನಮ್ಮ ಗತಿಯೆಂದು ಧಾರಾಳವಾಗಿ ಹೇಳಬಹುದು. ಈಗಂತೂ ನಮ್ಮ ಪರಿಸ್ಥಿತಿ ಚಿಂತಾಜನಕವಾಗಿದೆ. ಕಾರಣ ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುತ್ತಿರುವ ನಮ್ಮ ತಾಲ್ಲೂಕಿನ ಜನತೆಯ ಬೇಡಿಕೆಗಳನ್ನು ಪೂರೈಸಿ ನಾವು ಸುಖದಿಂದ ಬಾಳುವಂತೆ ಸರಕಾರ ಕ್ರಮ ತೆಗೆದುಕೊಳ್ಳಬೇಕಾಗಿ ತಮ್ಮ ಮುಖಾಂತರ ಸರ್ಕಾರವನ್ನು ಕೋರುತ್ತೇನೆ.

ನಮ್ಮ ಭಾಗಕ್ಕೆ ಯಾವ ನೀರಾವರಿಯ ಯೋಜನೆಯ ನೀರು ಸಿಕ್ಕುವುದಿಲ್ಲ. ಕೇವಲ ಬಾವಿಗಳ ನೀರಾವರಿಯೇ ನಮಗೆ ಆಧಾರ. ಆದ್ದರಿಂದ ಮೈನರ್ ಇರಿಗೇಷನ್ ಕೆಲಸವನ್ನು ನಮ್ಮ ಭಾಗದಲ್ಲಿ ಹೆಚ್ಚು ತೆಗೆದುಕೊಳ್ಳಬೇಕು. ಈಗಾಗಲೇ ಹೊಸ ಬಾವಿಗಳನ್ನು ತೆಗೆಸಲು ಮತ್ತು ಹಳೆಯ ಬಾವಿಗಳನ್ನು ಆಳ ಮಾಡಲು ಕೆಸರು ತೆಗೆಸಲು ಅನೇಕ ಜನಗಳು ತಕಾವಿ ಸಾಲವನ್ನು ಬೇಡಿ ಸಾಕಷ್ಟು ಅರ್ಜಿಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಅವರ ಮಾಗಣಿಯನ್ನು ಪೂರೈಸಿಕೊಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿನ ಆಯಾ ಭಾಗಗಳಾದ ಸಣ್ಣ ನೀರಾವರಿ ಕೆರೆಗಳ ನಿರ್ಮಾಣವನ್ನು ಕುರಿತು ಆಯಾ ಭಾಗದ ಜನಗಳಿಂದ ಸರ್ಕಾರಕ್ಕೆ ಅರ್ಜಿಗಳು ಬಂದಿವೆ. ಅವುಗಳ ಬಗ್ಗೆ ವಿಚಾರಿಸಿ ಅವುಗಳ ಕೆಲಸವನ್ನು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಕೃಷ್ಣಾನದಿ ದಂಡೆಯಲ್ಲಿ ಎಲೆಕ್ಟ್ರಿಕ್ ಪಂಪ್‌ಸೆಟ್ಟುಗಳನ್ನು ಹಾಕಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಲು ಅನೇಕರು ಸರ್ಕಾರಕ್ಕೆ ಅರ್ಜಿಯನ್ನು ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಆಸ್ಥೆಯನ್ನು ವಹಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾಗುವ ಪ್ರದೇಶದಲ್ಲಿ ಯಾವ ಅಭಿವೃದ್ಧಿ ಕಾರ್ಯಗಳನ್ನೂ ಕೈಗೊಳ್ಳಬಾರದೆಂದು ಸರ್ಕಾರದ ಆದೇಶ ಇದೆ. ಈ ಬಗ್ಗೆ ಸಾಕಷ್ಟು ಸಲ ಸರಕಾರಕ್ಕೆ ಕೇಳಿಕೊಂಡರೂ ಈವರೆಗೆ ಆ ಆಜ್ಞೆಯನ್ನು ಹಿಂತೆಗೆದುಕೊಂಡಿಲ್ಲ. ಕಾರಣ ಈಗಲಾದರೂ ಸರ್ಕಾರದವರು ಈ ಆಜ್ಞೆಯನ್ನು ಹಿಂತೆಗೆದುಕೊಂಡು ಮುಳುಗಡೆಯಾದ ಪ್ರದೇಶದಲ್ಲಿಯೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಬಾವಿ ತೆಗೆಯುವುದಕ್ಕೆ ತಗಾಯಿ ಲೋನು, ಬಾವಿಗಳಿಗೆ ವಿದ್ಯುಚ್ಛಕ್ತಿ ಪೂರೈಕೆ ಮುಂತಾದವುಗಳನ್ನು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಮ್ಮ ಭಾಗದಲ್ಲಿ ನೀರಾವರಿ ಪಂಪು ಸೆಟ್ಟುಗಳಿಗೆ ತೀವ್ರಗತಿಯಿಂದ ವಿದ್ಯುತ್ ಪೂರವಣಿಯಾಗುವಂತೆ ಕ್ರಮಕೈಗೊಳ್ಳಬೇಕಾಗಿ ಸರಕಾರಕ್ಕೆ ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಈ ಪ್ರಕಾರ ನಮ್ಮ ಬೇಡಿಕೆಗಳನ್ನು ಪೂರೈಸಿ ಬರಗಾಲದ ಬವಣೆಯನ್ನು ಹೋಗಲಾಡಿಸಿ ಆದರಿಂದ ನಮ್ಮನ್ನು ಪಾರುಮಾಡಿ ನಮಗೆ ಸುಖ ಜೀವನ ಸಾಗಿಸಲು ಅನುವು ಮಾಡಿಕೊಡಬೇಕಾಗಿ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಮತ್ತು ನಮ್ಮ ತಾಲ್ಲೂಕಿನಲ್ಲಿ ನೇಕಾರರಿಗೆ ನೂಲು ಖರೀದಿಸಲು ಸಹಾಯ ಧನ ಕೊಟ್ಟು ಅವರಿಂದ ತಯಾರಾದ ಮಾಲನ್ನು ಸರ್ಕಾರ ತೆಗೆದುಕೊಂಡು ಅವರು ಜೀವನ ಸಾಗಿಸುವಂತೆ ಮಾಡಬೇಕಾಗಿ ನಾನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ಸೌಳು ಭೂಮಿ ಸಾಕಷ್ಟು ಇದೆ. ಕಾರಣ ಡೋಣಿ ಹಾಗೂ ಹಳ್ಳಗಳಲ್ಲಿ ಹೂಳು ತೆಗೆಸಿ ಸೌಳು ಕಡಿಮೆಯಾಗುವಂತೆ ಮಾಡಿ ನಮಗೆ ಅನುಕೂಲ ಮಾಡಿಕೊಡಬೇಕಾಗಿ ನಾನು ಕೇಳಿ ಕೊಳ್ಳುತ್ತೇನೆ. ಇಷ್ಟು ಹೇಳಿ ನನಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅನುಮತಿಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† SRI D. B. KALMANKAR (Afzalpur).—Madam Speaker, I have gone through the whole report submitted by hon. Member Sri C. M. Armugham. He has also stated in his report that it is only representative in character and it was impossible for him to have undertaken more intensive tour of all the areas. He has tried his best to see places, he has seen people and things there. Now, one thing, I have to observe is that he has given only one side of the picture. He has stated that he saw only the dark scene of the situation. He has not commented on what things have been done by Government. There are so many things done. For example, in the matter of supply of foodgrains I think the Government has done very good work. If wheat were not to have reached in very village during the last three to four months, I think the situation would have been worse. I speak from my own experience in Afzalpur taluk and the arrangements made there were so nice that every village there received wheat and is still receiving it. There may be some stray instances where things might have gone wrong. But on the whole if you see the magnitude of the problem I think he should have appreciated the work done by Government in this behalf.

Similarly, I may say that in the past no work was done as has been done in this short span of seven to eight months. In every taluk the road work is done to the extent of six to seven hundred kilometers. It is only because of that the people could sustain and today we find the people happy. The road works are now almost over; murrum casing and other works have also come to an end. Now, we have to think in terms of more work because if this natural calamity that has fallen on that unfortunate area if it were to stay only for one or two months there is no botheration, but this is going to be there for the next eight to ten months more. Hence, the Government must come forward in a very systematic way with determination and prevail upon the Centre and see that more funds are made available. We all know what were the state of affairs as far as the Mysore State was concerned. The present Government had to start with almost a clean slate. There was heavy burden of overdrafts and legacies of the past

(SRI D. B. KALMANKAR)

and we had to inherit so many things with so much of defective machinery. With all that, the Government has tried to do its best for the people of famine affected districts. This has rightly been stated by Mr. Armughum himself in his report on page 74. He says :

> "It is unfortunate that the Mysore Government who became the legatee of these four districts after the States were reorganised should have done nothing worthwhile and allowed the drought to become almost an annual feature of these four districts."

So my submission is that it is not this Government which is to be blamed but it is the Government in the past which has committed criminal negligence knowingly well that these are chronically drought affected areas. Now, they are sitting in opposition and saying so many things against this Government which has got very short period at its disposal and is fighting againstall the calamities. But I want to ask what the previous Government has done to tesse areas ? Sri Veerendra Patil who was the Chief Minister hailing from that area what has he done to those areas ? Was it not possible for him to go in for more irrigation projects; more irrigation wells; more and more tanks, minor irrigation, lift irrigation schemes and all that ? He could have done it. Instead of throwing money to the doors of the contractors, brining up mansion like buildings guest houses, big hospitials, and spending on unproductive purposes the same could have been spent on irrigation works,

5-30 P.M.

That would have been a permanent solution. I want to ask what the past Government have done ? Mere criticizing this Government without any constructive approach is not going to solve the problem. I want to ask what constructive work the past Government has done ? Have they come forward to save the fellowmen who were in distress ? Have they come forward with fodder supply ? Have they come forward with supply of foodgrains ? Some rich people have got hundreds of quintals rice, jawar, etc , in their houses. Have they any human sympathy and have they tried to help people who are in distress ? It is not the Government alone that can solve the problem. The co-operation of one and all is required to solve the problem I want to know what they have done for the poor and have-nots ? It is easy to criticize sitting in an ivory tower. Sri Arumugham has stated in his report that voluntary organisations and philanthrophists must come forward to help. It is a calamity for one and all. Therefore it is the co-opera

tion of the people that is required in such a situation. The Government by itself cannot do it. It is also stated that piece-work contract is being given at the instance of the legislators. It is not correct. In every taluk there is a Relief Committee on which the Taluk Board President, the local M.L.A., some opposition members and representatives of the scheduled castes and scheduled tribes are there. They all sit together and decide, and I know that there is no politics in its The works are being carried out efficiently. I have como across with good Officers who are working day in and day out. It is not correct to say that officers are not discharging their responsibilities properly. We cannot make sweeping remarks. It was not humanly possible to give works to only 4 or 5 contractors on the list and do the work. The Government have been able to give employment to 15,000 to 20,000 people in every taluk. I know in Afzalpur taluk, about 15,000 to 20,000 people have been employed. Works have been distributed amongst many people., hundreds of people have taken up contract irrespective of the fact whether one belongs to the Ruling Party or the Opposition Party. In fact, the Syndicate people are dominating as contractors in many places. Even then, we have not discriminated.

Sri H. D. DEVE GOWDA.— Who are those contractors who belong to Syndicate Party? Will the Hon. Member kindly name them?

Sri D. B. KALMANKAR.—There are many, I will give a list, I know very well and I speak on facts, because I have worked there. I have received complaints from my own people that the same contractors are still there. The attitude today should be that we have to solve the problem of the people who are in distress. It is stated in the report that works should be done Departmentally. I would like to ask whether they are in a position to give staff so that the works may be done Departmentally? There is no sufficient staff as it is and it is not possible to take up the works Departmentally. It is very difficult to cope up with the magnitude of the work and therefore it is not possible to take up the works Departmentally. The only way left is to give work to village representatives who could come forward.

Sri H. D DEVE GOWDA.—Each Taluk Board has got two or three Supervisors and they can handle these works for the Government.

Sri D. B. KALMANKAR.— In my taluk, Afzalpur, the Taluk Board is doing the work. We want work to be done by every agency, and even small men who could be in a position to spend Rs. 4,000/- to Rs. 5,000/- and who have come forward have taken up the work. Thus the monopoly has been broken and the people are getting work within 5 kms. area. It is one thing to exaggerate and another thing to appreciate. There are some grounds of principle and there are some aspects on which the Hon. member Sri Arumugham has thrown light to understand the gravity of the situation. The past Govern-

(SRI D. B. KALMANKAR)

ment has left the present Government bankrupt, So, we cannot come to a conclusion that the work done by this Government is not enough in such a short time. In order that this unfortunate area should be permanently saved from drought in future, I request the Government to see that all possible tanks, lift irrigation projects and all possible medium irrigation projects such as Amarja, Benniture, Karanja, Mullamari, Bhima, and other projects are taken up because that is the only hope left for this unfortunate area. We must give all importance to these projects to solve the problem of unemployment of labourers and to make available water for the coming season.

About fodder supply, I submit that the Government has been doing good work and fodder is provided. To transport one lorry load of fodder, the Transportation charge is nearly Rs. 600/-. I suggest that arrangements be made to grow highbrid grass on the river side, where people, I understand, are ready to give their lands. If this is done, I am sure the problem of fodder will be solved to a great extent.

Sri Arumugham has stated in his report about the infirm and old people. I feel that they should be looked after by providing free food. Sri Aramugham has given some good suggestions in this regard, and follow-up action by the Government is necessary.

I am not for giving wages on attendance basis. It was stated that Maharashtra Government is adopting that method, where they have shown an expenditure of Rs. 15,000/- to Rs. 2[illegible],000/ per km. of work. I understand that officers are being suspended on that account. I do not want that such a system should be followed here. I know that some people are trying to see that these things should be done. We should know that it is public money that the Government is spending.

My only submission is that whoever that comes forward to undertake the work, he must be provided with work; arrangements must be mane for supply of water and food. Since we are required to sustain these people for the next 8–10 months, we have suggested the works to be undertaken by Government. With these words, I conclude my speech.

SRI DEVE GOWDA.— So far as these relief works are concerned, shall we say that everything done by Government is very good and shall we pass a resolution complementing the Government in this respect?

SRI D. B. KALMANKAR.—I only said that the opposition party has completely overlooked the work done by the Government and that they have only stressed about the inefficiency of the Government. I too agree that something more has to be done in view of the gravity of the situation that has developed which is unprecedented in the history of Mysore State.

†ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಮಾನ್ಯ ಅಧ್ಯಕ್ಷರೇ, ನಮಗೆ ಕೊಟ್ಟಿರತಕ್ಕ ಏಕ ಸದಸ್ಯರ ಸಮಿತಿ ವರದಿಯನ್ನು ನೋಡಿದರೆ ನಮ್ಮ ದೇಶದ ಕೆಲವು ಭಾಗಗಳಲ್ಲಿ ಈಚೆಗೆ ಬರಗಾಲಕ್ಕೆ ತುತ್ತಾಗಿರುವ ಸುಮಾರು ಮೂವತ್ತು ಲಕ್ಷ ಜನತೆಯ ಜೀವನ್ಮರಣದ ಪ್ರಶ್ನೆಯಾಗಿದೆ. ಈ ಪ್ರಶ್ನೆ ಬಹಳ ಗಂಭೀರವಾಗಿದೆ. ಈ ಒಂದು ವಿಷಯವನ್ನು ಇಂದು ಪರಿಶೀಲಿಸಲು ಎಲ್ಲ ಸದಸ್ಯರ ಅಭಿಪ್ರಾಯಗಳನ್ನೂ ಪಡೆಯಲು ಒಂದು ಸಮಿತಿ ಮಾಡಬೇಕೆಂದು ಇದ್ದರು. ಅನಂತರ ಒಬ್ಬರು ಸದಸ್ಯರು ಇದ್ದರೆ ಸಾಕು ಎಂದು ಒಬ್ಬ ಸದಸ್ಯರ ಒಂದು ಸಮಿತಿ ಏರ್ಪಾಡು ಮಾಡಿದರು. ಅದರಂತೆ ನಮ್ಮ ಮಾನ್ಯ ಸಭೆಯ ಸದಸ್ಯರಾದ ಶ್ರೀಮಾನ್ ಆರುಮುಗಂರವರ ಸಮಿತಿ ನೇಮಕ ಮಾಡಿದರು. ಅದರಂತೆ ಅವರು ಈ ಬರಗಾಲದ ಭಾಗಗಳಿಗೆ ಹೋಗಿ ಅಲ್ಲಿನ ಸ್ಥಿತಿಗತಿಗಳನ್ನು ಪೂರ್ಣವಾಗಿ ತಿಳಿದುಕೊಂಡು ನಮ್ಮ ಮುಂದೆ ಇಂತಹ ಒಂದು ವರದಿಯನ್ನು ಇಲ್ಲಿ ಮಂಡಿಸಿದ್ದಾರೆ. ಇವೊತ್ತು ನಮ್ಮ ರಾಜ್ಯದ ಹೆಸರನ್ನು ಕರ್ನಾಟಕ ಎಂದು ಮಾಡಬೇಕೆಂದು ಹೇಳಿ ಎಲ್ಲರೂ ಅಣ್ಣ ತಮ್ಮಂದಿರಾಗಿ ಬಾಳಬೇಕು ಎಂದು ಹೇಳುತ್ತಿದ್ದೇನೆ ಮತ್ತು ನಮಗೆ ಚರಿತ್ರೆಗಳನ್ನು ಓದಿದರೆ ಅದರಲ್ಲಿ ಎಲ್ಲರೂ ನ್ಯಾಯವಾಗಿ ಧರ್ಮದಿಂದ ಇರುತ್ತಿದ್ದರು. ಅಂತಹ ಚರಿತ್ರಾರ್ಹವಾದ ಈ ದೇಶದಲ್ಲಿ ಇಂದು ಬರಗಾಲ ಬಂದಿದೆ, ಮೊದಲು ಬರಗಾಲದ ಬಗ್ಗೆ ಇಲ್ಲಿ ಚರ್ಚೆ ನಡೆಸಬೇಕೆಂದು ಹೇಳಿಕೆ ಕೊಟ್ಟಾಗ ವಿರೋಧ ಪಕ್ಷದ ಸದಸ್ಯರು ಅದಕ್ಕೆ ಪ್ರತಿಭಟನೆ ವ್ಯಕ್ತಮಾಡಿದರು ಎಂದು ಅನಂತರ ಶ್ರೀ ಆರುಮುಗಂ ಸಮಿತಿ ನೇಮಕವಾಯಿತು, ಅವರು ನೋಡಿಕೊಂಡು ಬಂದ ನಂತರ ಬರಗಾಲದ ಚರ್ಚೆ ಮಾಡಬೇಕೆಂದು ಆಗ ನಿರ್ಧಾರ ವಾದುದರಿಂದ ಇಂದು ಆ ಸಮಿತಿಯವರ ವರದಿ ನಮ್ಮ ಮುಂದೆ ಬಂದಿದೆ. ಮಾನ್ಯ ಸಮಿತಿಯವರ ಕೊಟ್ಟಿರುವ ಹೇಳಿಕೆಗೂ ಸರಕಾರದವರು ಕೊಟ್ಟಿರುವ ಹೇಳಿಕೆಗೂ ಹೋಲಿಸಿ ನೋಡಿದರೆ ಇದರಲ್ಲಿ ಸತ್ಯಾಂಶಗಳು ಹೊರಬಿದ್ದಿವೆ ಎನ್ನುವುದು ನಮಗೆ ಕಾಣುತ್ತದೆ. ಸರ್ಕಾರ ತನ್ನ ಕೆಲಸಗಳನ್ನು ಮಾಡುವುದರಲ್ಲಿ ಲೋಪದೋಷಗಳಿವೆ ಎನ್ನುವುದನ್ನು ಇದರಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದು ಶ್ರೀ ಆರುಮುಗಂರವರು ಹೇಳಿದಂತೆ ಅವರ ಮೇಲೆ ಇದರ ಎಲ್ಲ ಜವಾಬುದಾರಿಯನ್ನು ಸರ್ಕಾರದವರು ಹೊರಿಸಿದ್ದಾರೆ. ಅವರು ಎಲ್ಲ ಜನ ಸಾಮಾನ್ಯರನ್ನು ಭೇಟಿ ಮಾಡಿ ಮತ್ತು ಇಲ್ಲಿ ಕಷ್ಟಕ್ಕೆ ಸಿಕ್ಕಿರುವ ಜನರಿಗೆ ಯಾವ ರೀತಿ ರಕ್ಷಣೆಗಳನ್ನು ಮಾಡಬೇಕು ಎನ್ನುವುದರ ಬಗೆ ಎಲ್ಲ ವಿವರಗಳನ್ನೂ ತೆಗೆದು ಕೊಂಡು ಬಂದಿದ್ದಾರೆ. ಅವರು ಹೇಳುವಂತೆ ಇಂತಹ ಕಷ್ಟಕ್ಕೊಳಗಾಗಿರುವ ಎಲ್ಲ ಜನರನ್ನೂ ರಕ್ಷಣೆ ಮಾಡುವುದು ನಮ್ಮ ಸಭೆಯಲ್ಲಿರುವ ಎಲ್ಲ ಸದಸ್ಯರ ಕರ್ತವ್ಯ. ಶ್ರೀಮಾನ್ ಕಲ್ಮಂಕರ್ ರವರು ಇಲ್ಲಿ ಮಾತನಾಡುತ್ತ ಹಿಂದೆ ಇದ್ದ ಶ್ರೀ ವೀರೇಂದ್ರಪಾಟೀಲ್ ಸರ್ಕಾರದವರು ಹೊಸ ಹೊಸ ಕಟ್ಟಡಗಳನ್ನು ಬೇಕಾದ ಹಾಗೆ ಕಟ್ಟಿಸಿದರು ಮತ್ತು ಈ ಸರ್ಕಾರ ಬಂದ ಮೇಲೆ ಹೊಸ ಮೈಸೂರಿನಲ್ಲಿ ಏನಾಯಿತು ಎಂದರೆ ಎಲ್ಲ ಅಧಿಕಾರಿಗಳೂ ಇಂತಹ ದೊಡ್ಡ ಕಟ್ಟಡಗಳನ್ನು ಕಟ್ಟುವುದಕ್ಕಾಗಿಯೇ ವೆಚ್ಚವಾಯಿತು, ಇಂತಹ ಕಟ್ಟಡಗಳನ್ನು ಉಪಯೋಗ ಮಾಡದೇ ಇದ್ದರೆ ಇವನ್ನು ಏಕೆ ಹರಾಜು ಮಾಡಬಾರದು ಎಂದು ಇಲ್ಲಿ ಹೇಳಿದರು.

ಇವೊತ್ತಿನ ದಿವಸ ನಮ್ಮ ದೇಶದಲ್ಲಿರುವ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಆಗುವಂತೆ ಮಾಡಲು ಕೇಂದ್ರ ಸರಕಾರವನ್ನು ಒಪ್ಪಿಸಿ ಮಾಡಿರುವುದು ವೀರೇಂದ್ರ ಪಾಟೀಲ್ ರವರ ಸರಕಾರವಲ್ಲವೇ ? ಇಂತಹ ನೀರಾವರಿ ಯೋಜನೆಗಳಿಗೆ ಕೇಂದ್ರದವರ ಅನುಮತಿಯನ್ನು ಪಡೆದಿರುವುದು ಅವರ ಸರಕಾರವಿದ್ದಾಗಲಲ್ಲವೇ ? ಇವನ್ನೆಲ್ಲಾ ಈ ಸಂದರ್ಭದಲ್ಲಿ ಹೇಳುವುದು ಸರಿಯಲ್ಲ. ಇವೊತ್ತಿನ ದಿವಸ ಎಲ್ಲ ಸದಸ್ಯರೂ ಸೇರಿಕೊಂಡು ನರಳುತ್ತಿರುವ ಜನಕ್ಕೆ ಅನ್ನ ಕೊಟ್ಟು ರಕ್ಷಿಸಬೇಕು. ಆದರೆ ಇದನ್ನು ಖಾಸಗಿಯವರಿಗೆ ಬಿಡದೇ ಸರಕಾರವೇ ಕೇಳಿದರೆ ಜನ ಕೊಡಿಸಿಕೊಡುತ್ತಿದ್ದರು ಎನ್ನುವುದನ್ನು ಸರಕಾರಕ್ಕೆ ಇಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ನಮ್ಮ ಸದಸ್ಯರು ಎಲ್ಲರೂ ಅಣ್ಣತಮ್ಮಂದಿರ ಹಾಗೆ ಭಿಕ್ಷೆ ಬೇಡಿ ಧಾನ್ಯಗಳು ಹಾಗೂ ದನಗಳಿಗೆ ಬೇಕಾಗುವ ಹುಲ್ಲು ಇತ್ಯಾದಿಗಳನ್ನು ಕೊಡಿಸಬಹುದು. ನಮ್ಮಲ್ಲಿ ಗೋವನ್ನು ಗೋಮಾತೆ ಎಂದು ಎಲ್ಲರೂ ಪೂಜಿಸುತ್ತಿಲ್ಲವೆ ? ಇಂತಹ ಪಶುಸಂಪತ್ತನ್ನು ಹಾಳಾಗದಂತೆ ನೋಡಬೇಕು. ಒಂದು ದೇಶದಲ್ಲಿ ಪಶುಸಂಪತ್ತು ಚೆನ್ನಾಗಿದ್ದರೆ ಆ ದೇಶಕ್ಕೆ ಒಳ್ಳೆಯದಾಗುತ್ತದೆ. ಇದನ್ನು ಯೋಚನೆ ಮಾಡಬೇಕಾದುದು ಎಲ್ಲರ ಕರ್ತವ್ಯ. ಇಂದು ದನಕರುಗಳ ಹಾನಿ ಹಾಗೂ ಜನರ ಪ್ರಾಣ ಹಾನಿಯಾಗುತ್ತಿದೆ, ನಮ್ಮ ಹಿಂದೂ ಸಂಸ್ಕೃತಿಯಲ್ಲಿ ನಾವು ದೇವರನ್ನು ನಂಬಿರುವ ಜನ ಮತ್ತು ಇದು ಸಾತ್ವಿಕ ನಂಬಿಕೆ ಇರದು, ಸತ್ಯ ಧರ್ಮ ಹಾಳಾಗುತ್ತಿರುವುದರಿಂದ ದೇಶದಲ್ಲಿ ಇಂತಹ ಬರಗಾಲ ಬಂದಿದೆ, ಏಳೆಂಟು ವರ್ಷಗಳಿಂದಲೂ ಅಲ್ಲಲ್ಲಿ ಬರಗಾಲ ಎಂದು ಬರುತಿತ್ತು. ಆದರೆ ಈ ಸಲ ಬಂದಿರುವ ಬರಗಾಲ ಬಹು ಭಯಂಕರವಾದ ರೀತಿಯಲ್ಲಿ ಬಂದಿದೆ. ಇದನ್ನು ಧರ್ಮದಿಂದ ಹಾಗೂ ಶಕ್ತಿಯಿಂದ ಎದುರಿಸಬೇಕಾಗಿದೆ. ಯಾವ ರೀತಿಯಿಂದ ಇದನ್ನು ಮಾಡತಕ್ಕದ್ದು ಎನ್ನುವುದು ಸರಕಾರದ ಕರ್ತವ್ಯ, ಬರಗಾಲಕ್ಕಾಗಿ ಕೆಲವು ಯೋಜನೆಗಳನ್ನು ಸರಕಾರ ಹಾಕಿಕೊಂಡಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಬಹಳ ಪ್ರಾಮುಖ್ಯವಾದ ನಮ್ಮ ಧರ್ಮವನ್ನು ಉಪದೇಶಿಸ ಬೇಡಿ. ಅಪೇಕ್ಷಿತವಾದ ಇಂತಹ ಸನ್ನಿವೇಶದಲ್ಲಿ ಮಾನ್ಯ ಸದಸ್ಯರು ಅವರ ಊರಿನಲ್ಲಿ ಗಣ್ಯರಾಗಿರುವುದರಿಂದ ಅವರ ಕಡೆಯಿಂದ ಸರಕಾರಕ್ಕೆ ಸ್ವಲ್ಪ ಹಣ ಕೊಡಿಸಿಕೊಡಬಹುದಾಗಿತ್ತಲ್ಲವೇ ? ಎಲ್ಲರೂ ಸೇರಿ ಸಹಾಯ ಮಾಡಬಹುದು ಎಂದು ಸರಕಾರದ ಕಡೆಯಿಂದ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ನಾವುಗಳೆಲ್ಲಾ ಸಹಾಯ ಮಾಡಬೇಕೆಂದು ಏರ್ಪಾಡು ಮಾಡಿಕೊಂಡಿದ್ದೆವು. ಆದರೆ ಈಚೆಗೆ ಮುಖ್ಯ ಮಂತ್ರಿಗಳ ಹೆಸರಿನಲ್ಲಿ ಒಂದು ಪ್ರಕಟಣೆ ಹೊರಡಿಸಿರುವಂತಹ ಕೌನ್ಸಿಲ್‌ಗೆ ನಾವು ಕಳುಹಿಸುವುದು ಸರಿಯಲ್ಲ ಎಂದು ನಿರ್ಧಾರಮಾಡಿದೆವು. ನಮಗೆ ಇಂತಹ ಖಾಸಗಿಯವರ ಸಹಾಯ ಬೇಡ. ನೇರವಾಗಿ ಡೆಪ್ಯೂಟಿ ಕಮಿಷನವರು ಇಲ್ಲವೇ, ತಹಶೀಲುದಾರರ ಮೂಲಕ ಒಂದು ಮನವಿ ಹೊರಡಿಸಿದ್ದರೆ ನಾವೆಲ್ಲರೂ ಎಲ್ಲಿಗನ್ನೂ ಭಿಕ್ಷೆ ಬೇಡಿ ಎಲ್ಲ ಹಳ್ಳಿಗಳಿಂದಲೂ ಶೇಖರಣೆ ಮಾಡಿ ಕಳುಹಿಸಬಹುದಾಗಿತ್ತು.

ಶ್ರೀ ಎನ್. ಹುಚ್ಚಮಾಸ್ತಿಗೌಡ— ದಾನ ಮಾಡುವುದಕ್ಕೆ ನಮ್ಮ ಹುಕುಂ ಏತಕ್ಕೆ ಬೇಕು ?

ಶ್ರೀ ಟಿ. ಎಂ. ಮಂಜುನಾಥ್.— ಹಾಗಲ್ಲ. ನಾವು ಇಂತಹ ಕೆಲಸಗಳನ್ನು ಮಾಡುವಾಗ ಜವಾಬುದಾರಿಯಿಂದ ಮಾಡಬೇಕಾಗುತ್ತದೆ ಶ್ರೀ ಆರುಮುಗಂ ವರದಿ ಪ್ರಕಾರ ಶೇಕಡ ಐದರಷ್ಟು ಜನರಿಗೆ ಕೂಡ ಕೆಲಸಗನ್ನು ಕೊಡಲು ಆಗಲಿಲ್ಲ ಎಂದು ಹೇಳಿದ್ದಾರೆ. ಇದಕ್ಕಾಗಿ ಸರಕಾರದಲ್ಲಿ ನಾನು ಕಳಕಳಿಯಿಂದ ಕೇಳುವುದು ಜನರಿಗೆ ಎಲ್ಲ ಕಡೆಗಳಲ್ಲಿಯೂ ಇನ್ನೂ ಹೆಚ್ಚಾಗಿ ಒದಗಿಸಿಕೊಡಬೇಕು. ಈ ವರದಿಯಲ್ಲಿರುವಂತೆ ಇಲ್ಲಿನ ಅಧಿಕಾರಿಗಳು ಸಹಕರಿಸುತ್ತಿಲ್ಲ. ಈ ಸಂದರ್ಭದಲ್ಲಿ ಸರಕಾರಕ್ಕೆ ನಾನು ಸಲಹೆ ಮಾಡುವುದು ಸರಕಾರದ ಗೋಡೌನುಗಳಲ್ಲಿ ಕೆಲವೆಡೆ ಭತ್ತ ಹಾಗೂ ರವೆ ಹುಳ ಬಿದ್ದು ಮುಗ್ಗಿ ಹಾಳಾಗುತ್ತಿದೆ. ಇಂತಹ ಹೆಚ್ಚುವರಿ ದಾಸ್ತಾನನ್ನು ಇಂತಹ ಬರಗಾಲದ ಜಾಗಗಳಿಗೆ ಬೇಗನೆ ಕಳುಹಿಸಿದರೆ ಇಲ್ಲಿನ ಜನಕ್ಕೆ ಸ್ವಲ್ಪಮಟ್ಟಿನ ಅನುಕೂಲವಾಗುತ್ತದೆ. ಸರಕಾರ ಬರಗಾಲದ ಬಗ್ಗೆ ಸರಿಯಾಗಿ ಪ್ರಚಾರ ಮಾಡುತ್ತಿಲ್ಲ. ಇಂದು ಇಲ್ಲಿರುವ ಶ್ರೀಮಂತರು ಕೂಡ ಅವರಲ್ಲಿರುವ ದನಗಳನ್ನು ಮಾರಿದರೂ ಅವರೂ ಕೂಡ ಜೀವಂತರಾಗಿಲ್ಲ, ಸತ್ತ ಶವಗಳಂತೆ ಆಗಿದ್ದಾರೆ. ಸರಕಾರದವರು ಗಂಭೀರವಾಗಿ ಯೋಚನೆ ಮಾಡಿ ಇಂದು ಈ ಬರಗಾಲವನ್ನು ಹೋಗಲಾಡಿಸಬೇಕು, ಇದಕ್ಕೆ ಎಲ್ಲ ಮಾನ್ಯ ಸದಸ್ಯರು ಯಾವ ರೀತಿ ಇದಕ್ಕೆ ಪರಿಹಾರಗಳನ್ನು ಒದಗಿಸಬಹುದು ಎನ್ನುವುದರ ಬಗ್ಗೆ ವಿಚಾರಮಾಡುವುದು ಅವಶ್ಯವಾಗಿದೆ, ನಾನು ಕಳಕಳಿಯಿಂದ ಸರಕಾರಕ್ಕೆ ಹೇಳುವುದು ಇಷ್ಟೇ ? ಎಲ್ಲೆಲ್ಲಿ ಆಡಳಿತ ಪಕ್ಷದ ಸದಸ್ಯರ ಕ್ಷೇತ್ರಗಳಿರುತ್ತವೆಯೋ ಅಲ್ಲಿ ಸ್ವಲ್ಪಮಟ್ಟಿನ ಬಾವಿ ಹಾಗೂ ಇತರ ಕೆಲಸಗಳಾಗುತ್ತಿವೆ. ಇತರ ಕಡೆಗಳಲ್ಲಿ ಹೆಚ್ಚಾಗಿ ಬಾವಿ ಇನ್ನಿತರ ಕೆಲಸಗಳು ಆಗುತ್ತಿಲ್ಲ. ಅಧಿಕಾರಿಗಳು ತ್ವರಿತವಾಗಿ ಕೊಡಬೇಕಾದ/ಸಹಾಯಗಳನ್ನು ತ್ವರಿತವಾಗಿ ಕೊಡುತ್ತಿಲ್ಲ. ಇದರ ಬಗ್ಗೆ ನಾನು ಯಾರನ್ನೂ ಇಲ್ಲಿ ಆಕ್ಷೇಪಣೆ ಮಾಡಲು ಹೋಗುವುದಿಲ್ಲ. ಇಲ್ಲಿನ ಕೆಲಸಗಳು ವಾರ್ ಫುಟಿಂಗ್ ಮೇಲೆ ನಡೆಯಬೇಕು, ಇಲ್ಲಿ ಯಾವ ವೇಗದಲ್ಲಿ ಕೆಲಸಗಳು ನಡೆಯಬೇಕೋ ಆ ರೀತಿ ಆಗುತ್ತಿಲ್ಲ.

ಒಂದು ಉದಾಹರಣೆ ಹೇಳುವುದಾದರೆ, ಮೊನ್ನೆ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ ನಡೆಯಿತು. ಅದರ ಸಂಭ್ರಮವನ್ನು ಹೇಳತೀರದು. ಅದೇ ಅಭಿಮಾನ, ಸಂಭ್ರಮ ಜನತೆಗೆ ಸಹಾಯ ಮಾಡುವುದರಲ್ಲಿ ಇರಬೇಕು ಎಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ವಿ. ಮುನಿಸ್ವಾಮಿ (ಮಾಲೂರು).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಎರಡು ದಿವಸಗಳಿಂದ ಕ್ಷಾಮ ಪರಿಹಾರದ ವಿಚಾರವಾಗಿ ಸನ್ಮಾನ್ಯ ಸದಸ್ಯರು ಹೇಳಿದ ಬಹಳ ವಿಚಾರಗಳನ್ನು ಕೇಳಿದ್ದೇನೆ. ಅವರು ಹೇಳಿದ ಸಲಹೆಗಳೆಲ್ಲ ತಾತ್ಕಾಲಿಕ ಪರಿಹಾರೋಪಾಯಗಳನ್ನು ಹೇಳಿದ್ದಾರೆಂದು ನಾನು ತಿಳಿಸಬೇಕಾಗುತ್ತದೆ. ಕ್ಷಾಮ ಎನ್ನುವುದರ ಅರ್ಥವೇ ಮಾಡಿಕೊಂಡ ಹಾಗೆ ಇಲ್ಲ. ಕ್ಷಾಮ ಹೇಗೆ ಬಂತು, ಕ್ಷಾಮ ನಿವಾರಣೆ ಹೇಗೆ ಮಾಡಬೇಕು ಎಂದು ಅವರು ವಿವೇಚನೆ ಮಾಡಿಲ್ಲ. ಕ್ಷಾಮ ಎನ್ನುವುದು ಕೆಲವರಿಗೆ ಗೊತ್ತಿಲ್ಲ. ಕ್ಷಾಮ ಅನುಭವಿಸುವವರು ನೂರಾರು ಮೈಲಿ ದೂರದಲ್ಲಿದ್ದಾರೆ. ಕೆರೆಗಳನ್ನು ಕಟ್ಟಬೇಕು, ಪ್ರಾಜೆಕ್ಟ್‌ಗಳಾಗಬೇಕು. ರಸ್ತೆಗಳನ್ನು ಮಾಡಬೇಕು ಎಂದು ಹೇಳುತ್ತಿದ್ದಾರೆ. ಕೆರೆಗಳನ್ನು ಕಟ್ಟಬೇಕು ಎಂದರೆ ಅಲ್ಲಿ ಬೇಕಾದಷ್ಟು ಮಳೆ ಬರುತ್ತದೆಯೋ ನೀರು ಬರುತ್ತದೆಯೇ ಎಂದು ಕೇಳಬೇಕಾಗುತ್ತದೆ. ಕ್ಷಾಮ ಬಂದಿರುವುದು ಮಳೆ ಇಲ್ಲದೆ ಆದರೆ ಮಳೆ ಬರುವುದಕ್ಕೆ ಏನನ್ನೂ ಮಾಡಿಲ್ಲ. ರೋಗ ಬಂದ ಮೇಲೆ ಔಷಧಿ ಕೊಡುವ ರೀತಿ ಕೆಲಸ ನಡೆದಿದೆ. ರೋಗ ಬಂದ ಮೇಲೆ ಅದನ್ನು ಗುಣಪಡಿಸುವುದಕ್ಕಿಂತ ರೋಗ ಬರದಂತೆ ನೋಡಿಕೊಳ್ಳುವುದು ಒಳ್ಳೆಯದು ಎನ್ನುವುದನ್ನು ಅರ್ಥ ಮಾಡಿಕೊಂಡ ಹಾಗೆ ಕಾಣುವುದಿಲ್ಲ. ಮಳೆ ಇಲ್ಲದೆ ಕ್ಷಾಮ ಬಂದಿರುವಾಗ ಮಳೆ ಬರುವುದಕ್ಕೆ ಏನು ಮಾಡಬೇಕು ಎನ್ನುವ ವಿವೇಚನೆ ಇಲ್ಲ. ಸರ್ಕಾರ ಆ ಕೆಲಸ ಮಾಡಲಿಲ್ಲ, ಈ ಕೆಲಸ ಮಾಡಲಿಲ್ಲ ಎಂದು ದೂರುವವರು ಮಾತ್ರ ಇದ್ದಾರೆ.

ನಾನು ಬರುವ ಕೋಲಾರ ಜಿಲ್ಲೆ ರೈನ್ ಷ್ಯಾಡೋ ಏರಿಯಾ. ಆಗಾಗ ಅಲ್ಲಿ ಕ್ಷಾಮ ಬರುತ್ತದೆ. ಕ್ಷಾಮ ಬಂದಾಗ ಮಾಡುತ್ತಿರುವ ಕೆಲಸಗಳೆಲ್ಲ ತಾತ್ಕಾಲಿಕವಾದವು. ಮಳೆ ಬರಬೇಕಾದರೆ ಮರಗಳು ಇರಬೇಕು. ಮಲೆನಾಡಿನಲ್ಲಿ ಕೂಡ ಮರಗಳನ್ನೆಲ್ಲ ಕಡಿದು ಹಾಳು ಮಾಡಿದ್ದರಿಂದ ಮಳೆ ಬಾರದೆ ಹೋಗಿದೆ ಎಂದು ಕೆಲವು ಸದಸ್ಯರು ಹೇಳಿದ್ದಾರೆ ಬಿದರೆ, ಗುಲ್ಬರ್ಗ ಮುಂತಾದ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಬಂದು ಒಂದು ವರದಿಯನ್ನು ಕೊಟ್ಟಿರುವುದರಲ್ಲಿ ಈ ವಿಷಯವನ್ನು ಗಮನಿಸಿದ ಹಾಗೆಯೇ ಇಲ್ಲ. ಅಲ್ಲಿ ಐದು ಹತ್ತು ಮೈಲಿ ದೂರ ಹೋದರೂ ಒಂದು ಮರವಿಲ್ಲ. ನೂರು ವರ್ಷಗಳಿಂದ ಅಲ್ಲಿ ಕ್ಷಾಮ ಬರುತ್ತಿದೆ, ಅನುಭವಿಸುತ್ತಿದ್ದಾರೆಂದು ಹೇಳಿದರು. ನೂರು ವರ್ಷಗಳ ಹಿಂದೆ ಅಲ್ಲಿ ಆಲದ ಮರ, ಗೋಣಿ ಮರ ಇಂತಹ ಮರಗಳನ್ನು ನೆಟ್ಟಿದ್ದರೆ ಇಂದು ದನಕರುಗಳಿಗೆ ಸಾಕಾದಷ್ಟು ಸೊಪ್ಪು ಸಿಕ್ಕುತ್ತಿತ್ತು ಮತ್ತು ಮಳೆ ಕೂಡ ಬರುತ್ತಿತ್ತು. ಮರಗಳನ್ನು ಬೆಳೆಸಿದ್ದು, ಮಳೆ ಬಂದಿದ್ದರೆ ಅಲ್ಲಿಗೆ ಪ್ರಾಜೆಕ್ಟ್‌ಗಳು ಬೇಕಾಗಿರಲಿಲ್ಲ, ಸರ್ಕಾರದ ರಿಲೀಫ್ ಬೇಕಾಗಿರಲಿಲ್ಲ. ರೈತರು ಸುಖವಾಗಿ ಬೆಳೆ ಬೆಳೆದು ಕೊಳ್ಳುತ್ತಿದ್ದರು. ಅದರ ವಿಚಾರವಾಗಿ ಯಾರೂ ಮಾತನಾಡಲಿಲ್ಲ.

ಇನ್ನೊಂದು ವಿಚಾರವೇನೆಂದರೆ ಮರಗಳನ್ನು ಕಡಿದು ಹಾಳು ಮಾಡಿದ್ದರಿಂದ ಸೌದೆ ಸಿಕ್ಕುತ್ತಿಲ್ಲ. ಸಗಣಿಯನ್ನು ಗೊಬ್ಬರವಾಗಿ ಭೂಮಿಗೆ ಉಪಯೋಗ ಮಾಡುತ್ತಿದ್ದರು. ಸೌದೆ ಸಿಕ್ಕುವುದು ಕಷ್ಟವಾದಾಗ ಬೆರಣಿಯನ್ನು ಉರಿಸುವುದಕ್ಕೆ ಪ್ರಾರಂಭ ಮಾಡಿದರು. ಭೂಮಿಗೆ ಗೊಬ್ಬರವನ್ನು ಹಾಕಿದರೆ ಅಲ್ಪಸ್ವಲ್ಪ ಮಳೆಯಾದರೂ ಸ್ವಲ್ಪ ಬೆಳೆ ಬಂದು ಈ ಹೊತ್ತು ಬಂದಿರತಕ್ಕ ಪರಿಸ್ಥಿತಿ ಇರುತ್ತಿರಲಿಲ್ಲ. ಈಗಲಾದರೂ ಆ ಭಾಗದಲ್ಲಿ ಗಿಡಗಳನ್ನು ಹಾಕಿದರೆ ಕೆಲವು ವರ್ಷಗಳಲ್ಲಿ ಅವು ದೊಡ್ಡ ಮರಗಳಾಗಿ, ಅದರಿಂದ ಮಳೆಯಾದರೆ ಅಲ್ಲಿ ಯಾವ ಪರಿಹಾರವೂ ಬೇಕಾಗುವುದಿಲ್ಲ. ಆದ್ದರಿಂದ ನಾನು ಕೊಟ್ಟಂಥ ಸಲಹೆಯನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಆ ರೀತಿ ಮಾಡಬೇಕು ಎಂದು ಹೇಳುತ್ತೇನೆ.

ನಾನು ಕೆಲವು ಕಡೆ ಓಡಾಡಿದ್ದೇನೆ. ಅಲ್ಲಿ ಗಂಡಸರು ಸೋಮಾರಿಗಳಾಗಿ ಕುಳಿತಿರುತ್ತಾರೆ. ಹೆಂಗಸರು ದುಡಿದುಕೊಂಡು ಬಂದು ಗಂಡಸರಿಗೆ ಕುಡಿಯುವುದಕ್ಕೆ ಕೂಡ ದುಡ್ಡು ಕೊಡಬೇಕು. ಇದನ್ನು ಯಾರೂ ಗಮನಕ್ಕೆ ತೆಗೆದುಕೊಂಡ ಹಾಗೇ ಇಲ್ಲ.

ಈಗ ಬರೀ ತಾತ್ಕಾಲಿಕವಾದ ಕೆಲಸಗಳನ್ನು ಮಾಡದೆ ಮರಗಳನ್ನು ನೆಟ್ಟು, ಅವು ಚೆನ್ನಾಗಿ ಬೆಳೆಯುವ ಹಾಗೆ ಮಾಡಿ, ಸಗಣಿಯನ್ನು ಗೊಬ್ಬರವಾಗಿ ಉಪಯೋಗಿಸಿದರೆ ಶಾಶ್ವತವಾದ ಪರಿಹಾರವಾಗುತ್ತದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಸಮಯವಿಲ್ಲದೆ ಇರುವುದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ತಾತ್ಕಾಲಿಕ ಕ್ಷಾಮ ಪರಿಹಾರ ಮಾಡುವುದನ್ನು ಬಿಟ್ಟು ಶಾಶ್ವತವಾಗಿ ಕ್ಷಾಮ ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ, ಎಲ್ಲ ಸದಸ್ಯರಿಗೂ ಆ ವಿಚಾರಕ್ಕೆ ಹೆಚ್ಚಾಗಿ ಗಮನ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿನ ಮಾನ್ಯ ಶ್ರೀ ಆರ್ಮುಗಂ ಅವರು ಸಭೆಯ ಮುಂದೆ ಇಟ್ಟಿರತಕ್ಕ ಒಂದು ಹೇಳಿಕೆಯನ್ನು ಕುರಿತು ನಾನು ಮಾತನಾಡಬೇಕಾಗಿದೆ. ನಾನು ಆರ್ಮುಗಂ ಅವರನ್ನು ಈ ಸದನದ ವತಿಯಿಂದ ಅಭಿನಂದಿಸುತ್ತೇನೆ. ಆದರೆ ಈ ರಿಪೋರ್ಟನ್ನು ಓದಿದ ಯಾರಿಗಾದರೂ ಶ್ರೀ ಆರ್ಮುಗಂ ಅವರು ತಮ್ಮ ವಿರೋಧ ಪಕ್ಷದ ಕನ್ನಡಕವೇನಿದೆ ಅದನ್ನು ಬಿಟ್ಟು ಅಭಿಪ್ರಾಯ ವ್ಯಕ್ತಪಡಿಸಿಲ್ಲವೆಂದು ಗೊತ್ತಾಗುತ್ತದೆ. ಕಾರಣ ನಮ್ಮ ಸರ್ಕಾರ ಈ ಹೊತ್ತು ಗುಲ್ಬರ್ಗ, ಬಿದರೆ, ರಾಯಚೂರು ಈ ಮೂರು ಜಿಲ್ಲೆಗಳಲ್ಲಿ ಮಾಡಿರತಕ್ಕ ಶ್ರಮ, ಮಾಡಿರತಕ್ಕ ಖರ್ಚು ಅದನ್ನೆಲ್ಲ ಲೆಕ್ಕ ಹಾಕಿಕೊಳ್ಳುವುದಾದರೆ ಯಾವ ಕಾಲದಲ್ಲಿಯೂ ಯಾವ ಸರ್ಕಾರದಲ್ಲಿಯೂ ಕೂಡ ಇಷ್ಟೊಂದು ಕ್ಷಾಮ ಪರಿಹಾರ ಕೆಲಸಕಾರ್ಯಗಳನ್ನು ಮಾಡಿಲ್ಲ. ಅದನ್ನು ಶ್ರೀ ಆರ್ಮುಗಂ ಅವರು ಕಾಣುವುದನ್ನು ಬಿಟ್ಟು ಕೇವಲ ಟೀಕೆಗಳನ್ನು ಮಾತ್ರ ಮಾಡಿದ್ದಾರೆ. ಕೆಲವು ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಉದಾಹರಣೆಗೆ ಅವರು ಹೇಳಿರತಕ್ಕ ಎರಡು ರೊಟ್ಟಿ ಚಟ್ನಿ ಇಲ್ಲ, ಪಲ್ಯವಿಲ್ಲ ಎನ್ನುವ ಮಾತು ಮತ್ತು ಅವರು ಹೇಳಿರತಕ್ಕ ಎರಡು ಸಾವಿನ ಪರಿಸ್ಥಿತಿ ಇದನ್ನು ಗಮನಿಸಿದರೆ ಅವು ಸತ್ಯಕ್ಕೆ ದೂರವಾದ ಮಾತುಗಳು ಎನ್ನುವುದನ್ನು ಯಾರಾದರೂ ಬುದ್ಧಿ ಜೀವಿಗಳು ಅರ್ಥ ಮಾಡಿಕೊಳ್ಳುತ್ತಾರೆ. ಎರಡು ರೊಟ್ಟಿ ತಿನ್ನುವ ಜನ ದೇಶದಲ್ಲಿ ಎಲ್ಲ ಕಡೆಯೂ ಇದ್ದಾರೆ. ಬರಗಾಲವಿದ್ದ ಕಡೆ ಮಾತ್ರ ಅಂಥವರು ನಮಗೆ ಸಿಕ್ಕಬೇಕಾದ್ದಿಲ್ಲ. ಕೆಲವು ಕಡೆ ಇದು ಕೂಡ ಇರುವುದಿಲ್ಲ. ಎರಡು ರೊಟ್ಟಿ ತಿಂದುಕೊಂಡು, ಮುಂಡಕ್ಕಿ ತಿಂದುಕೊಂಡು ಇರುವಂಥ ಜನ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ ಹೋದರೂ ಸಿಕ್ಕುತಾರೆ ; ಬಿಜಾಪುರ, ರಾಯಚೂರು ಗುಲಬರ್ಗಕ್ಕೆ ಹೋಗಬೇಕಾದ್ದಿಲ್ಲ. ಅಥವಾ ಎರಡು ರೊಟ್ಟಿ ಮಾತ್ರ ತಿಂದರು ಎಂದು ಪ್ರಮುಖವಾಗಿ ಆಪಾದನೆ ಮಾಡುವಂಥ ವಿಚಾರವೂ ಅಲ್ಲ. ಇನ್ನು ಎರಡು ಸಾವಿನ ಬಗ್ಗೆ ಅವರು ಹೇಳಿದ್ದಾರೆ ಅದನ್ನು

(ಶ್ರೀ ಎಸ್. ಎಂ. ಶೀರನಾಳಿ)

ನಾವು ನೋಡುವುದಾದರೆ ಬಹಳ ವಿಚಿತ್ರವಾಗಿ ಕಾಣುತ್ತದೆ. ಮನೆಯಲ್ಲಿ ಆಹಾರವಿಲ್ಲದೆ ಮನೆಯ ಯಜಮಾನ ಸತ್ತ ಎಂದರೆ ಮನೆಯಲ್ಲಿ ಹೆಂಡತಿ, ಮಕ್ಕಳು ಹೇಗೆ ಜೀವಂತವಾಗಿ ಇದ್ದಾರೆ ಎನ್ನುವ ಪ್ರಶ್ನೆ ಬರುತ್ತದೆ. ಮನೆಯಲ್ಲಿ ಆಹಾರವಿಲ್ಲದೆ ಇರುವಾಗ ಹೆಂಡತಿ ಮಕ್ಕಳು ಪ್ರತಿಯೊಬ್ಬರೂ ಸಾಯಬೇಕು. ಮನೆಯ ಯಜಮಾನ ಉಪವಾಸವಿದ್ದು ಸತ್ತನೇ ಎನ್ನುವುದು ಯೋಚನೆ ಮಾಡಬೇಕಾದ ವಿಚಾರ. ಎಲ್ಲರೂ ಸುಖವಾಗಿ ಬದುಕಬೇಕು ಎಂದು ಹೇಳುವಾಗ ಆಪಾದನೆಗಳನ್ನು ಮಾಡುವಾಗ ಯೋಜನೆ ಮಾಡಿ ಆಪಾದನೆ ಮಾಡಬೇಕಾಗುತ್ತದೆ.

ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವು ಯಾವುದಾದರೂ ಒಪ್ಪತಕ್ಕ ವಿಷಯಗಳು. ಸೊಸೈಟಿಗಳಲ್ಲಿ ಆಹಾರದ ಹಂಚಿಕೆ ವಿಚಾರವನ್ನು ಅನೇಕ ಸಲ ನಾವೂ ಕೂಡ ಒಪ್ಪಿಕೊಂಡಿದ್ದೇವೆ ಬರಗಾಲ ಪರಿಸ್ಥಿತಿ ಇಲ್ಲದಿದ್ದರೂ ಸೊಸೈಟಿಗಳಲ್ಲಿ ಹೋದರೆ ಅಕ್ಕಿ ಇಲ್ಲ. ಗೋಧಿ ಇಲ್ಲ, ರಾಗಿ ಇಲ್ಲ ಎನ್ನುವಂಥ ಪರಿಸ್ಥಿತಿ ಇರುವುದನ್ನು ಕಂಡಿದ್ದೇವೆ ಇದು ಯೋಜನೆ ಮಾಡಬೇಕಾದ ವಿಚಾರ. ದೇವರು ವರ ಕೊಟ್ಟರೂ ಪೂಜಾರಿ ಕೊಡ ಎನ್ನುವಂತೆ ಸರ್ಕಾರದವರು ಎಲ್ಲ ಮಾಡಿರುತ್ತಾರೆ, ಆದರೆ ಅದರೆ ಅದನ್ನು ಕಾರ್ಯಗತ ಮಾಡತಕ್ಕವರು, ಕೆಳಗಿನ ಮಟ್ಟದಲ್ಲಿರುವ ಸಾಮಾನ್ಯ ಮನುಷ್ಯರು, ಅವರು ಕೂಡ ಅದರಲ್ಲಿ ಭಾಗಿಯಾಗಬೇಕು, ಅವನು ಸದ್ಬುದ್ಧಿಯಿಂದ ಇದು ಪರಮಾತ್ಮನ ಸೇವೆ ಎಂದು ಕೆಲಸ ಮಾಡತಕ್ಕ ಪ್ರವೃತ್ತಿ ಆತನಲ್ಲಿ ಬರಬೇಕು ಇದಕ್ಕೆ ಸರ್ಕಾರ ಏನೂ ಮಾಡುವುದಕ್ಕೆ ಆಗುವುದಿಲ್ಲ. ಕುದರೆಯನ್ನು ನೀರಿನ ಹತ್ತಿರ ನಿಲ್ಲಿಸಬಹುದು,........

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದೇವರು ವರ ಕೊಟ್ಟರೂ ಪೂಜಾರಿ ಕೊಡ ಎಂದು ಮಾನ್ಯ ಸದಸ್ಯರು ಹೇಳಿದರು. ಆ ಭಾಗದಲ್ಲಿ ಏನಾದರೂ ಸ್ಥಳೀಯ ಅಧಿಕಾರಿಗಳು ಸರ್ಕಾರ ಒದಗಿಸಿದಂಥ ಆಹಾರವನ್ನು ದುರುಪಯೋಗಮಾಡಿಕೊಂಡು ಜನಗಳಿಗೆ ಕೊಡದೆ ಇದ್ದಾರೆಯೇ ಎನ್ನುವುದನ್ನು ತಿಳಿಸಬೇಕು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ರಿಪೋರ್ಟಿನಲ್ಲಿರುವುದನ್ನು ನಾನು ಹೇಳುತ್ತಿದ್ದೇನೆ. ಸರ್ಕಾರ ಇದಕ್ಕೆ ಹೊಣೆಯಾಗುವುದಿಲ್ಲ.

ಬರಗಾಲದ ಬಗ್ಗೆ ನಾನು ಮಾತನಾಡಬೇಕಾದರೆ ನನ್ನ ಕ್ಷೇತ್ರದಲ್ಲಿ ಬರಗಾಲವಿಲ್ಲವೆಂದು ಕೆಲವರು ಹೇಳಬಹುದು. ನನ್ನ ಕ್ಷೇತ್ರ ಹೊಸನಗರವಾದರೂ, ಶಿವಮೊಗ್ಗ ತಾಲ್ಲೂಕಿನ ಕೆಲವು ಭಾಗಗಳು ನನ್ನ ಕ್ಷೇತ್ರಕ್ಕೆ ಸೇರಿವೆ. ಆ ಭಾಗದಲ್ಲಿ ಸುಮಾರು ೬೭ ಹಳ್ಳಿಗಳಲ್ಲಿ ೮–೧೦ ವರ್ಷಗಳಿಂದ ಮಳೆ ಬಾರದೆ ಆಗಾಗ ಅಭಾವ ಪರಿಸ್ಥಿತಿ ಇದ್ದು ಬರಗಾಲದ ವಿಚಾರ ನನಗೂ ಗೊತ್ತಿದೆ. ಕ್ಷಾಮ ಪರಿಹಾರಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನುವುದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ.

6–00 P.M.

ಈ ರಾಜ್ಯದಲ್ಲಿ ಬರಗಾಲ ಅನ್ನುವುದು ಈವೊತ್ತು ಬಂದದ್ದಲ್ಲ, ನಿನ್ನೆಯಿಂದ ಬಂದಿದ್ದಲ್ಲ. ಬಹಳ ವರ್ಷಗಳಿಂದಲೂ ಬಂದಂಥಾದ್ದು. ಮನೆ ಸುಟ್ಟ ಟೈಮಿನಲ್ಲಿ ನಾವು ನೀರು ತೆಗೆದುಕೊಂಡು ಹೋಗಿ ಬೆಂಕಿಯನ್ನು ಆರಿಸುವ ಹಾಗೆ ಆಗಿದೆ. ಇಂಥಾದ್ದಕ್ಕೆಲ್ಲಾ ಪೂರ್ವಯೋಜಿತ ಯೋಜನೆ ಹಾಕಿಕೊಂಡು ಸರ್ಕಾರ ಮುತುವರ್ಜಿಯಿಂದ ಕೆಲಸಮಾಡಬೇಕಾಗುತ್ತದೆ. ಅದಕ್ಕೆ ಒಂದು ಪ್ಲಾನ್ ಪ್ರೋಗ್ರಾಂ ಮಾಡಬೇಕು. ಈವೊತ್ತು ಏನಾಗಿದೆ ಎಂದರೆ ಈ ಪ್ಲಾನ್ ಪ್ರೋಗ್ರಾಂ ಇಟ್ಟುಕೊಳ್ಳಬೇಕಾದರೆ ಬರಗಾಲ ಬಂದಾಗ ಇಟ್ಟುಕೊಂಡರೆ ಅದರ ಅರ್ಧ ಸಮಸ್ಯೆಯನ್ನೂ ಕೂಡ ಬಗೆಹರಿಸುವುದಕ್ಕಾಗುವುದಿಲ್ಲ. ಬರಗಾಲ ಅಲ್ಲದೇ ಇರುವ ಸಮಯದಲ್ಲಿ ಪೂರ್ವ ಯೋಜಿತ ಪ್ಲಾನ್ ಮಾಡಿ, ಪ್ಲಾನ್ ಪ್ರೋಗ್ರಾಂನ್ನು ಇಟ್ಟುಕೊಳ್ಳ ಬೇಕು ಎಂದು ನನ್ನ ಭಾವನೆ. ನಿನ್ನೆ ಪತ್ರಿಕೆಯಲ್ಲಿ ಒಂದು ವಿಷಯವನ್ನು ಓದಿದೆ, ಇಂಡೋ ಚೈನಾದಲ್ಲಿ ಅಮೇರಿಕಾದವರು ಕೃತಕವಾಗಿ ಮಳೆ ಬರಿಸುವಂತೆ ಮಾಡುತ್ತಿದ್ದಾರೆ ಎಂದು. ಈವೊತ್ತಿನ ದಿವಸ ನಮ್ಮ ಅದೇಶದಲ್ಲಿ ಅಂಥಾದ್ದು ಏನಾದರೂ ಒಂದು ವೈಜ್ಞಾನಿಕ ಪರಿಸ್ಥಿತಿ ಬರುವುದಕ್ಕೆ ನಮಗೆ ಸಾಧ್ಯವೋ ಅನ್ನುವ ಕಾಲ ಸನ್ನಿಹಿತವಾಗಿದೆ.

ಇನ್ನು ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಶ್ರೀಮಾನ್ ಆರ್ಮುಗಂರವರು ಚೆನ್ನಾಗಿ ಹೇಳಿದ್ದಾರೆ. ಸರ್ಕಾರದವರು ಸಾಯಿಲ್ ಕನ್‌ಸರ್ವೇಷನ್ ಕೆಲಸ ಮಾಡುವುದಕ್ಕೆ ಯಾವ ಅಧಿಕಾರಿಗಳನ್ನು ಅಲ್ಲಿಗೆ ಹಾಕಿದರೂ ಕೂಡ ಈವೊತ್ತು ಹೋಗುವುದಿಲ್ಲ. ಇಂತಹ ಕಷ್ಟ ಕಾಲದಲ್ಲಿ ಸರ್ಕಾರಿ ನೌಕರರನ್ನು ಇಂತಹ ಪ್ರದೇಶಕ್ಕೆ ಹೋಗಬೇಕೆಂದು ನಮ್ಮ ಸರ್ಕಾರ ಆಜ್ಞೆ ಮಾಡಿದಾಗ ಆ ನೌಕರ ಹೋಗುವುದಿಲ್ಲ ಎಂದರೆ ಅವನನ್ನು ಏತಕ್ಕೆ ಕೆಲಸದಿಂದ ವಜಾ ಮಾಡಬಾರದು ? ಏತಕ್ಕೆ ಅವನನ್ನು ಸಸ್ಪೆನ್‌ಷನ್ ಮಾಡಬಾರದು ? ಇಂತಹ ಕಷ್ಟ ಕಾಲದಲ್ಲಿ ಆ ನೌಕರರನ್ನು ವರ್ಗ ಮಾಡಿದಾಗ ಹೋಗುವುದಿಲ್ಲ ಎಂದರೆ ಅವನನ್ನು ಸಸ್ಪೆನ್‌ಷನ್ ಮಾಡಬೇಕಾಗುತ್ತದೆ. ಈವೊತ್ತಿನ ದಿವಸ ಪ್ರತಿಯೊಂದು ಕಡೆಯೂ ಸಾಯಿಲ್ ಕನ್‌ಸರ್ವೇಷನ್ ಕೆಲಸ ಆಗಬೇಕು ಮತ್ತು ಪ್ರತಿಯೊಂದು ಹಳ್ಳಿಗೂ ಬೋರ್‌ವೆಲ್ ಹಾಕಬೇಕು. ಈ ಬಗ್ಗೆ ಸರಿಯಾಗಿ ವ್ಯವಸ್ಥೆ ಮಾಡಬೇಕೆಂದು ನಾನು ಪದೇ ಪದೇ ಹೇಳಿಕೊಂಡು ಬರುತ್ತಿದ್ದೇನೆ. ಪರದೇಶಗಳಲ್ಲಿ ಮಳೆಯನ್ನು ಕಾಯದೆ ನೀರಿನ ವ್ಯವಸ್ಥೆ ಮಾಡುತ್ತಾರೆ. ಅದೇರೀತಿ ಇಲ್ಲಿಯೂ ಕೂಡ ಮಳೆಯನ್ನು ನಿರೀಕ್ಷಿಸದೇ ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ಇಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಎಲ್ಲಿಯವರೆಗೆ ಮಾಡುವುದಿಲ್ಲವೋ ಅಲ್ಲಿಯವರೆಗೂ ಈ ಜನರಿಗೆ ಕಷ್ಟ ತಪ್ಪುವುದಿಲ್ಲ. ಈವೊತ್ತಿನ ದಿವಸ ಸರ್ಕಾರದವರು ಗುಲ್ಬರ್ಗ, ಬೀದರ್ ಮತ್ತು ರಾಯಚೂರು ಈ ಜಿಲ್ಲೆಗಳಲ್ಲಿ ಮಾಡಿರುವ ಕೆಲಸಗಳ ಬಗ್ಗೆ ನಾವು ಶಹಭಾಸ್‌ಗಿರಿ ಕೊಡಬೇಕು. ಗುಲ್ಬರ್ಗ, ಬೀದರ್ ಮತ್ತು ರಾಯಚೂರಿನ ನಮ್ಮ ಮಿತ್ರರುಗಳಿಗೆ ನಾನು ಹೇಳಬೇಕಾದರೆ ಸರ್ಕಾರದವರು ಎಲ್ಲಾ ಹಣವನ್ನೂ ಆ ಬರಗಾಲ ಪೀಡಿತ ಪ್ರದೇಶಕ್ಕೆ ಹಾಕುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ. ಈ ಹಣವನ್ನು ಅಲ್ಲಿಗೆ ಒದಗಿಸುತ್ತಾ ಇರುವುದರಿಂದ ಬೇರೆ ಕಡೆ ಇರುವ ಪ್ರಾಜೆಕ್ಟ್‌ಗಳು ಕೆಲಸ ಅರ್ಧಮರ್ಧ ಆಗಿವೆ. ಎಷ್ಟರಮಟ್ಟಿಗೆ ನಮ್ಮ ಸರ್ಕಾರ ಆ ಬರಗಾಲ ಪೀಡಿತ ಪ್ರದೇಶಗಳಿಗೆ ವರ್ಕ್ ಮಾಡುವುದಕ್ಕೆ ಮುತುವರ್ಜಿ ವಹಿಸಿದೆ ಎಂಬುದನ್ನು ನೋಡಿದರೆ ನಾವು ಅವರಿಗೆ ಶಹಭಾಸ್‌ಗಿರಿ ಕೊಡಬೇಕಾಗುತ್ತದೆ ಎಂದು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

CALLING ATTENTION TO MATTERS PUBLIC IMPORTANCE

(i) Re : Slow progress in relief works.

SRI B. PUTTASWAMAIAH (Ramanagaram).— I beg to call the attention of Hon. Minister for Revenue to the progress in relief works in the drought stricken areas in the State in general and Bangalore District in particular.

SRI N. HUTCHMASTHY GOWDA (Minister for Revenue).—. I State as follows.—

SRI. N. HUCHAMASTHY GOWDA. (Minister for Revenue) No area in the State has been declared as 'Famine Area' in pursuance of any Famine Code or Searcity Manual. Relief operations are however, being taken up in the areas wherever there were reports of adverse seasonal conditions and in the opinion of the Deputy Commissioners of the districts concerned, taking up of such relief works is necessary in the affected areas. During the Current year 131 taluks in 16 districts of the State have been identified as scarcity stricken areas for purpose of taking up relief measures.

Government have taken up necessary action to afford necessary relief in the scarcity affected areas of the State. So far, an allotment of Rs. 12.23 crores has been released for relief measures, against which